ವಿಷಯಾನುಕ್ರಮಣಿಕೆ

ಅಧ್ಯಾತ್ಮಗ್ರಂಥಾವಳಿ

# ಸಂಸ್ಕೃತಪ್ರಥಮಪುಸ್ತಕಮ್

ಬರೆದವರು :
**ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**
(ಪೂರ್ವಾಶ್ರಮದ ವೈ. ಸುಬ್ಬರಾವ್)

ಸಂಪಾದಕ :
**ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ**

ಕ್ರಮಾಂಕ ೨೦೦

ಪ್ರಕಾಶಕರು :
**ಅಧ್ಯಾತ್ಮಪ್ರಕಾಶಕಾರ್ಯಾಲಯ,**
ಹೊಳೆನರಸೀಪುರ : 573211
2000

# ಮುನ್ನುಡಿ

ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ತಮ್ಮ ಪೂರ್ವಾಶ್ರಮದಲ್ಲಿ 1934ರಲ್ಲಿ ಬೆಂಗಳೂರಿನಲ್ಲಿ ಮಾಧ್ಯಮಿಕಶಾಲಾ ಉಪಾಧ್ಯಾಯರಾಗಿದ್ದಾಗಲೇ ಈ ಗ್ರಂಥವನ್ನು ಬರೆದು ಪ್ರಕಾಶಗೊಳಿಸಿದ್ದರು. ಕಾರಣಾಂತರಗಳಿಂದ ಬಹಳಕಾಲ ಈ ಅಮೂಲ್ಯಪುಸ್ತಕವನ್ನು ಪುನರ್ಮುದ್ರಣ ಮಾಡಿಸಲು ಸಾಧ್ಯವಾಗಿರಲಿಲ್ಲ. ಪುನಃ 1993ರಲ್ಲಿ **ಸೀತಮ್ಮ ಕೃಷ್ಣಮೂರ್ತಿ ಪಬ್ಲಿಕ್ ಛಾರಿಟಬಲ್ ಟ್ರಸ್ಟ್** ನವರ ಉದಾರಾಶ್ರ ಯದಿಂದ ಎರಡನೆಯ ಬಾರಿಗೆ ಪುಸ್ತಕಗಳನ್ನು ಮುದ್ರಿಸಲಾಗಿತ್ತು. ಈ ಪುಸ್ತಕಗಳೆಲ್ಲವೂ ಮಾರಾಟವಾಗಿಬಿಟ್ಟಿವೆ. ಈಗ ಸದ್ಗುರುಕೃಪೆಯಿಂದ ಹಾಗೂ ಸಂಸ್ಕೃತಭಾಷೆಯನ್ನು ಕಲಿಯಲು ಇಚ್ಛಿಸುತ್ತಿರುವ ವಾಚಕವೃಂದದ ಪ್ರೋತ್ಸಾಹದಿಂದ ಹೊಸ ಮುದ್ರಣವನ್ನು ಹೊರತರಲಾಗಿದೆ.

ಈ ಗ್ರಂಥದ ರಚನೆಯ ಉದ್ದೇಶ, ಅವಶ್ಯಕತೆ, ವೈಶಿಷ್ಟ್ಯಗಳನ್ನು ಗ್ರಂಥಕರ್ತರೇ ತಮ್ಮ ಪೀಠಿಕೆಯಲ್ಲಿ ತಿಳಿಸಿರುತ್ತಾರೆ. ಸಂಸ್ಕೃತಭಾಷೆಗೆ ಸಲ್ಲಬೇಕಾದ ಸ್ಥಾನಮಾನಗಳು, ಗೌರವಗಳ ಬಗ್ಗೆ ಈಗಲೂ ವಿದ್ವಾಂಸರುಗಳಲ್ಲಿಯೂ ರಾಷ್ಟ್ರಾಡಳಿತಗಾರರಲ್ಲಿಯೂ ಭಿನ್ನಾಭಿಪ್ರಾಯಗಳಿವೆ. ಪ್ರಾಂತೀಯಭಾಷೆಗಳ ಬೆಳವಣಿಗೆಯನ್ನೇ ಎತ್ತಿಹಿಡಿದು ಸಂಸ್ಕೃತದ ವಿಚಾರದಲ್ಲಿ ಔದಾಸೀನ್ಯವನ್ನು ತಾಳಿರುವಂಥವರೂ ಇದ್ದಾರೆ. ಹೇಗೇ ಆಗಲಿ, ಭಾರತದ ಪ್ರಾಂತೀಯ ಭಾಷೆಗಳೆಲ್ಲಕ್ಕೂ ಸಾಕುತಾಯಿಯಾಗಿರುವ ಈ ಭಾಷೆಯು ತನ್ನ ಪ್ರಭಾವದಿಂದಲೇ ಈವರೆಗೂ ಜೀವಂತವಾಗಿದ್ದು ಭಾರತ ಸಂಸ್ಕೃತಿಗೇ ಚೇತನವನ್ನು ನೀಡಿರುವದು ಎಲ್ಲರಿಗೂ ತಿಳಿದೇ ಇದೆ.

ಇಂಥ ಭಾಷೆಯ ಅಭ್ಯಾಸವನ್ನು ಸರಳಗೊಳಿಸಲು ಗ್ರಂಥಕರ್ತರು ಈ ಪುಸ್ತಕವನ್ನು ಕನ್ನಡಿಗರ ಉಪಯೋಗಕ್ಕಾಗಿ ಬರೆದಿದ್ದಾರೆ. ಮಹಾಜನರು ಈ ಗ್ರಂಥವನ್ನು ಬರಮಾಡಿಕೊಂಡು ಓದಿ ನಮ್ಮ ಗ್ರಂಥ ಪ್ರಕಟನಸೇವಾ ಕಾರ್ಯವನ್ನು ಮಾಮೂಲಿನಂತೆ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

-ಇತಿ-

**ಪ್ರಕಾಶಕರು.**

ವಿಕ್ರಮಸಂವತ್ಸರ,
ಮಾರ್ಗಶಿರ ಬಹುಳ ಅಷ್ಟಮಿ
ತಾ|| 18. 12. 2000

# ವಿಷಯಾನುಕ್ರಮಣಿಕೆ


| | ಪುಟಗಳು |
| --- | --- |
| ಮುನ್ನುಡಿ | iii |
| ಪೀಠಿಕೆ | iv |
| ಪಾಠಗಳು ೧ ರಿಂದ ೩೫ ಅರ್ಥಸಮೇತ | ೧-೪೯ |
| ಅಭ್ಯಾಸಗಳು (ಕನ್ನಡದಿಂದ ಸಂಸ್ಕೃತಾನುವಾದಮಾಡುವ ಬಗ್ಗೆ) | ೪೯-೫೩ |
| ನಾಮಪದದ ಶಬ್ದರೂಪಾವಳಿ | ೫೪-೬೧ |
| ಸರ್ವನಾಮಗಳ ರೂಪಾವಳಿ | ೬೨-೬೫ |
| ಸಂಖ್ಯಾವಾಚಕಗಳ ರೂಪಾವಳಿ | ೬೬ |
| ಕ್ರಿಯಾಪದದ ರೂಪಾವಳಿ | ೬೭-೬೯ |
| ಕೆಲವು ಮುಖ್ಯಸಂಧಿಗಳು | ೭೦-೭೨ |
| ಶಬ್ದಕೋಶ | ೭೩-೯೬ |


------

# ಪೀಠಿಕೆ

ಸಂಸ್ಕೃತವು ಭರತಖಂಡದ ಜನರಿಗೆಲ್ಲರಿಗೂ ಆದರಣೀಯವಾದ ಭಾಷೆ. ಇದರಲ್ಲಿ ನಮ್ಮ ಪೂರ್ವಮಹರ್ಷಿಗಳ ಮತ್ತು ಅವತಾರಪುರುಷರ ಇತಿಹಾಸವೂ ನಮಗೆ ಬೇಕಾಗಿರುವ ಧರ್ಮ, ಅರ್ಥ, ಕಾಮ, ಮೋಕ್ಷ -ಎಂಬ ನಾಲ್ಕು ಫಲಗಳ ವಿಚಾರಗಳೂ ಅಡಕವಾಗಿರುವವು. ಹಿಂದಿ, ಕನ್ನಡ - ಮುಂತಾದ ಪ್ರಾಂತಿಕ ಭಾಷೆಗಳಿಗೆಲ್ಲ ಮಾತೃಪ್ರಾಯವಾಗಿದ್ದು ಶಬ್ದಕೋಶವನ್ನೂ ವಿಷಯಸಂಪತ್ತನ್ನೂ ಒದಗಿಸಿಕೊಡುವ ಅಕ್ಷಯನಿಧಿಯೆಂದರೆ ಸಂಸ್ಕೃತವೇ. ಹೀಗಿರುವದರಿಂದ ನಮ್ಮ ದೇಶದ ಸಂಸ್ಕೃತಿಯನ್ನು ತಿಳಿಯಲಿಚ್ಛಿಸುವ ಪರದೇಶದವರು ಕೂಡ ಸಂಸ್ಕೃತವನ್ನೇ ಅಭ್ಯಾಸಮಾಡಿ, ಈ ಭಾಷೆಯಲ್ಲಿರುವ ಗ್ರಂಥಗಳನ್ನೇ ಓದಿ ತಮ್ಮ ದೇಶಭಾಷೆಗಳಿಗೂ ಪರಿವರ್ತನೆಮಾಡಿಕೊಳ್ಳುತ್ತಿರುವರು.

ಹೀಗೆ ಸ್ವಭಾವದಿಂದಲೇ ಪೂಜ್ಯವಾಗಿರುವ ಈ ಭಾಷೆಯನ್ನು ದೇಶಭಕ್ತರೂ ಪ್ರಾಚೀನಸಂಸ್ಕೃತಿಯ ಅಭಿಮಾನಿಗಳೂ ಅವಶ್ಯವಾಗಿ ಗೌರವಿಸಬೇಕಷ್ಟೆ. ಆದರೆ ಈ ಭಾಷೆಯನ್ನು ಸುಲಭವಾಗಿ ಕಲಿಯುವದಕ್ಕೆ ಅನುಕೂಲಿಸುವ ಪಾಠಾವಳಿಯೊಂದನ್ನು ನಿರ್ಮಿಸಿದ ಹೊರತು ಸಾಮಾನ್ಯಜನರಿಗೆ ಇದರಲ್ಲಿ ಪ್ರವೇಶವಾಗುವಹಾಗಿಲ್ಲ. ಇದನ್ನರಿತು ಸಂಸ್ಕೃತವನ್ನು ಓದುವವರಿಗೆ ರುಚಿಹುಟ್ಟುವ ಹಾಗೆ ವ್ಯಾವಹಾರಿಕ ವಿಷಯಗಳನ್ನೊಳಗೊಂಡ ಪಾಠಾವಳಿಯನ್ನು ಭರತಖಂಡದ ಉಳಿದ ಪ್ರಾಂತಿಕ ಭಾಷೆಯವರು ಏರ್ಪಡಿಸಿಕೊಳ್ಳುತ್ತಿರುವರು. ಇಂಥ ಸೌಕರ್ಯವು ಕನ್ನಡಿಗರಿಗೂ ಇರಬೇಕೆಂಬುದೇ ಈ ಗ್ರಂಥದ ಉದ್ದೇಶವು. ಬೇರೆಬೇರೆ ಪ್ರಾಂತ್ಯಗಳಲ್ಲಿ ಪ್ರಚಾರದಲ್ಲಿರುವ ಬಾಲಬೋಧೆಗಳನ್ನು ನೋಡಿ ಗುಣಾಂಶವನ್ನು ಸ್ವೀಕರಿಸಿ ಒಂದು ಹೊಸ ಪದ್ಧತಿಯನ್ನು ಅನುಸರಿಸಿ ಈ ಗ್ರಂಥವನ್ನು ಏರ್ಪಡಿಸಿರುತ್ತೇನೆ.

ಕೆಲವು ಶಬ್ದಗಳೂ ವಾಕ್ಯಗಳೂ ಬಂದಮೇಲೆಯೇ ವ್ಯಾಕರಣವನ್ನು ವಿದ್ಯಾರ್ಥಿಗಳು ಕಲಿಯುವದೇ ಸರಿಯಾದ ದಾರಿಯೆಂಬ ಅಭಿಪ್ರಾಯದಿಂದ ಈ ಪಾಠಾವಳಿಯನ್ನು ಬರೆದಿರುತ್ತದೆ. ಆದ್ದರಿಂದ ಇಲ್ಲಿ ವ್ಯಾಕರಣದ ನಿಯಮಗಳನ್ನು ಹೆಚ್ಚಾಗಿ ತಗಲಿಸಿಲ್ಲ ; ವಿಷಯದ ಕಡೆಗೇ ಲಕ್ಷ್ಯವಿಟ್ಟು ಮಾತುಗಳನ್ನು ಜೋಡಿಸಿರುತ್ತದೆ; ಮತ್ತೆಮತ್ತೆ ಅಭ್ಯಾಸದಿಂದ ಶಬ್ದರೂಪಗಳು ಅನಾಯಾಸವಾಗಿ ಓದುವವರ ಮನಸ್ಸಿನಲ್ಲಿ ನೆಡುವಂತೆ ಏರ್ಪಡಿಸಿರುತ್ತದೆ.

ಇಲ್ಲಿ ಪಾಠದ ಅಡಿಯಲ್ಲಿ ಮುಖ್ಯವಾದ ಸಂಧಿಗಳನ್ನು ಬಿಡಿಸಿ ತೋರಿಸಿರುತ್ತದೆ ; ಇದರಜೊತೆಗೆ ವಾಕ್ಯಗಳ ಅನ್ವಯವನ್ನೂ ಕೊಟ್ಟಿರುತ್ತದೆ. ಏಕೆಂದರೆ

ಸಂಸ್ಕೃತಗದ್ಯದ ವಾಕ್ಯಗಳಲ್ಲಿರುವ ಮಾತುಗಳು ಕನ್ನಡವಾಕ್ಯದ ಕ್ರಮದಲ್ಲಿಯೇ ಇರುವದಿಲ್ಲ ; ಪದ್ಯಗಳಲ್ಲಿಂತೂ ಆಗಾಗ ಅನ್ವಯಕ್ರಮವನ್ನು ತಿಳಿದುಕೊಳ್ಳುವದು ಅವಶ್ಯವಾಗಿಯೇ ಇರುವದು.

ವರ್ಣನೆ, ಸಂಭಾಷಣೆ, ಕಥೆ, ಕಾಗದ ಬರೆಯುವಿಕೆ - ಈ ರೂಪಗಳಲ್ಲಿ ಪಾಠಗಳನ್ನು ಕೊಟ್ಟಿರುತ್ತದೆ. ಅಲ್ಲಲ್ಲಿಗೆ ಕೆಲವು ಸುಲಭವಾದ ಪದ್ಯಗಳನ್ನೂ ಜೋಡಿಸಿರುತ್ತದೆ. ಈ ಪುಸ್ತಕವನ್ನು ಮುಗಿಸಿದವರಿಗೆ ತಿಳಿದಿರಬೇಕಾದ ಶಬ್ದಗಳನ್ನು ವಿಂಗಡಿಸಿ ಕೊನೆಯಲ್ಲಿರುವ ಶಬ್ದಕೋಶದಲ್ಲಿ ಸಂಗ್ರಹಿಸಿರುತ್ತದೆ. ಓದುಗರ ಶಬ್ದಭಂಡಾರವು ಈಗ ಎಷ್ಟರಮಟ್ಟಿಗೆ ಹಿಗ್ಗಿರುವದೆಂಬುದನ್ನು ಈ ಕೋಶದಿಂದ ಮನಗಾಣಬಹುದಾಗಿದೆ.

ಸಂಸ್ಕೃತದಲ್ಲಿ ಬರುವ ನಾಮಪದಕ್ರಿಯಾಪದಗಳ ರೂಪನಿಷ್ಪತ್ತಿಯ ಜ್ಞಾನವು ಎಷ್ಟೆಷ್ಟು ಉಂಟಾಗುವದೋ ಭಾಷೆಯಲ್ಲಿ ವ್ಯುತ್ಪತ್ತಿಯೂ ಅಷ್ಟಷ್ಟು ಅಡಚಣೆಯಿಲ್ಲದೆ ಆಗುವದು. ಆದ್ದರಿಂದ ಮುಖ್ಯವಾದ ಶಬ್ದಗಳ ರೂಪಾವಳಿಯನ್ನೂ ಈ ಪುಸ್ತಕದಲ್ಲಿ ಬರುವ ಕ್ರಿಯಾಪದಗಳ ರೂಪಾವಳಿಯನ್ನೂ ಪುಸ್ತಕದ ಕೊನೆಯಲ್ಲಿ ಕೊಟ್ಟಿರುತ್ತದೆ. ಪುಸ್ತಕದಲ್ಲಿ ಅರ್ಧಭಾಗವು ಮುಗಿಯುವ ಹೊತ್ತಿಗೆ ಈ ಶಬ್ದಗಳನ್ನು ಗಟ್ಟಿಮಾಡುವದಕ್ಕೆ ಮೊದಲು ಮಾಡಿ, ಪಾಠದಲ್ಲಿ ಬರುವ ಒಂದೆರಡು ಶಬ್ದಗಳನ್ನು ಮಾದರಿಯ ಶಬ್ದದಂತೆ ಎಲ್ಲಾ ವಿಭಕ್ತಿಗಳಲ್ಲಿಯೂ ನಡೆಯಿಸುವದರಿಂದ- ಪದಗಳ ಸ್ವರೂಪಜ್ಞಾನವು ಚೆನ್ನಾಗಿ ಉಂಟಾಗುವದು. ಕೆಲವು ಮುಖ್ಯಸಂಧಿಗಳನ್ನು ವಿಂಗಡಿಸಿ ಒಂದೊಂದಕ್ಕೆ ಅನೇಕ ಉದಾಹರಣೆಗಳನ್ನು ಕೊಟ್ಟಿರುತ್ತದೆ.

ಈ ಪುಸ್ತಕವನ್ನು ಓದುವಾಗ ನಡುನಡುವೆ ದೇವನಾಗರಿಯ ಅಕ್ಷರಾಭ್ಯಾಸವನ್ನೂ ವಿದ್ಯಾರ್ಥಿಗಳು ನಡೆಯಿಸಬೇಕು.

**ಬೆಂಗಳೂರು**

**1934**

ಇತಿ

**ಗ್ರಂಥಕರ್ತ**

|| ಓಮ್ ||

# ಸಂಸ್ಕೃತಪ್ರಥಮಪುಸ್ತಕಮ್

## ೧. ಪ್ರಥಮಪುಸ್ತಕಮ್

ಭಗವನ್, ನಮಸ್ತೇ[1] । ಭೋಃ, ಕಸ್ತ್ವಮ್ ?[2] ಅಹಮೇಕಶ್ಛಾತ್ರಃ[3] । ಕಿಂ ತೇ ನಾಮಧೇಯಮ್? ಅಹಂ ರಾಮಃ । ಕಿಂ ತೇ ವಯಃ ? ಅಹಂ ದಶವರ್ಷೋಽಸ್ಮಿ[4] । ಕೋಽಯಮ್[5] ? ಅಯಂ ಗೋವಿನ್ದಃ । ಅಯಂ ಮೇ ಸಖಾ । ತಸ್ಯ ವಯಃ ಕಿಯತ್? ಸ ಏಕಾದಶವರ್ಷಃ । ಕೋಽಸೌ ? ಅಯಂ ಮಮ ಮಿತ್ರಂ ಗೋಪಾಲಃ । ಸ ತ್ರಯೋದಶವರ್ಷಃ । ಕಿಂ ವಾಞ್ಛಥ ? ಸರ್ವೇ ವಯಂ ಸಂಸ್ಕೃತಭಾಷಾಂ ಶಿಕ್ಷಿತುಮಿಚ್ಛಾಮಃ । ಕಿಮೇವಮ್ ? ತರ್ಹಿ ಯುಷ್ಮಭ್ಯಮೇಕಂ ಪುಸ್ತಕಮ್ ದಾಸ್ಯಾಮಿ । ಇದಂ ಪ್ರಥಮಂ ಪುಸ್ತಕಮ್ । ಏನತ್ ಶ್ರದ್ಧಯಾ ಪಠತ । ಯುಷ್ಮಾನಹಂ ಶಿಕ್ಷಯಾಮಿ। ಶೀಘ್ರಮೇವ ಪಠಿತುಂ ಸಂಭಾಷಿತುಂ ಚ ಜ್ಞಾಸ್ಯಥ ॥

**ಭಾಷಾಸು ಮುಖ್ಯಾ ಮಧುರಾ ದಿವ್ಯಾ ಗೀರ್ವಾಣಭಾರತೀ ।[6]**

**ತಸ್ಯಾಂ ಹಿ ಕಾವ್ಯಂ ಮಧುರಂ ತಸ್ಮಾದಪಿ ಸುಭಾಷಿತಮ್ ॥**

## ೧. ಒಂದನೆಯ ಪುಸ್ತಕವು

ಪೂಜ್ಯನೆ, ನಿನಗೆ (ಪೂಜ್ಯರೆ), ನಮಸ್ಕಾರ. ಎಲೈ ಯಾರು ನೀನು ? ನಾನು ಒಬ್ಬ ವಿದ್ಯಾರ್ಥಿ. ನಿನ್ನ ಹೆಸರು ಏನು ? ನಾನು ರಾಮನು. ನಿನ್ನ ವಯಸ್ಸು ಏನು ? ನಾನು ಹತ್ತು ವರ್ಷದವನಾಗಿದ್ದೇನೆ (ನನಗೆ ಹತ್ತು ವರ್ಷ). ಯಾರಿವನು ? (ಇವನು ಯಾರು ?) ಇವನು ಗೋವಿಂದನು. ಇವನು ನನ್ನ ಗೆಳೆಯನು. ಅವನ ವಯಸ್ಸು

1. ನಮಃ-ತೇ ; ತೇ ನಮಃ- ಎಂದು ಅನ್ವಯ

2. ಕಃ-ತ್ವಮ್.

3. ಅಹಂ-ಏಕಃ-ಛಾತ್ರಃ.

4. ದಶವರ್ಷಃ- ಅಸ್ಮಿ. ''S'' ಈ ಗುರ್ತಿಗೆ ಅವಗ್ರಹಚಿಹ್ನೆ ಎಂದು ಹೆಸರು ಇದು ಇರುವ ಕಡೆಯಲ್ಲಿ ಅಕಾರವು ತನ್ನ ಹಿಂದಿನ ಏ ಓ ಕಾರಗಳಲ್ಲಿ ಸೇರಿಹೋಗಿರುವದೆಂದು ತಿಳಿಯಬೇಕು.

5. ಪ್ರಶ್ನಾರ್ಥವಾದ ಕಿಂಶಬ್ದವನ್ನು ವಾಕ್ಯದಲ್ಲಿ ಆದಷ್ಟು ಮೊದಲು ಉಪಯೋಗಿಸುವದೇ ರೂಢಿ; ''ಅಯಂ ಕಃ'' ಎಂಬ ಕ್ರಮದಲ್ಲಿ ವಾಕ್ಯವು ಬರುವ ರೂಡಿಯಿಲ್ಲ.

6. ಗೀರ್ವಾಣಭಾರತೀ ಭಾಷಾಸು ಮುಖ್ಯಾ, ಮಧುರಾ, ದಿವ್ಯಾ- ಎಂದು ಅನ್ವಯ.

ಎಷ್ಟು? ಅವನು ಹನ್ನೊಂದು ವರ್ಷದವನು ( ಅವನಿಗೆ ಹನ್ನೊಂದು ವರ್ಷ). ಅವನು ಯಾರು ? ಅವನು ನನ್ನ ಸ್ನೇಹಿತನಾದ ಗೋಪಾಲನು. ಅವನು ಹದಿಮೂರು ವರ್ಷದವನು (ಅವನಿಗೆ ಹದಿಮೂರು ವರ್ಷ.) ಏನನ್ನು ಅಪೇಕ್ಷಿಸುತ್ತೀರಿ (ನಿಮಗೆ ಏನು ಬೇಕು) ? ನಾವೆಲ್ಲರೂ ಸಂಸ್ಕೃತಭಾಷೆಯನ್ನು ಕಲಿಯುವದಕ್ಕೆ ಇಚ್ಛಿಸುತ್ತೇವೆ. ಏನು ಹೀಗೆ (ಹೀಗೇನು) ? ಹಾಗಾದರೆ ನಿಮಗೆ ಒಂದು ಪುಸ್ತಕವನ್ನು ಕೊಡುವೆನು. ಇದು ಒಂದನೆಯ ಪುಸ್ತಕವು. ಇದನ್ನು ಶ್ರದ್ಧೆಯಿಂದ ಓದಿರಿ. ನಿಮ್ಮನ್ನು (ನಿಮಗೆ) ನಾನು ಕಲಿಸಿಕೊಡುವೆನು. ಬೇಗನೆಯೇ ಓದುವದಕ್ಕೂ ಬರೆಯುವದಕ್ಕೂ ಮಾತನಾಡುವದಕ್ಕೂ ತಿಳಿದುಕೊಳ್ಳುವಿರಿ.

ಸಂಸ್ಕೃತಭಾಷೆಯು ಭಾಷೆಗಳಲ್ಲಿ ಮುಖ್ಯವಾದದ್ದು, ಸವಿಯಾದದ್ದು, ದಿವ್ಯವಾದದ್ದು ; ಅದರಲ್ಲಿ ಕಾವ್ಯವು ನಿಶ್ಚಯವಾಗಿ ಮಧುರವಾದದ್ದು ; ಅದಕ್ಕಿಂತಲೂ ಸುಭಾಷಿತವು (ಮಧುರವಾದದ್ದು).

## ೨. ದಶರಥಸ್ಯ ಕುಟುಮ್ಬಮ್

ಆಸೀತ್[1] ಕೋಸಲದೇಶೇ ದಶರಥೋ ನಾಮ ರಾಜಾ । ತಸ್ಯ ತಿಸ್ರೋ ಭಾರ್ಯಾ[2] ಆಸನ್ । ತಾಸು ತಸ್ಯ ಚತ್ವಾರಃ ಪುತ್ರಾ ಅಜಾಯನ್ತ । ಕೌಸಲ್ಯಾ ದಶರಥಸ್ಯ ಜ್ಯೇಷ್ಠಾ ಭಾರ್ಯಾ । ತಸ್ಯಾ ಆತ್ಮಜೋ ರಾಮಃ । ಸ ಏವ ದಶರಥಸ್ಯ ಜ್ಯೇಷ್ಠಃ ಪುತ್ರಃ । ಸ ಚ ರಾಮಃ ಸಕಲೈರಪಿ[3] ಗುಣೈರುಪೇತಃ ಪ್ರಿಯದರ್ಶನಶ್ಚಾಸೀತ್[4] । ಸುಮಿತ್ರಾ ಭೂಪತೇರ್ಮಧ್ಯಮಾ[5] ಭಾರ್ಯಾ । ತಸ್ಯಾ ಲಕ್ಷ್ಮಣಃ ಶತ್ರುಘ್ನಶ್ಚೇತಿ ದ್ವೌ ಸುತಾವಾಸ್ತಾಮ್[6] । ತಯೋರ್ಲಕ್ಷ್ಮಣೋ[7] ಜ್ಯಾಯಾನ್ । ಸ ಚ ಸರ್ವದಾ ರಾಮಮೇವಾನುಸರತಿ । ಶತ್ರುಘ್ನಃ ಕನೀಯಾನ್ । ಸ ತು ಕೈಕೇಯ್ಯಾಃ ಸುತಂ ಭರತಮೇವಾನುಗಚ್ಛತಿ ಸ್ಮ[8] । ಕೈಕೇಯೀ ಚ ರಾಜ್ಞಃ ಕನಿಷ್ಠಾ ಭಾರ್ಯಾ ॥

1. ಆಸೀತ್ ( ಉಂಟು ; ಇದಾನೆ, ಇದಾಳೆ, ಇದೆ) ಎಂಬ ಮಾತನ್ನು ವಾಕ್ಯದ ಮೊದಲಿನಲ್ಲಿ ಅಲಂಕಾರಕ್ಕೆ ಉಪಯೋಗಿಸುವರು.
2. ಭಾರ್ಯಾಃ - ಆಸನ್
3. ಸಕಲೈಃ - ಅಪಿ.
4. ಪ್ರಿಯದರ್ಶನಶ್ಚ - ಆಸೀತ್
5. ಭೂಪತೇಃ - ಮಧ್ಯಮಾ.
6. ಸುತೌ - ಆಸ್ತಾಮ್
7. ಲಕ್ಷ್ಮಣಃ - ಜ್ಯಾಯಾನ್.
8. **ವರ್ತಮಾನರೂಪದ ಕ್ರಿಯಾಪದಕ್ಕೆ 'ಸ್ಮ' ಎಂಬುದನ್ನು ಸೇರಿಸಿದರೆ ಭೂತಕಾಲದ ಅರ್ಥವನ್ನು ಕೊಡುತ್ತದೆ.** ಉದಾ : ಅನುಗಚ್ಛತಿ - ಹಿಂಬಾಲಿಸುತ್ತಾನೆ, ಅನುಗಚ್ಛತಿ ಸ್ಮ - ಹಿಂಬಾಲಿಸುತ್ತಿದ್ದನು.

ಅಗ್ರಜೇ ರಾಮೇ ಲಕ್ಷ್ಮಣಭರತಶತ್ರುಘ್ನಾಃ ಸರ್ವೇऽಪಿ ಸ್ನಿಹ್ಯನ್ತಿ । ಸೋऽಪ್ಯನುಜೇಷು ಸರ್ವೇಷ್ವಪಿ ವಾತ್ಸಲ್ಯಂ ಕರೋತಿ ॥

ಅರ್ಥಾಗಮೋ ನಿತ್ಯಮರೋಗಿತಾ ಚ
ಪ್ರಿಯಶ್ಚ ಭಾರ್ಯಾ ಪ್ರಿಯವಾದಿನೀ ಚ ।
ವಶ್ಯಶ್ಚ ಪುತ್ರೋऽರ್ಥಕರೀ ಚ ವಿದ್ಯಾ
ಷಡ್ ಜೀವಲೋಕಸ್ಯ ಸುಖಾನಿ ರಾಜನ್[1] ॥

## ೨. ದಶರಥನ ಕುಟುಂಬವು

ಕೋಸಲದೇಶದಲ್ಲಿ ದಶರಥನೆಂಬ ರಾಜನು ಇರುತ್ತಾನೆ (ಇದ್ದನು). ಅವನಿಗೆ ಮೂರು ಜನ ಹೆಂಡಿರು ಇದ್ದರು. ಅವರಲ್ಲಿ ಆತನಿಗೆ ನಾಲ್ಕು ಜನ ಗಂಡುಮಕ್ಕಳು ಹುಟ್ಟಿದರು. ಕೌಸಲ್ಯೆಯು ದಶರಥನ ಹಿರಿಯ ಹೆಂಡತಿ. ಆಕೆಯ ಮಗನು ರಾಮನು. ಅವನೇ ದಶರಥನ ಹಿರಿಯ ಮಗನು. ಮತ್ತು ಆ ರಾಮನು ಎಲ್ಲಾ ಗುಣಗಳಿಂದಲೂ ಕೂಡಿದವನೂ ನೋಡುವದಕ್ಕೆ ಸಂತೋಷವನ್ನುಂಟುಮಾಡುವವನೂ (ಸುಂದರನೂ) ಆಗಿದ್ದನು. ಸುಮಿತ್ರೆಯು ರಾಜನ ನಡುವಣ ಹೆಂಡತಿ. ಆಕೆಗೆ ಲಕ್ಷ್ಮಣನೆಂದೂ ಶತ್ರುಘ್ನನೆಂದೂ ಇಬ್ಬರು ಮಕ್ಕಳಿದ್ದರು. ಅವರಿಬ್ಬರಲ್ಲಿ ಲಕ್ಷ್ಮಣನು ಹಿರಿಯವನು ಮತ್ತು ಅವನು ಯಾವಾಗಲೂ ರಾಮನನ್ನೇ ಹಿಂಬಾಲಿಸುತ್ತಾನೆ (ಹಿಂಬಾಲಿಸುತ್ತಿದ್ದನು). ಶತ್ರುಘ್ನನು ಕಿರಿಯವನು. ಅವನಾದರೋ ಕೈಕೇಯಿಯ ಮಗನಾದ ಭರತನನ್ನೇ ಹಿಂಬಾಲಿಸುತ್ತಾನೆ (ಹಿಂಬಾಲಿಸುತ್ತಿದ್ದನು). ಮತ್ತು ಕೈಕೇಯಿಯು ದೊರೆಯ ಕಿರಿಯ ಹೆಂಡತಿ.

ಅಣ್ಣನಾದ ರಾಮನಲ್ಲಿ ಲಕ್ಷ್ಮಣ, ಭರತ, ಶತ್ರುಘ್ನ- ಇವರೆಲ್ಲರೂ ಪ್ರೀತಿಯುಳ್ಳವರಾಗಿರುತ್ತಾರೆ (ಪ್ರೀತಿಯುಳ್ಳವರಾಗಿದ್ದರು). ಅವನೂ ತಮ್ಮಂದಿರೆಲ್ಲರಲ್ಲಿಯೂ ಪ್ರೇಮವನ್ನು ಮಾಡುತ್ತಾನೆ (ಮಾಡುತ್ತಿದ್ದನು).

ಎಲೈ ರಾಜನೆ, ಹಣದ ಆದಾಯವೂ, ಯಾವಾಗಲೂ ಆರೋಗ್ಯವೂ (ಆರೋಗ್ಯದಿಂದಿರುವದೂ,) ಸ್ನೇಹಿತನೂ, ಒಳ್ಳೆಯ ಮಾತನ್ನಾಡುವ ಹೆಂಡತಿಯೂ, ಅಧೀನನಾದ (ಹೇಳಿದಂತೆ ಕೇಳುವ) ಮಗನೂ, ಪ್ರಯೋಜನಕರವಾದ ವಿದ್ಯೆಯೂ- (ಈ) ಆರು ಜೀವಲೋಕಕ್ಕೆ (ಮನುಷ್ಯರಿಗೆ) ಸುಖಗಳು.

1. ಇದು ಸಂಬೋಧನೆ ; ಅನ್ವಯಕ್ರಮದಲ್ಲಿ ಇದಕ್ಕೆ ಮೊದಲು ಅರ್ಥಹೇಳಿಕೊಳ್ಳಬೇಕು.

# ೩. ಲೇಖನಸಾಮಗ್ರೀ

ಅತ್ರ ರಾಮಃ ಪಠತಿ । ಅಹಂ ಲಿಖಾಮಿ । ಅಹಂ ಪಶ್ಚಾತ್ ಪಠಿಷ್ಯಾಮಿ । ತದಾ ರಾಮೋಽಪಿ ಲೇಖಿಷ್ಯತಿ । ಇಯಂ ಬೃಹತೀ ಪೇಟಿಕಾ । ಅಸ್ಯಾಂ ಕಿಂ ಕಿಮಸ್ತಿ ? ತತ್ರ ಪಠಿತುಂ ಪುಸ್ತಕಾನಿ ವಿದ್ಯನ್ತೇ । ಲೇಖಿತುಂ ಪತ್ರಾಣ್ಯಪಿ[1] ವಿದ್ಯನ್ತೇ । ಶೋಷಣಪತ್ರಾಣ್ಯಪಿ ಸನ್ತಿ । ಏಕತ್ರ ಸೀಸಕಲೇಖಿನ್ಯಃ, ಶಿಲಾ ಲೇಖಿನ್ಯಃ, ಖಟಿಕಾ, ಮಷೀಲೇಖಿನ್ಯಶ್ಚ ವರ್ತನ್ತೇ । ಅನ್ಯತ್ರ, ಶಿಲಾಫಲಕಾನಿ, ಪತ್ರಾಣಿ, ಪುಸ್ತಕಾನಿ, ಚ ವರ್ತನ್ತೇ । ಅತ್ರ ಛುರಿಕಾ ಕರ್ತರೀ ಸೀವನತನ್ತುಃ ಸೂಚೀ ಚ ವರ್ತನ್ತೇ ॥

ಏತದಾಸಿತುಂ ಪಾದಪೀಠಮ್ । ಇದಂ ಲೇಖನಪೀಠಮ್ । ಮಷೀಧಾನ್ಯಾಮುತ್ತಮಾ ಮಷೀ ವಿದ್ಯತೇ । ಅಧುನಾ ಲಿಖಾಮಿ । ಕಿಂ ಲಿಖಸಿ ? ಶೃಣು, ಪಠಾಮಿ । ಅದ್ಯಾಪ್ಯಕ್ಷರಾಣಿ ನ ಶುಷ್ಕಾಣಿ । ಆರ್ದ್ರಾಣ್ಯೇವ ಸನ್ತಿ । ಶೋಷಣಪತ್ರೇಣ ಶೋಷಯ । ಇಯಂ ಬಹುರಮಣೀಯಾ ಲಿಪಿಃ । ಮಮ ಭ್ರಾತಾ ಕೇವಲಂ ಶಿಲಾಫಲಕೇ ಶಿಲಾಲೇಖಿನ್ಯಾ ಲಿಖತಿ । ಅಹಂ ಸೀಸಕಲೇಖಿನ್ಯಾ ಪತ್ರೇ ಲೇಖಿತುಂ ಶಕ್ನೋಮಿ । ತ್ವಂ ತು ಮಷ್ಯಾಪಿ ಲೇಖಿತುಂ ಶಕ್ನೋಷಿ ॥

## ೩. ಬರಹದ ಸಾಮಗ್ರಿ

ಇಲ್ಲಿ ರಾಮನು ಓದುತ್ತಾನೆ. ನಾನು ಬರೆಯುತ್ತೇನೆ. ನಾನು ಆಮೇಲೆ ಓದುವೆನು. ಆಗ ರಾಮನೂ ಬರೆಯುವನು. ಇದು ದೊಡ್ಡ ಪೆಟ್ಟಿಗೆ. ಇದರಲ್ಲಿ ಏನೇನು ಇದೆ ? ಅಲ್ಲಿ ಓದುವದಕ್ಕೆ ಪುಸ್ತಕಗಳು ಇವೆ. ಬರೆಯುವದಕ್ಕೆ ಕಾಗದಗಳೂ ಇವೆ. ಆರಿಸುವ (ಒತ್ತುವ) ಕಾಗದಗಳೂ ಇವೆ. ಒಂದು ಕಡೆ ಸೀಸದ ಕಡ್ಡಿಗಳೂ ಬಳಪಗಳೂ ಸೀಮೆಯ ಸುಣ್ಣಗಳೂ ಮಷಿಯ ಲೇಖನಿಗಳೂ (ಕೂಡ) ಇವೆ. ಇನ್ನೊಂದು ಕಡೆ ಕಲ್ಲುಹಲಗೆಗಳೂ ಕಾಗದಗಳೂ ಪುಸ್ತಕಗಳೂ ಇವೆ. ಇಲ್ಲಿ ಚಾಕು, ಕತ್ತರಿ, ಹೊಲೆಯುವ ದಾರ ಮತ್ತು ಸೂಜಿ ಇವೆ.

ಇದು ಕೂತುಕೊಳ್ಳುವದಕ್ಕೆ ಕಾಲುಮಣೆ (ಸ್ಟೂಲು). ಇದು ಮೇಜು. ಮಸೀ ಕುಡಿಕೆಯಲ್ಲಿ ಒಳ್ಳೆಯ ಮಸಿ ಇದೆ. ಈಗ ಬರೆಯುತ್ತೇನೆ. ಏನು ಬರೆಯುತ್ತೀಯೆ ? ಕೇಳು, ಓದುತ್ತೇನೆ. ಇನ್ನೂ ಅಕ್ಷರಗಳು ಆರಿಲ್ಲ. ಹಸಿಯಾಗಿಯೇ ಇವೆ. ಒತ್ತುವ ಕಾಗದದಿಂದ ಆರಿಸು (ಒತ್ತು). ಇದು ಬಹು ಸೊಗಸಾದ ಬರಹ. ನನ್ನ ಸಹೋದರನು ಸ್ಲೇಟಿನಲ್ಲಿ ಬಳಪದಿಂದ ಮಾತ್ರ ಬರೆಯುತಾನೆ. ನಾನು

[1] ಪತ್ರಾಣಿ - ಅಪಿ

ಸೀಸದಕಡ್ಡಿಯಿಂದ ಕಾಗದದಲ್ಲಿ ಬರೆಯುವದಕ್ಕೆ ಶಕ್ತನಾಗಿದ್ದೇನೆ (ಬರೆಯಬಲ್ಲೆನು). ಆದರೆ ನೀನು ಮಸಿಯಿಂದಲೂ ಬರೆಯಲು ಶಕ್ತನಾಗಿದ್ದೀಯೆ (ಬರೆಯಬಲ್ಲೆ).

## ೪. ಬಾಲಾನಾಂ ಕ್ರೀಡಾ

ಏತೇ ಬಾಲಕಾಃ ಸಾನನ್ದಂ ಕ್ರೀಡನ್ತಿ । ಪಶ್ಯ, ಇದಾನೀಂ ಗೃಹದ್ವಾರಂ ಪಿದಧತಿ । ಅರ್ಗಲೇನ ಕವಾಟಂ ಬಧ್ನನ್ತಿ । ವಾತಾಯನಾನಿ ಸರ್ವಾಣ್ಯಪಿ ಸಮುದ್ಘಾಟಯನ್ತಿ । ಇದಾನೀಂ ಕಿಂ ಕುರ್ವನ್ತಿ ? ಕವಚಾನ್ ಶಿರಸ್ತ್ರಾಣಾನಿ ಚ ಧಾರಯನ್ತಿ । ಶಾಟೀಃ ಪರಿದಧತೇ । ಚೇಲಾನಿ ಕಣ್ಠೇ ಕುರ್ವನ್ತಿ । ಆದರ್ಶೇ ಮುಖಮವಲೋಕಯನ್ತಿ ॥

ಅಧುನಾ ಕ್ರೀಡಾ ಪ್ರವೃತ್ತಾ । ಏಕಂ ಕಮ್ಬಳಂ ಜವನಿಕಾಂ ಕುರ್ವನ್ತಿ । ಸರ್ವತ್ರ ಆಚ್ಛಾದಯನ್ತಿ । ಪಶ್ಯ, ಕೇಜಿದ್ಗಾಯನ್ತಿ ; ಕೇಚಿನ್ನೃತ್ಯನ್ತಿ ;[1] ಅನ್ಯೇ ತು ಸಞ್ಚರನ್ತಿ ; ಅಪರೇ ಪುನಸ್ತಿಷ್ಠನ್ತಿ ; ಹಸನ್ತಿ ಚ । ಅಹೋ ಖೇಲನಂ ಬಾಲಕಾನಾಮ್ । ರಾಮಸ್ತೂಷ್ಣೀಂ ಸ್ಥಲೇ ಉಪವಿಶತಿ । ಇತರೇ ಕೇಚಿತ್ ಪರಿತೋ ಭ್ರಮನ್ತಿ । ಕರತಾಲಂ ಕುರ್ವನ್ತಿ । ಅಟ್ಟಹಾಸಂ ಕುರ್ವನ್ತಿ ॥

ಅಯೇ ! ಕಶ್ಚನ ದ್ವಾರೇ ಸ್ಥಿತಃ । ದ್ವೌ ಲಘೂ ಬಾಲೌ ಸ್ಕನ್ಧೇ ವಹತಿ । ಅಯಂ ಬಲವಾನ್ । ಕೋಽಪಿ ಕವಾಟಮಾಹನ್ತಿ । ಬಾಲಾಃ ಸರ್ವೇ ಭೀತಾಃ । ಪಶ್ಯ, ನಿಷ್ಕುಟ ದ್ವಾರೇಣ ಪ್ರಧಾವಿತಾಃ ॥

### ೪. ಹುಡುಗರ ಆಟವು

ಈ ಹುಡುಗರು ಸಂತೋಷದಿಂದ ಆಡುತ್ತಿದಾರೆ. ನೋಡು ; ಈಗ ಮನೆಯ ಬಾಗಿಲನ್ನು ಮುಚ್ಚುತ್ತಾರೆ. ಅಗುಳಿಯಿಂದ ಕದವನ್ನು ಕಟ್ಟುತ್ತಾರೆ (ಭದ್ರಪಡಿಸುತ್ತಾರೆ). ಕಿಟಕಿಗಳೆಲ್ಲವನ್ನೂ ತೆಗೆದುಬಿಡುತ್ತಾರೆ. ಈಗ ಏನುಮಾಡುತ್ತಾರೆ ? ಅಂಗಿಗಳನ್ನೂ ಟೋಪಿಗಳನ್ನೂ ಹಾಕಿಕೊಳ್ಳುತ್ತಾರೆ. ಪಂಚೆಗಳನ್ನು ಉಟ್ಟುಕೊಳ್ಳುತ್ತಾರೆ. ಶಲ್ಯಗಳನ್ನು ಕುತ್ತಿಗೆಯಲ್ಲಿ ಮಾಡುತ್ತಾರೆ (ಹಾಕಿಕೊಳ್ಳುತ್ತಾರೆ). ಕನ್ನಡಿಯಲ್ಲಿ ಮುಖವನ್ನು ನೋಡಿಕೊಳ್ಳುತ್ತಾರೆ.

ಈಗ ಆಟವು ಮೊದಲಾಯಿತು. ಒಂದು ಕಂಬಳಿಯನ್ನು ತೆರೆಯನ್ನಾಗಿ ಮಾಡುತ್ತಾರೆ. ಎಲ್ಲಾ ಕಡೆಯಲ್ಲಿಯೂ ಮುಚ್ಚುತ್ತಾರೆ. ನೋಡು, ಕೆಲವರು ಹಾಡುತ್ತಾರೆ ; ಕೆಲವರು ಕುಣಿಯುತ್ತಾರೆ ; ಆದರೆ ಬೇರೆ ಕೆಲವರು ಓಡಾಡುತ್ತಾರೆ ; ಮತ್ತೆ

[1] ಕೇಚಿತ್ - ನೃತ್ಯನ್ತಿ

ಕೆಲವರಾದರೋ ನಿಂತುಕೊಂಡಿದ್ದಾರೆ ; ಮತ್ತೆ ನಗುತ್ತಿದ್ದಾರೆ. ಆಹಾ ! (ಏನು) ಆಟವು ಹುಡುಗರದು ! ರಾಮನು ಸುಮ್ಮನೆ ನೆಲದಲ್ಲಿ (ನೆಲದಮೇಲೆ) ಕೂತಿದ್ದಾನೆ ; ಉಳಿದವರು ಕೆಲವರು ಸುತ್ತಲೂ ಸುತ್ತುತ್ತಾರೆ. ಕೈಚಪ್ಪಾಳೆಮಾಡುತ್ತಾರೆ. (ಹಾಕುತ್ತಾರೆ). ಅಟ್ಟಹಾಸವನ್ನು ಮಾಡುತ್ತಾರೆ (ಗಟ್ಟಿಯಾಗಿ ನಗುತ್ತಾರೆ).

ಆಹಾ ! ಯಾರೋ ಬಾಗಿಲಲ್ಲಿ ನಿಂತನು. ಇಬ್ಬರು ಹಗುರವಾದ ಹುಡುಗರನ್ನು ಹೆಗಲಮೇಲೆ ಹೊರುತ್ತಾನೆ. ಇವನು ಶಕ್ತಿವಂತನು. ಯಾವನೋ ಕದವನ್ನು ತಟ್ಟುತ್ತಾನೆ. ಹುಡುಗರೆಲ್ಲರೂ ಹೆದರಿದರು. ನೋಡು, ಹಿತ್ತಿಲಬಾಗಿಲಿಂದ ಓಡಿದರು.

## ೫. ಪಾತ್ರದ್ವಯಸ್ಯ ಕಥಾ

ಕಾಚಿನ್ನದೀ ವೇಗೇನ ಪ್ರವಹತಿ ಸ್ಮ । ತಸ್ಯಾ ಓಘೇನ ದ್ವೇ ಪಾತ್ರೇ ನೀಯೇತೇ ತಯೋರೇಕೋ[2] ಮೃಣ್ಮಯೋ ಘಟಃ । ಅಪರಃ ಪಿತ್ತಲಕುಮ್ಭಃ ॥

ಪಿತ್ತಲಕುಮ್ಭೋ ಮೃದ್ಘಟಮುಪಾಗತ್ಯಾಹ : 'ಸಖೇ, ಕಿಂ ದೂರೇಣೈವ ಗಚ್ಛಸಿ? ಇತ ಏಹಿ । ಗೋಷ್ಠೀಸುಖಮನುಭವಾವಃ ॥'

ತತೋ ಘಟಃ ಪ್ರತ್ಯಾಹ : 'ಮಾ ಮೈವಮ್[3] । ದೂರತ ಏವ ಸರ । ಮಾಮೀಷದಪಿ ಸ್ಪೃಶಸಿ ಚೇತ್ ತತ ಏವಾಹಂ ಖಣ್ಡಶೋ ಭವೇಯಮ್ । ಅಪಿ ಚ ತವ ಸ್ನೇಹಂ ನೈವಾಹಂ ವಾಞ್ಛಾಮೀತಿ ॥

ದದಾತಿ ಪ್ರತಿಗೃಹ್ಣಾತಿ ಗುಹ್ಯಮಾಖ್ಯಾತಿ ಪೃಚ್ಛತಿ ।
ಭುಙ್ಕ್ತೇ ಭೋಜಯತೇ ಚೈವ[4] ಷಡ್ವಿಧಂ ಬನ್ಧುಲಕ್ಷಣಮ್

### ೫. ಎರಡು ಪಾತ್ರೆಗಳ ಕಥೆ

ಒಂದಾನೊಂದು ಹೊಳೆಯು ವೇಗದಿಂದ ಹರಿಯುತ್ತಿತ್ತು. ಅದರ ಪ್ರವಾಹದಿಂದ ಎರಡು ಪಾತ್ರೆಗಳು ಒಯ್ಯಲ್ಪಡುತ್ತವೆ (ಒಯ್ಯಲ್ಪಡುತ್ತಿದ್ದವು, ಕೊಚ್ಚಿಕೊಂಡು

1. ಕಥೆಗಳಲ್ಲಿ ಭೂತಕಾಲದ ಅರ್ಥದಲ್ಲಿ ವರ್ತಮಾನರೂಪಗಳನ್ನು ಬಹುವಾಗಿ ಉಪಯೋಗಿಸುವರು
2. ತಯೋಃ - ಏಕಃ. 3. ಮಾ-ಮಾ-ಏವಂ.
4. ಪದ್ಯದಲ್ಲಿ ಚೈವ (। ಚ - ಏವ) ಎಂಬುದು ಆಗಾಗ್ಗೆ ಬರುತ್ತಿರುವದು ; ಕೆಲವು ವೇಳೆ ಇಲ್ಲಿಯ 'ಏವ'ಕ್ಕೆ ಅರ್ಥವಿರುವದಿಲ್ಲ.

ಹೋಗುತ್ತಿದ್ದವು). ಅವುಗಳಲ್ಲಿ ಒಂದು ಮಣ್ಣಿನಿಂದ ಮಾಡಿದ ಗಡಿಗೆ.' ಇನ್ನೊಂದು ಹಿತ್ತಾಳೆಯ ಕೊಡವು.

ಹಿತ್ತಾಳೆಯ ಕೊಡವು ಮಣ್ಣಿನ ಗಡಿಗೆಯನ್ನು ಸಮೀಪಿಸಿ (ಗಡಿಗೆಯ ಹತ್ತಿರಕ್ಕೆ ಬಂದು) ಹೇಳುತ್ತದೆ (ಹೇಳಿದ್ದೇನೆಂದರೆ) ; 'ಗೆಳೆಯನೆ, ಏಕೆ ದೂರದಿಂದಲೇ ಹೋಗುತ್ತೀಯೆ ? ಇತ್ತ ಬಾ. ಒಟ್ಟಿಗಿರುವ ಸುಖವನ್ನು ಅನುಭವಿಸೋಣ (ಸುಖವಾಗಿ ಮಾತುಕಥೆ ಆಡಿಕೊಂಡಿರೋಣ).'

ಅನಂತರದಲ್ಲಿ ಗಡಿಗೆಯು ಉತ್ತರಕೊಡುತ್ತದೆ (ಉತ್ತರಕೊಟ್ಟಿದ್ದೇನೆಂದರೆ) : 'ಬೇಡ, ಹೀಗೆ ಬೇಡ (ಹೀಗೆ ಮಾಡಬೇಡ). ದೂರವೇ ಹೋಗು. ನನ್ನನ್ನು ಸ್ವಲ್ಪವಾದರೂ ಮುಟ್ಟುತ್ತೀಯಾದರೆ ಅದರಿಂದಲೇ (ನೀನು ಮುಟ್ಟಿದಮಾತ್ರಕ್ಕೆ) ನಾನು ಚೂರುಚೂರಾದೇನು. ಇದೂ ಅಲ್ಲದೆ ನಿನ್ನ ಸ್ನೇಹವನ್ನು ನಾನು ಬಯಸುವದೇ ಇಲ್ಲ (ನಿನ್ನ ಗೆಳೆತನವೂ ನನಗೆ ಬೇಡ)'.

ಕೊಡುತ್ತಾನೆ, ತೆಗೆದುಕೊಳ್ಳುತ್ತಾನೆ, ಗುಟ್ಟನ್ನು ಹೇಳುತ್ತಾನೆ, ಕೇಳುತ್ತಾನೆ, ಊಟಮಾಡುತ್ತಾನೆ ಮತ್ತು ಊಟಮಾಡಿಸುತ್ತಾನೆ - (ಹೀಗೆ) ಪ್ರೀತಿಯ ಲಕ್ಷಣವು ಆರು ಬಗೆ. (ತಾನು ಏನಾದರೂ ಕೊಡುವದು, ಸ್ನೇಹಿತನು ಕೊಟ್ಟಿದ್ದನ್ನು ತೆಗೆದುಕೊಳ್ಳುವದು ; ತನ್ನ ಗುಟ್ಟನ್ನು ಹೇಳುವದು, ಅವನ ಗುಟ್ಟನ್ನು ಕೇಳುವದು ; ಸ್ನೇಹಿತನಲ್ಲಿಗೆ ಊಟಕ್ಕೆ ಹೋಗುವದು, ಅವನನ್ನು ಊಟಕ್ಕೆ ಕರೆಯುವದು- ಇವು ಆರೂ ಗೆಳೆತನದ ಗುರುತುಗಳು.)

## ೬. ಗೃಹಮ್

ಇದಮಸ್ಮದ್ಗೃಹಮ್[1] । ಅತ್ರ ಚತ್ವಾರಃ ಕೋಷ್ಠಾಃ ಸನ್ತಿ । ಇದಂ ಮಹಾನಸಮ್ । ಏತದ್ಭೋಜನಾಗಾರಮ್[2] । ಅದೋ ದೇವತಾಗಾರಮ್ । ಏತತ್ತು ಶಯ್ಯಾಗಾರಮ್ । ಅಸ್ಮಿನ್ ಗೃಹೇ ಕೋಷ್ಠಾಗಾರಂ ನ ವಿದ್ಯತೇ । ಗೃಹೋಪಸ್ಕರಃ ಪ್ರಾಯಶಃ ಸರ್ವೋಽಪ್ಯಟ್ಟೇ ವರ್ತತೇ । ತತ್ರ ಪಙ್ಕ್ತಿಶೋ ಮಣಿಕಾ ವರ್ತನ್ತೇ । ತೇಷು ಚ ವ್ರೀಹಯೋ[3] ಮಾಷಾ ಮುದ್ಗಾಶ್ಚಣಕಾಃ[4] ಕುಲಿತ್ಥಾಃ ಕುಲ್ಮಾಷಾ ಆಢಕ್ಯೋ ನಿಷ್ಪಾವಾ ಅನ್ಯಾನಿ ಚ ಧಾನ್ಯಾನಿ ತೇಷಾಂ ದಾಲ್ಯಶ್ಚ ಸನ್ತಿ । ಗೋಧೂಮಪಿಷ್ಟಂ

---

1. ಇದಂ-ಅಸ್ಮದ್ಗೃಹಮ್. 2. ಏತತ್- ಭೋಜನಾಗಾರಮ್.

3. ಇಂಥ ಸಂದರ್ಭಗಳಲ್ಲಿ ಧಾನ್ಯಗಳ ಹೆಸರನ್ನು ರೂಢಿಯಾಗಿ ಬಹುವಚನದಲ್ಲಿ ಉಪಯೋಗಿಸುವರು.

4. ಮುದ್ಗಾಃ - ಚಣಕಾಃ.

ಗೋಧೂಮಚೂರ್ಣಂ ಪಾಕಸಮ್ಭಾರಃ ಪಾತ್ರಾಣಿ ಚ ಮಹಾನಸೇ ವಿದ್ಯನ್ತೇ । ಗೋಷ್ಠಂ ತು ಪೃಥಗೇವಾಸ್ತಿ । ಸಮೀಪೇ ಸ್ನಾನಗೃಹಮಪಿ ವರ್ತತೇ । ನಾತಿದೂರೇ ಅರಘಟ್ಟೇನ ಯುಕ್ತಾ ವಾಪೀ ವಿದ್ಯತೇ ॥

ಗೃಹಸ್ಯ ಪುರೋಭಾಗೇ ಅಙ್ಗಣಂ ನಾಸ್ತಿ । ದ್ವೇ ವಿತರ್ದೀ ತು ಸ್ತಃ । ಗೃಹಸ್ಯ ಪಶ್ಚಾಚ್ಚ[1] ನಿಷ್ಕುಟೋಽಸ್ತಿ । ಪುರತಃ ಪಶ್ಚಾಚ್ಚ ಕುಡ್ಯೇ ತ್ರಿಚತುರಾಣಿ ವಾತಾಯನಾನಿ ಸನ್ತಿ । ಪಟಲೇ ಕತಿಚಿದ್ಗವಾಕ್ಷಾ[2] ಅಪಿ ವಿದ್ಯನ್ತೇ । ತೇನ ಗೃಹೇ ಶುದ್ಧವಾಯುಃ ಸಞ್ಚರತಿ। ಸುಪರ್ಯಾಪ್ತ ಆಲೋಕಶ್ಚ ಲಭ್ಯತೇ ॥

## ೬. ಮನೆ

ಇದು ನಮ್ಮ ಮನೆ. ಇಲ್ಲಿ ನಾಲ್ಕು ಕೋಣೆಗಳು ಇವೆ. ಇದು ಅಡಿಗೆಯ ಮನೆ. ಇದು ಊಟದ ಮನೆ. ಇದು ದೇವರ ಮನೆ. ಆದರೆ ಇದು (ಇದಾದರೋ) ಮಲಗುವ ಮನೆ. ಈ ಮನೆಯಲ್ಲಿ ಉಗ್ರಾಣದ ಮನೆ ಇಲ್ಲ. ಮನೆಯ ಸಾಮಾನು ಬಹುಮಟ್ಟಿಗೆ ಎಲ್ಲವೂ ಅಟ್ಟದಲ್ಲಿ ಇರುತ್ತದೆ. ಇಲ್ಲಿ ಸಾಲಾಗಿ ಗುಡಾಣಗಳು ಇವೆ. ಅವುಗಳಲ್ಲಿ ಭತ್ತ, ಉದ್ದು, ಹೆಸರು, ಕಡಲೆ, ಹುರುಳಿ, ಅಲಸಂದಿ, ತೊಗರಿ, ಅವರೆ ಮತ್ತು ಇನ್ನೂ ಮಿಕ್ಕ ಧಾನ್ಯಗಳೂ ಅವುಗಳ ಬೇಳೆಗಳೂ ಇರುತ್ತವೆ. ಗೋಧಿಹಿಟ್ಟು, ಗೋಧಿರವೆ, ಅಡಿಗೆಯ ಸಾಮಾನು ಮತ್ತು ಪಾತ್ರೆಗಳು ಅಡಿಗೆಯ ಮನೆಯಲ್ಲಿರುತ್ತವೆ. ದನಗಳ ಕೊಟ್ಟಿಗೆಯಾದರೋ ಬೇರೆಯೇ ಇದೆ. ಹತ್ತಿರದಲ್ಲಿ ಸ್ನಾನದ ಮನೆಯೂ ಇದೆ. ಬಹುದೂರದಲ್ಲಲ್ಲದೆ (ಹತ್ತಿರದಲ್ಲಿಯೇ) ರಾಟೆಯಿಂದ ಕೂಡಿದ ಬಾವಿಯೂ ಇದೆ.

ಮನೆಯ ಮುಂದುಗಡೆಯಲ್ಲಿ ಅಂಗಳವಿಲ್ಲ. ಆದರೆ ಎರಡು ಜಗಲಿಗಳು ಇವೆ. ಮತ್ತು ಮನೆಯ ಹಿಂದುಗಡೆಯಲ್ಲಿ ಹಿತ್ತಲು ಇದೆ. ಮುಂದೂ ಹಿಂದೂ ಗೋಡೆಯಲ್ಲಿ ಮೂರುನಾಲ್ಕು ಕಿಟಕಿಗಳು ಇವೆ. ಮಾಳಿಗೆಯಲ್ಲಿ ಕೆಲವು ಗವಾಕ್ಷಗಳೂ ಇವೆ. ಅದರಿಂದ ಮನೆಯಲ್ಲಿ ಒಳ್ಳೆಯ ಗಾಳಿ ಓಡಾಡುತ್ತಿರುವದು. ಬೇಕಾದಷ್ಟು ಬೆಳಕೂ ಸಿಕ್ಕುತ್ತದೆ.

## ೭. ದಿವಸವಿಭಾಗಾಃ

ದಿವಸಸ್ಯ ಅಹೋ ರಾತ್ರಿರಿತಿ ಚ ದ್ವೌ ಮುಖ್ಯೌ ಭಾಗೌ । ಅಹ್ನಿ ಸೂರ್ಯಃ ಕಾರಣಮ್ । ಅತ ಏವ ಸೂರ್ಯಸ್ಯ ದಿವಾಕರ ಇತ್ಯಪಿ ನಾಮಧೇಯಂ ಭವತಿ ।

1. ಪಶ್ಚಾತ್ - ಚ. 2. ಕತಿಚಿತ್ - ಗವಾಕ್ಷಾಃ - ಅಪಿ.

ರಾತ್ರೌ ತು ಚನ್ದ್ರ ಏವ ಭಾತಿ, ನ ಕದಾಪಿ ಸೂರ್ಯಃ । ಅತಶ್ಚನ್ದ್ರಸ್ಯ ನಿಶಾಕರ ಇತಿ ನಾಮಾನ್ತರಮಪಿ ವರ್ತತೇ ॥

ಅಹ್ನಃ ಪ್ರಾರಮ್ಭಃ ಪ್ರಾತಃಕಾಲಃ । ತದಾನೀಂ ಸೂರ್ಯ ಉದೇತಿ । ಮಧ್ಯಾಹ್ನೇ ಸೂರ್ಯಃ ಶಿರಸ ಉಪರಿ ಗಗನಸ್ಯ ಮಧ್ಯೇ ತಪತಿ । ಮಧ್ಯಾಹ್ನಾತ್ ಪೂರ್ವಂ ಪೂರ್ವಾಹ್ಣಃ ; ಮಧ್ಯಾಹ್ನಾತ್ ಪರಂ ಅಪರಾಹ್ಣಃ । ಅಹ್ನೋಽನ್ತ್ಯೇ ಭಾಗೇ ಸೂರ್ಯೋಽಸ್ತಮೇತಿ । ಸ ಸಾಯಂಕಾಲಃ । ಏವಂ ಚಾಹ್ನಃ ಪಞ್ಚಭಾಗಾ ಭವನ್ತಿ ॥

ಸಾಯಂಕಾಲಾದನನ್ತರಂ ರಾತ್ರಿರ್ಭವತಿ । ತದಾ ಕದಾಚಿಚ್ಚನ್ದ್ರ ಉದೇತಿ ; ಕದಾಚಿತ್ತು ನೋದೇತಿ । ತದಾನೀಂ ನಕ್ಷತ್ರಾಣಿ ಕೇವಲಮಾವಿರ್ಭವನ್ತಿ । ರಾತ್ರೇರ್ಮಧ್ಯಭಾಗೋ ನಿಶೀಥಃ । ನಿಶಾಯಾ ಅನ್ತೇ ಚನ್ದ್ರೋಽಸ್ತಮೇತಿ ! ತತಃ ಶರ್ವರೀ ಪ್ರಭಾತಾ ಭವತಿ । ಅತಃ ಪರಂ ಪೂರ್ವಸ್ಯಾಂ ದಿಶ್ಯರುಣೋದಯೋ[1] ಭವತಿ॥

## ೭. ದಿವಸದ ವಿಭಾಗಗಳು

ದಿವಸಕ್ಕೆ ಹಗಲೆಂದೂ ರಾತ್ರಿಯೆಂದೂ ಎರಡು ಮುಖ್ಯಭಾಗಗಳು. ಹಗಲಿನಲ್ಲಿ (ಹಗಲಿಗೆ) ಸೂರ್ಯನು ಕಾರಣನು. ಆದ್ದರಿಂದಲೇ ಸೂರ್ಯನಿಗೆ 'ದಿವಾಕರ' (ಹಗಲನ್ನುಂಟುಮಾಡುವವನು)- ಎಂದೂ ಹೆಸರಾಗಿದೆ. ರಾತ್ರಿಯಲ್ಲಾದರೆ ಚಂದ್ರನೇ ಬೆಳಗುತ್ತಾನೆ. ಆದರೆ ಸೂರ್ಯನು ಎಂದೂ ಇಲ್ಲ (ಬೆಳಗುವದಿಲ್ಲ). ಆದ್ದರಿಂದ ಚಂದ್ರನಿಗೆ ನಿಶಾಕರ (ರಾತ್ರಿಯನ್ನು ಮಾಡುವವನು) ಎಂದು ಮತ್ತೊಂದು ಹೆಸರೂ ಉಂಟು.

ಹಗಲಿನ ಮೊದಲು ಪ್ರಾತಃಕಾಲ. ಆಗ ಸೂರ್ಯನು ಹುಟ್ಟುತ್ತಾನೆ. ಮಧ್ಯಾಹ್ನದಲ್ಲಿ ಸೂರ್ಯನು ತಲೆಯಮೇಲೆ ಆಕಾಶದ ನಡುವೆ ಸುಡುತ್ತಿರುತ್ತಾನೆ. ಮಧ್ಯಾಹ್ನಕ್ಕಿಂತ ಮೊದಲು ಪೂರ್ವಾಹ್ಣ ; ಮಧ್ಯಾಹ್ನದ ಮೇಲೆ ಅಪರಾಹ್ಣ. ಹಗಲಿನ ಕೊನೆಯ ಭಾಗದಲ್ಲಿ ಸೂರ್ಯನು ಅಸ್ತವಾಗು (ಮುಳುಗು)ತ್ತಾನೆ. ಅದು ಸಾಯಂಕಾಲ. ಹೀಗೆ (ಅಂತೂ) ಹಗಲಿಗೆ ಐದು ಭಾಗಗಳು ಆಗುತ್ತವೆ.

ಸಾಯಂಕಾಲದ ಮೇಲೆ ರಾತ್ರಿಯಾಗುತ್ತದೆ. ಆಗ ಕೆಲವು ವೇಳೆ ಚಂದ್ರನು ಹುಟ್ಟುತ್ತಾನೆ ; ಆದರೆ ಕೆಲವುವೇಳೆ ಹುಟ್ಟುವದಿಲ್ಲ ; ಆಗ ಬರಿಯ ನಕ್ಷತ್ರಗಳೇ ತೋರಿಕೊಳ್ಳುತ್ತವೆ. ರಾತ್ರಿಯ ಮಧ್ಯಭಾಗವು ಅರ್ಧರಾತ್ರೆ. ರಾತ್ರೆಯ ಕೊನೆಯಲ್ಲಿ

[1] ದಿಶಿ- ಅರುಣೋದಯಃ.

ಚಂದ್ರನು ಅಸ್ತನಾಗುತ್ತಾನೆ. ಆಗ ರಾತ್ರಿಯು ಬೆಳಗಾಗುತ್ತದೆ (ಬೆಳಕು ಹರಿಯುತ್ತದೆ). ಆಮೇಲೆ ಪೂರ್ವದಿಕ್ಕಿನಲ್ಲಿ ಅರುಣೋದಯವಾಗುತ್ತದೆ.

## ೮. ತಕ್ಷಕಸ್ಯ ಸ್ತೇನಸ್ಯ ಚ ಕಥಾ

ಅಸ್ತಿ ಕಲ್ಯಾಣಪುರ್ಯಾಂ ಕಶ್ಚಿತ್ತಕ್ಷಕಃ । ಸ ಕದಾಚಿತ್ ಕಾರ್ಯವಶಾದ್ ಬಹಿರ್ಗತಃ[1] । ಅತ್ರಾನ್ತರೇ ಸ್ಥೂಲಬುದ್ಧಿರ್ನಾಮ ಕಶ್ಚನ ಸ್ತೇನಸ್ತತ್ರಾಗತಃ, ಗೃಹಂ ಪ್ರವಿಷ್ಟಶ್ಚ! ತತ್ರ ಚ ತಕ್ಷಕಸ್ಯೈಕಃ[2] ಪರ್ಯಙ್ಕಃ ಸ್ಥಿತಃ । ಚೋರಸ್ತತ್ರೋಪವಿಷ್ಟಃ[3] ॥

ಸ ಸ್ವಗತಂ ಪ್ರಾಹ- ''ಶೋಭನಮಾಪತಿತಮ್ । ದಿಷ್ಟ್ಯಾ ಗೃಹಸ್ವಾಮೀ ನಾಸ್ತಿ । ನೂನಂ ಕುತ್ರಾಪಿ ದೂರೇ ಯಾತಃ । ಅಥವಾ ಪುನರಾಗತೋಽಪಿ ಮಮ ಕಿಂ ಕರಿಷ್ಯತಿ ? ಭವತು, ಅತ್ರೈವ ಕಂಚಿತ್ಕಾಲಂ ನಿದ್ರಾಸುಖಮನುಭವಿಷ್ಯಾಮಿ । ಯತೋಽಹಮತೀವ ಶ್ರಾನ್ತೋಽಸ್ಮಿ'' ॥

ಅಥಾಚಿರೇಣೈವ ತಕ್ಷಕಃ ಸಮಾಯಾತಃ । ಪರ್ಯಙ್ಕೇ ಸುಪ್ತಶ್ಚೋರೋಽಪಿ ಪ್ರಬುದ್ಧಃ । ತಾವತಾ ತಕ್ಷಕಃ ಪುರತಸ್ತಿಷ್ಠತಿ । ತಂ ದೃಷ್ಟ್ವಾ ಸ ಧೂರ್ತಃ ಪ್ರಾಹ- 'ಅರೇ ಕಾ ವೇಲಾ ?' ತಕ್ಷಕಸ್ತು ವಿನಯೇನೈವ ಪ್ರತ್ಯಾಹ 'ಭದ್ರ[4] ಭೀತಾನಾಂ ಪಲಾಯಿತುಂ ವೇಲೇತಿ' ॥

ಸ್ಥೂಲಬುದ್ಧಿಃ ಸಹಸಾ ಪರ್ಯಙ್ಕಾದುತ್ಥಿತಃ ಪ್ರಧಾವಿತಶ್ಚ ॥

## ೮. ಬಡಗಿಯ ಮತ್ತು ಕಳ್ಳನ ಕಥೆ

ಕಲ್ಯಾಣಪುರಿಯಲ್ಲಿ ಒಬ್ಬ ಬಡಗಿ ಉಂಟು (ಇದ್ದನು). ಅವನು ಒಂದು ಸಲ ಕಾರ್ಯವಶದಿಂದ ಹೊರಗೆ ಹೋದನು. ಇಷ್ಟರಲ್ಲಿ ಸ್ಥೂಲಬುದ್ಧಿ ಎಂಬ ಒಬ್ಬಾನೊಬ್ಬ ಕಳ್ಳನು ಅಲ್ಲಿಗೆ ಬಂದನು, ಮತ್ತು ಮನೆಯನ್ನು ಪ್ರವೇಶಿಸಿದನು (ಬಂದು

1. ಕಾರ್ಯವಶಾತ್ - ಬಹಿಃ - ಗತಃ. 2. ತಕ್ಷಕಸ್ಯ - ಏಕಃ

3. ಚೋರಃ - ತತ್ರ - ಉಪವಿಷ್ಟಃ. ಈ ಪಾಠದಲ್ಲಿರುವ ''ಗತಃ'' ಮುಂತಾದ ಕೃದಂತಗಳನ್ನು ಹಾಗೆಯೇ ಉಪಯೋಗಿಸಿದರೆ ಭೂತಕಾಲದ ಅರ್ಥವು. ಉದಾ : ಗತಃ - ಹೋದನು, ಉಪವಿಷ್ಟಃ - ಕೂತುಕೊಂಡನು. ಇವುಗಳಿಗೆ ''ಅಸ್ತಿ'', ''ಆಸೀತ್'', ''ಭವಿಷ್ಯತಿ''- ಎಂಬ ಮಾತುಗಳನ್ನು ಸೇರಿಸಿದರೆ ಆಗತೋಽಸ್ತಿ - ಬಂದಿದ್ದಾನೆ, ಉಪವಿಷ್ಟ ಆಸೀತ್ - ಕೂತಿದ್ದನು, ಪ್ರಬುದ್ಧೋ ಭವಿಷ್ಯತಿ, ಎಚ್ಚತ್ತವನಾಗುವನು- ಎಂಬಂತೆ ರೂಪಗಳಾಗುವವು.

4. ಭದ್ರ- ಅಯ್ಯ, ಭದ್ರೇ- ಅಮ್ಮ.

ಮನೆಯೊಳಕ್ಕೆ ಹೋದನು). ಮತ್ತು ಅಲ್ಲಿ ಬಡಗಿಯ ಒಂದು ಮಂಚವು ಇತ್ತು. ಕಳ್ಳನು ಅಲ್ಲಿ (ಅದರ ಮೇಲೆ) ಕೂತುಕೊಂಡನು.

ಅವನು ತನ್ನಲ್ಲಿ ತಾನು ಹೇಳುತ್ತಾನೆ (ಹೇಳಿಕೊಂಡದ್ದೇನೆಂದರೆ) : ''ಒಳ್ಳೆಯದಾಯಿತು. (ನನ್ನ) ಅದೃಷ್ಟದಿಂದ ಮನೆಯ ಯಜಮಾನನು ಇಲ್ಲ ; ನಿಜವಾಗಿ ಎಲ್ಲಿಯೋ ದೂರ ಹೋಗಿರುವನು (ಹೋಗಿರಬೇಕು). ಅಥವಾ ಮತ್ತೆ ಬಂದವನು ಕೂಡ (ಬಂದರೂ ಕೂಡ) ನನಗೆ ಏನು ಮಾಡುವನು ? (ನನ್ನನ್ನು ಏನು ಮಾಡಿಯಾನು ?) ಆಗಲಿ, ಇಲ್ಲಿಯೇ ಸ್ವಲ್ಪ ನಿದ್ರಾಸುಖವನ್ನು ಅನುಭವಿಸುತ್ತೇನೆ. ಏಕೆಂದರೆ ನಾನು ಬಹಳವಾಗಿ ದಣಿದವನಾಗಿದ್ದೇನೆ (ದಣಿದಿದ್ದೇನೆ).''

ಆಮೇಲೆ ಬಹಳ ಹೊತ್ತಾಗದೆಯೇ (ಸ್ವಲ್ಪ ಹೊತ್ತಿನಲ್ಲಿಯೇ, ಬೇಗನೆಯೇ) ಬಡಗಿಯು ಬಂದುಬಿಟ್ಟನು. ಮಂಚದಲ್ಲಿ ನಿದ್ರಿಸಿದ್ದ ಕಳ್ಳನೂ ಎಚ್ಚತ್ತನು. ಅಷ್ಟರಿಂದ (ಅಷ್ಟರಲ್ಲಿ) ಬಡಗಿಯು ಮುಂದೆ ನಿಂತಿದ್ದಾನೆ (ನಿಂತಿದ್ದನು). ಅವನನ್ನು ಕಂಡು ಆ ವಂಚಕನು ಹೇಳುತ್ತಾನೆ (ಹೇಳಿದ್ದೇನೆಂದರೆ) ; 'ಎಲೋ, ಏನು (ಎಷ್ಟು) ಹೊತ್ತಾಯಿತು ?' ಆದರೆ ಬಡಗಿಯು ವಿನಯದಿಂದಲೇ ಉತ್ತರಹೇಳುತ್ತಾನೆ (ಉತ್ತರಕೊಟ್ಟಿದ್ದೇನೆಂದರೆ) : 'ಅಯ್ಯ, ಹೆದರಿದವರಿಗೆ ಓಡುವದಕ್ಕೆ ಹೊತ್ತು (ಓಡುವದಕ್ಕೆ ಸಮಯ).'

ಸ್ಥೂಲಬುದ್ಧಿಯು ಕೂಡಲೆ ಮಂಚದಿಂದ ಎದ್ದನು ಮತ್ತು ಓಡಿದನು (ಎದ್ದು ಓಡಿಹೋದನು).

## ೯. ಶರೀರಮ್

ಶರೀರೇ ಶಿರಃ ಕಬನ್ಧಶ್ಚೇತಿ ದ್ವೌ ಭಾಗೌ ವಿದ್ಯೇತೇ । ಶಿರಸಿ ಚಕ್ಷುಷೀ,[1] ನಾಸಿಕಾ, ಶ್ರೋತ್ರೇ, ವಕ್ತ್ರಂ ಚೇತ್ಯೇತಾನಿ ಮುಖ್ಯಾನ್ಯಙ್ಗಾನಿ । ಕಬನ್ಧೇ ತು ವಕ್ಷಃ, ಉದರಂ, ಪೃಷ್ಠಂ, ಪಾಣೀ, ಪಾದೌ ಚೇತಿ ಮುಖ್ಯಾನ್ಯಙ್ಗಾನಿ ॥

ತತ್ರ ಚಕ್ಷುರ್ಭ್ಯಾಂ ರೂಪಂ ಪಶ್ಯನ್ತಿ । ಶ್ರೋತ್ರಾಭ್ಯಾಂ ಶಬ್ದಂ ಶೃಣ್ವನ್ತಿ । ನಾಸಿಕಯಾ ಗನ್ಧಂ ಜಿಘ್ರನ್ತಿ । ವಕ್ತ್ರೇಣ ಭಾಷನ್ತೇ । ತತ್ರಸ್ಥೇಭ್ಯೋ ದನ್ತೇಭ್ಯ ಆಹಾರಾದಿಕಂ ಚರ್ವನ್ತಿ, ಜಿಹ್ವಯಾ ಚ ರಸಯನ್ತಿ । ಖಾದನಪಾನಾದಿಕಮಪಿ ವಕ್ತ್ರೇಣೈವ ನಿಷ್ಪಾದ್ಯತೇ । ತದೇವಂ ಸರ್ವಸ್ಯಾಪಿ ಶರೀರಸ್ಯ ಬಹೂಪಕರೋತಿ ಶಿರಃ । ಅತ ಏವಾ ಭಾಣಕಃ[2] - 'ಸರ್ವಸ್ಯ ಗಾತ್ರಸ್ಯ ಶಿರಃ ಪ್ರಧಾನಮ್' ಇತಿ ॥

---

1. ಎರಡೆರಡಿರುವ ವಸ್ತುಗಳನ್ನು ಹೇಳುವ ಮಾತುಗಳಿಗೆ ದ್ವಿವಚನವನ್ನೇ ಉಪಯೋಗಿಸಬೇಕು.
2. ಏವ- ಆಭಾಣಕಃ.

## ೯. ಶರೀರವು

ಶರೀರದಲ್ಲಿ ತಲೆಯೆಂದೂ ಅಟ್ಟೆಯೆಂದೂ ಎರಡು ಭಾಗಗಳಿವೆ. ತಲೆಯಲ್ಲಿ ಕಣ್ಣುಗಳು, ಮೂಗು, ಕಿವಿಗಳು, ಮತ್ತು ಬಾಯಿ- ಎಂಬಿವುಗಳು ಮುಖ್ಯವಾದ ಅಂಗಗಳು. ಅಟ್ಟೆಯಲ್ಲಿಯಾದರೋ ಎದೆ, ಹೊಟ್ಟೆ, ಬೆನ್ನು, ಕೈಗಳು ಮತ್ತು ಕಾಲುಗಳು- ಎಂಬಿವು ಮುಖ್ಯವಾದ ಅಂಗಗಳು.

ಅಲ್ಲಿ (ಅವುಗಳಲ್ಲಿ) ಕಣ್ಣುಗಳಿಂದ ರೂಪವನ್ನು ನೋಡುತ್ತಾರೆ, ಕಿವಿಗಳಿಂದ ಶಬ್ದವನ್ನು ಕೇಳುತ್ತಾರೆ, ಮೂಗಿನಿಂದ ವಾಸನೆಯನ್ನು ಮೂಸಿ ನೋಡುತ್ತಾರೆ, ಬಾಯಿಯಿಂದ ಮಾತನಾಡುತ್ತಾರೆ. ಅದರಲ್ಲಿರುವ ಹಲ್ಲುಗಳಿಂದ ಆಹಾರ ಮುಂತಾದದ್ದನ್ನು ಅಗಿಯುತ್ತಾರೆ, ಮತ್ತು ನಾಲಗೆಯಿಂದ ಸವಿನೋಡುತ್ತಾರೆ. ತಿನ್ನುವದು, ಕುಡಿಯುವದು, ಮುಂತಾದದ್ದೂ ಬಾಯಿಯಿಂದಲೇ ಮಾಡಲ್ಪಡುತ್ತದೆ (ಆಗುತ್ತದೆ). ಆದ್ದರಿಂದ ಹೀಗೆ ಎಲ್ಲಾ ಶರೀರಕ್ಕೂ ತಲೆಯು ಬಹಳವಾಗಿ ಉಪಕಾರಮಾಡುತ್ತದೆ. ಆದ್ದರಿಂದಲೇ ಗಾದೆಯು (ಇರುವದೇನೆಂದರೆ) : 'ಶರೀರಕ್ಕೆಲ್ಲ ಶಿರಸ್ಸೇ ಮುಖ್ಯ'.

## ೧೦. ಛಾತ್ರಾಣಾಂ ಸಂಭಾಷಣಮ್

ಅಹಂ ಪಾಠಶಾಲಾಂ ಗನ್ತುಮಿಚ್ಛಾಮಿ ! ಗೋವಿನ್ದ, ತ್ವಮದ್ಯ ನಾಗಚ್ಛಸಿ ಕಿಮ್? ಸಖೇ, ಕ್ಷಣಂ ಪ್ರತಿಪಾಲಯ । ಗೋಪಾಲೋಽಪ್ಯಾಗಮಿಷ್ಯತಿ । ತರ್ಹಿ ಸ ಕಿಮಿತಿ ವಿಲಮ್ಬತೇ ? ಕಾಲೋಽತಿವರ್ತತೇ । ನೂನಂ ಗುರವಃ ಕ್ರುದ್ಧಾ ಭವಿಷ್ಯನ್ತಿ । ತದೇಹಿ[1] ಗಚ್ಛಾವಃ । ಕಿಮೇವಂ ತ್ವರಯಸಿ ? ಅಯಮಾಗತೋ[2] ಗೋಪಾಲಃ । ಸರ್ವೇಽಪಿ ಸಹೈವ ಗಚ್ಛಾಮಃ ॥

ಭೋಃ, ಕಿಂ ತ್ವಮದ್ಯ ಸರ್ವಂ ಪಾಠಂ ಪಠಿತವಾನ್ ? ಮಯಾ ಹ್ಯಃ ಕಿಂಚಿತ್ಪಠಿತಂ, ಪ್ರಾತಶ್ಚ ಕಿಂಚಿತ್ಪಠಿತಮ್ । ಅಙ್ಕಗಣಿತೇ ತ್ವಂ ಸರ್ವಾಣಾಮಪಿ ಪ್ರಶ್ನಾನಾಮುತ್ತರಾಣಿ ಲಿಖಿತವಾನ್[3] ವಾ ? ಅಹಮೇಕಸ್ಯೈವೋತ್ತರಂ[4] ದತ್ತವಾನಸ್ಮಿ ।

---

1. ತತ್-ಏಹಿ. 2. ಆಯಂ-ಆಗತಃ. ಆಯಂ, ಇಯಂ, ಏಷಃ, ಏಷಾ- ಎಂಬ ಮಾತುಗಳನ್ನು ''ಇಗೋ !'' ಎಂಬ ಅರ್ಥವು ಬರುವ ಹಾಗೆ ಅನೇಕವೇಳೆ ಉಪಯೋಗಿಸುತ್ತಾರೆ.

3. ''ಪಠಿತಃ'', ''ಲಿಖಿತಃ''- ಮುಂತಾದ ಸಕರ್ಮಕಕೃದಂತಗಳನ್ನು ''ಓದಲ್ಪಟ್ಟಿತು'', 'ಬರೆಯಲ್ಪಟ್ಟಿತು' - ಎಂದು ಕರ್ಮಾರ್ಥದಲ್ಲಿಯೇ ಉಪಯೋಗಿಸುವರು ; 'ಪಠಿತವಾನ್', 'ಲಿಖಿತವಾನ್'- ಮುಂತಾದವುಗಳನ್ನು 'ಓದಿದನು', 'ಬರೆದನು'- ಎಂದು ಕರ್ತ್ರರ್ಥದಲ್ಲಿ ಉಪಯೋಗಿಸುವರು. 'ಪಠಿತಃ' ಮುಂತಾದವುಗಳಿಗೆ ಭೂತಕಾಲದ ಅರ್ಥವಿರುವದು. 'ಅಸ್ತಿ', 'ಆಸೀತ್', 'ಭವಿಷ್ಯತಿ'- ಎಂಬಿವುಗಳನ್ನು ಸೇರಿಸಲು 'ಪಠಿತೋಽಸ್ತಿ- ಓದಲ್ಪಟ್ಟಿದೆ', 'ಪಠಿತ ಆಸೀತ್-ಓದಲ್ಪಟ್ಟಿತು', 'ಪಠಿತೋ ಭವಿಷ್ಯತಿ- ಓದಲ್ಪಡುವದು-ಎಂಬಂತೆ ರೂಪಗಳು ಆಗುವವು. 4. ಏಕಸ್ಯ - ಏವ- ಉತ್ತರಂ,

ಭಾಗಹಾರೇ ಪ್ರಶ್ನಃ ಕ್ಲಿಷ್ಟೋऽಸ್ತಿ । ಗಣಿತಪುಸ್ತಕಮಪಿ ಉದ್ಘಾಟ್ಯೇದಾನೀಮಾಲೋಕಿತವಾನ್[1] । ತತ್ರಾಪಿ ಈದೃಶಃ ಪ್ರಶ್ನೋ ನ ದೃಷ್ಟಃ । ಭವಾದೃಶಾನಾಮಿಯಂ ಗತಿಶ್ಚೇತ್ ಕಾ ಕಥಾ ಮಾದೃಶಾನಾಮ್ ?

ಇದಂ ಕೇನ ಲಿಖಿತಮ್ ? ನ ಹ್ಯೇವಂ[2] ಲೇಖಿತುಂ ಶಕ್ತೋ ಭವಾನ್ । ಅಹೋ ತ್ವಂ ಕಿಂ ಕೃತವಾನ್ । ಪುಸ್ತಕಂ ರಥ್ಯಾಯಾಂ ಪ್ರಕ್ಷಿಪ್ತವಾನಸಿ । ಪಶ್ಯ, ಇದಂ ಪತ್ರಂ ಧೂಲ್ಯಾ ಧೂಸರಿತಮ್ ! ಗುರುಭಿಃ ಪೃಷ್ಟಃ ಕಿಂ ಕಥಯಾಮಿ ? ಅಯೇ, ಆಗತಾ ಏವ ಪಾಠಶಾಲಾಮ್ ! ಘಣ್ಟಾಪಿ ನಾದಿತೈವ[3] । ತತ್ ತ್ವರಿತಂ ಗಚ್ಛಾಮಃ ॥

## ೧೦. ವಿದ್ಯಾರ್ಥಿಗಳ ಸಂಭಾಷಣೆ

ನಾನು ಪಾಠಶಾಲೆಗೆ ಹೋಗುವದಕ್ಕೆ ಇಚ್ಛಿಸುತ್ತೇನೆ. ಗೋವಿಂದ, ನೀನು ಈ ದಿನ ಬರುವದಿಲ್ಲವೇನು ? ಸ್ನೇಹಿತನೆ, (ಒಂದು) ಕ್ಷಣ ತಡೆ, ಗೋಪಾಲನೂ ಬರುವನು. ಹಾಗಾದರೆ ಅವನು ಏತಕ್ಕೆ ತಡಮಾಡುತ್ತಾನೆ ? ಕಾಲವು ಕಳೆದುಹೋಗುತ್ತದೆ (ಹೊತ್ತಾಗುತ್ತದೆ). ನಿಶ್ಚಯವಾಗಿ ಗುರುಗಳು ಸಿಟ್ಟುಳ್ಳವರು ಆಗುವರು (ಸಿಟ್ಟು ಮಾಡುತ್ತಾರೆ). ಆದ್ದರಿಂದ ಬಾ, ಹೋಗೋಣ. ಇದೇನು, ಹೀಗೆ ಅವಸರಪಡಿಸುತ್ತೀಯೆ ? ಇವನು (ಇಗೋ), ಬಂದ ಗೋಪಾಲ. ಎಲ್ಲರೂ ಜೊತೆಯಲ್ಲಿಯೇ ಹೋಗೋಣ.

ಅಯ್ಯ, ನೀನು ಈ ದಿನ ಎಲ್ಲಾ ಪಾಠವನ್ನೂ ಓದಿದೆಯೊ ? ನನ್ನಿಂದ ನೆನ್ನೆ ಸ್ವಲ್ಪ ಓದಲ್ಪಟ್ಟಿತು, ಮತ್ತು ಬೆಳಗ್ಗೆ ಸ್ವಲ್ಪ ಓದಲ್ಪಟ್ಟಿತು (ನಿನ್ನೆ ಸ್ವಲ್ಪ ಓದಿದೆ, ಬೆಳಗ್ಗೆ ಸ್ವಲ್ಪ ಓದಿದೆ). ಅಂಕಗಣಿತದಲ್ಲಿ ನೀನು ಎಲ್ಲಾ ಪ್ರಶ್ನೆಗಳಿಗೂ ಉತ್ತರಗಳನ್ನು ಬರೆದೆಯೇನು? ನಾನು ಒಂದಕ್ಕೇ ಉತ್ತರವನ್ನು ಕೊಟ್ಟಿದ್ದೇನೆ. ಭಾಗಾಹಾರದಲ್ಲಿ ಪ್ರಶ್ನೆಯು ಕಷ್ಟವಾಗಿದೆ. ಗಣಿತಪುಸ್ತಕವನ್ನು ಕೂಡ ತೆರೆದು ಈಗ ನೋಡಿದೆನು. ಅದರಲ್ಲಿಯೂ ಇಂಥ ಪ್ರಶ್ನೆಯು ನೋಡಲ್ಪಡಲಿಲ್ಲ (ಕಾಣಲಿಲ್ಲ). ನಿನ್ನಂಥವರಿಗೆ ಈ ಗತಿಯಾದರೆ ನನ್ನಂಥವರ ಮಾತೇನು (ನನ್ನಂಥವರ ವಿಷಯದಲ್ಲಿ ಹೇಳತಕ್ಕದ್ದೇನು)?

ಇದು ಯಾವನಿಂದ ಬರೆಯಲ್ಪಟ್ಟಿತು ? (ಇದನ್ನು ಯಾರು ಬರೆದರು ?) ಹೀಗೆ ಬರೆಯುವದಕ್ಕೆ ನೀನು ಶಕ್ತನಲ್ಲವಷ್ಟೆ. ಅಯ್ಯೋ, ನೀನು ಏನು ಮಾಡಿದೆ ! ಪುಸ್ತಕವನ್ನು ಬೀದಿಯಲ್ಲಿ ಹಾಕಿಬಿಟ್ಟಿದ್ದೀಯೆ. ನೋಡು, ಈ ಕಾಗದವು (ಹಾಳೆಯು)

1. ಉದ್ಘಾಟ್ಯ-ಇದಾನೀಂ.
2. ಹಿ-ಏವಂ. 3. ನಾದಿತಾ -ಏವ.

ಧೂಳಿನಿಂದ ಮಸುಕಾಯಿತು. ಗುರುಗಳಿಂದ ಕೇಳಲ್ಪಟ್ಟವನು (ಗುರುಗಳು ಕೇಳಿದರೆ) ಏನು ಹೇಳಲಿ ? ಆಹಾ, ಬಂದೇ ಬಿಟ್ಟೆವು, ಪಾಠಶಾಲೆಯನ್ನು (ಪಾಠಶಾಲೆಗೆ) ! ಘಂಟೆಯೂ ಬಾರಿಸಲ್ಪಟ್ಟೇ ಆಯಿತು (ಘಂಟೆಯನ್ನೂ ಬಾರಿಸಿಯೇ ಬಿಟ್ಟರು). ಆದ್ದರಿಂದ ಬೇಗನೆ ಹೋಗೋಣ.

## ೧೧. ಗ್ರೀವಾ ಕಬನ್ಧಶ್ಚ

ಶಿರಸಃ ಕಬನ್ಧಸ್ಯ ಚ ಸನ್ಧಿಃ ಗ್ರೀವೇತ್ಯುಚ್ಯತೇ । ಗ್ರೀವಾಯಾ ಉಪರಿ ಶಿರೋ ಭವತಿ । ತತೋಽಧಸ್ತಾತ್ ಕಬನ್ಧೋ ಭವತಿ । ಗ್ರೀವಾಸ್ಥಂ ಶಿರ ಉನ್ನಮಯಿತುಮವನಮಯಿತುಂ ವಾ ಶಕ್ಯತೇ, ಸವ್ಯತೋ ದಕ್ಷಿಣತಶ್ಚ ಕಮ್ಪಯಿತುಮಪಿ ಶಕ್ಯತೇ ॥

ಕಬನ್ಧಸ್ಯ ಉಪರಿಭಾಗೇ ವಕ್ಷಃ, ಅಧೋಭಾಗೇ ಉದರಂ ಚ ವಿದ್ಯೇತೇ । ತಸ್ಯೈವ ಪಶ್ಚಾದ್ಭಾಗೇ ಪೃಷ್ಠಂ ವರ್ತತೇ । ವಕ್ಷಸ ಉಭಯೋರಪಿ[1] ಪಾರ್ಶ್ವಯೋಃ ಭುಜೌ ಲಮ್ಬೇತೇ । ಭಜಸ್ಯೋಪರಿಭಾಗಃ ಸ್ಕನ್ಧ ಇತ್ಯುಚ್ಯತೇ । ಪ್ರತಿಭುಜಂ ಪ್ರಗಣ್ಡಃ, ಪ್ರಕೋಷ್ಠಃ, ಹಸ್ತಶ್ಚೇತಿ ತ್ರಯೋ ಭಾಗಾಃ ಪ್ರತಿಪಾದಂ ಚ ಊರುಃ, ಜಙ್ಘಾ, ಪದಂ ಚೇತಿ ತ್ರಯೋ ಭಾಗಾಃ । ಉದರಸ್ಯ ಚ ಊರ್ವೋಶ್ಚ ಮಧ್ಯೇ ಕಟಿರ್ವಿದ್ಯತೇ ॥

## ೧೧. ಕತ್ತು ಮತ್ತು ಮುಂಡವು

ತಲೆಯ ಮತ್ತು ಮುಂಡದ ಸಂಧಿಯು (ಕೂಡುವ ಸ್ಥಳವು) ಕತ್ತು ಎಂದು ಹೇಳಲ್ಪಡುತ್ತದೆ ; (ತಲೆ ಮತ್ತು ಮುಂಡ ಇವು ಸೇರುವ ಸ್ಥಳವನ್ನು ಕತ್ತು ಎನ್ನುತ್ತಾರೆ). ಕತ್ತಿನ ಮೇಲೆ ತಲೆ ಇರುತ್ತದೆ. ಅದರ ಕೆಳಗೆ ಮುಂಡವಿರುತ್ತದೆ. ಕತ್ತಿನಲ್ಲಿರುವ ತಲೆಯು ಎತ್ತುವದಕ್ಕೂ ಅಥವಾ ತಗ್ಗಿಸುವದಕ್ಕೂ ಶಕ್ಯವಾಗುತ್ತದೆ (ಆಗುತ್ತದೆ). ಎಡಕ್ಕೂ ಬಲಕ್ಕೂ ಅಲ್ಲಾಡಿಸುವದಕ್ಕೂ ಆಗುತ್ತದೆ.

ಮುಂಡದ ಮೇಲುಗಡೆಯಲ್ಲಿ ಎದೆಯೂ ಕೆಳಗಡೆಯಲ್ಲಿ ಹೊಟ್ಟೆಯೂ ಇರುತ್ತವೆ. ಅದರ ಹಿಂದುಗಡೆಯಲ್ಲಿಯೇ ಬೆನ್ನು ಇದೆ. ಎದೆಯ ಎರಡು ಪಕ್ಕಗಳಲ್ಲಿಯೂ ತೋಳುಗಳು ತೂಗುಬಿದ್ದಿವೆ. ತೋಳಿನ ಮೇಲುಭಾಗವು ಹೆಗಲೆನ್ನಲ್ಪಡುವದು (ಹೆಗಲೆನಿಸುವದು). ಒಂದೊಂದು ತೋಳಿಗೂ ರಟ್ಟೆ, ಮೊಳಕೈ, ಕೈ- ಎಂದು ಮೂರು ಭಾಗಗಳು. ಒಂದೊಂದು ಕಾಲಿನಲ್ಲಿಯೂ ತೊಡೆ, ಮೊಳಕಾಲು, ಹೆಜ್ಜೆ- ಎಂದು ಮೂರು ಭಾಗಗಳು. ಹೊಟ್ಟೆಯ ಮತ್ತು ತೊಡೆಗಳ ನಡುವೆ ಸೊಂಟವಿದೆ.

1. ಉಭಯೋಃ - ಅಪಿ.

# ೧೨. ಪಾನ್ಥಯೋಃ ಕುಠಾರಸ್ಯ ಚ ಕಥಾ

ದ್ವೌ ಪಾನ್ಥೌ ಕದಾಚಿದೇಕೇನೈವ[1] ಮಾರ್ಗೇಣ ಪ್ರಯಾತೌ ಸ್ಮ । ಮಾರ್ಗೇ ತಾಭ್ಯಾಮೇಕಃ ಕುಠಾರೋ ದೃಷ್ಟಃ[2] । ತದಾ ಅನ್ಯತರೇಣ ಪಾನ್ಥೇನ ದ್ರುತಂ ಗತ್ವಾ ಕುಠಾರೋ ಗೃಹೀತಃ । ತತಃ ಕುಠಾರಗ್ರಾಹೀ ಪ್ರಾಹ- 'ಸಖೇ, ಪಶ್ಯ ಮಮ ಭಾಗ್ಯೇನ ಕುಠಾರೋಽಯಂ[3] ಲಬ್ಧಃ ॥

ಅಥ ತೌ ಕಿಂಚಿದ್ದೂರಂ ಗತವನ್ತೌ । ತದಾ ಕುಠಾರಸ್ವಾಮೀ ತಾವನು ಪ್ರಧಾವಿತಃ[4] । ತತಃ ಕುಠಾರಗ್ರಾಹಕಃ ಪ್ರಾಹ- 'ಸಖೇ, ಹತೌ ಸ್ವಃ ।' ಇತರೇಣೋಕ್ತಮ್ - 'ಮಿತ್ರ, ಮೈವಮ್, ಇದಮಪಿ ತವೈವ ಭಾಗ್ಯೇನ ಸಮಾಪತಿತಮ್ । ಅತೋ 'ಹತೋಽಸ್ಮೀ'ತ್ಯೇವ ವದೇ'ತಿ[5] ॥

ಶುಚಿತ್ವಂ ತ್ಯಾಗಿತಾ ಶೌರ್ಯಂ ಸಾಮಾನ್ಯಂ ಸುಖದುಃಖಯೋಃ ।
ದಾಕ್ಷಿಣ್ಯಂ ಚಾನುರಕ್ತಿಶ್ಚ ಸತ್ಯತಾ ಚ ಸುಹೃದ್ಗುಣಾಃ ॥

## ೧೨. ಇಬ್ಬರು ದಾರಿಹೋಕರ ಮತ್ತು ಕೊಡಲಿಯ ಕಥೆ

ಇಬ್ಬರು ದಾರಿಹೋಕರು ಒಂದಾನೊಂದು ಸಲ ಒಂದೇ ದಾರಿಯಿಂದ ಹೋಗುತ್ತಿದ್ದರು. ದಾರಿಯಲ್ಲಿ ಅವರಿಂದ ಒಂದು ಕೊಡಲಿಯು ನೋಡಲ್ಪಟ್ಟಿತು. (ದಾರಿಯಲ್ಲಿ ಅವರು ಒಂದು ಕೊಡಲಿಯನ್ನು ಕಂಡರು). ಆಗ ಇವರಲ್ಲೊಬ್ಬ ದಾರಿಹೋಕನಿಂದ ಬೇಗನೆ ಹೋಗಿ ಕೊಡಲಿಯು ಹಿಡಿದುಕೊಳ್ಳಲ್ಪಟ್ಟಿತು. (ಅವರಲ್ಲೊಬ್ಬ ದಾರಿಹೋಕನು ಬೇಗನೆ ಹೋಗಿ ಕೊಡಲಿಯನ್ನು ತೆಗೆದುಕೊಂಡನು) ಆಮೇಲೆ ಕೊಡಲಿಯನ್ನು ತೆಗೆದುಕೊಂಡವನು ಹೇಳುತ್ತಾನೆ ; 'ಗೆಳೆಯನೆ, ನೋಡು, ನನ್ನ ಅದೃಷ್ಟದಿಂದ ಈ ಕೊಡಲಿಯು ಪಡೆಯಲ್ಪಟ್ಟಿತು (ಸಿಕ್ಕಿತು).'

1. ಕದಾಚಿತ್-ಏಕೇನ-ಏವ.

2. ದೃಷ್ಟಃ-ನೋಡಲ್ಪಟ್ಟಿತು, ಗೃಹೀತಃ - ತೆಗೆದುಕೊಳ್ಳಲ್ಪಟ್ಟಿತು- ಎಂದು ಮುಂತಾಗಿ ಸಂಸ್ಕೃತದಲ್ಲಿ ಕರ್ಮಾರ್ಥಕಪ್ರಯೋಗವೇ ಹೆಚ್ಚು ; ಕನ್ನಡದಲ್ಲಿ ಇದರ ತಾತ್ಪರ್ಯವನ್ನು ಕರ್ತ್ರರ್ಥಕಪ್ರಯೋಗದಿಂದಲೇ ತಿಳಿಸಬೇಕು.

3. ''ಅಯಂ ಕುಠಾರಃ'' ಎಂದು ಅನ್ವಯ. 4. ತೌ-ಅನು.

5. ಒಬ್ಬರು ಹೇಳಿದ ಮಾತನ್ನು ಅನುವಾದಮಾಡುವಾಗ ಕೊನೆಯಲ್ಲಿ 'ಇತಿ' ಎಂಬುದನ್ನು ಬೇಕಾದರೆ ಹಾಕಬಹುದು, ಬೇಡವಾದರೆ ಬಿಡಬಹುದು. ಸಂಭಾಷಣೆಯು ಮುಗಿಯಿತೆಂದು ತೋರಿಸುವುದಕ್ಕೆ 'ಇತಿ' ಯನ್ನು ಹಾಕುವದೇ ಒಳ್ಳೆಯದು.

ಆಮೇಲೆ ಅವರಿಬ್ಬರೂ ಸ್ವಲ್ಪ ದೂರ ಹೋದರು. ಆಗ ಕೊಡಲಿಯ ಯಜಮಾನನು ಅವರ ಹಿಂದೆ ಓಡಿದನು (ಓಡಿಬಂದನು). ಆಗ ಕೊಡಲಿಯನ್ನು ತೆಗೆದುಕೊಂಡವನು ಹೇಳುತ್ತಾನೆ : 'ಗೆಳೆಯನೆ, (ನಾವಿಬ್ಬರೂ) ಕೊಲ್ಲಲ್ಪಟ್ಟವರಾಗಿದ್ದೇವೆ' (ಅಯ್ಯೋ! ಕೆಟ್ಟೆವು). ಇನ್ನೊಬ್ಬನಿಂದ ಹೇಳಲ್ಪಟ್ಟಿತು (ಇನ್ನೊಬ್ಬನು ಹೇಳಿದ್ದೇನೆಂದರೆ) : 'ಮಿತ್ರನೆ, ಹಾಗೆನ್ನಬೇಡ. ಇದೂ ನಿನ್ನ ಅದೃಷ್ಟದಿಂದಲೇ ಉಂಟಾಯಿತು. ಆದ್ದರಿಂದ 'ಕೆಟ್ಟೆನು' ಎಂದೇ ಹೇಳು' ಎಂದನು.

ಶುದ್ಧವಾಗಿರುವದು, ತನ್ನದನ್ನು ಕೊಡುವದು, ಶೌರ್ಯವು, ಸುಖ ದುಃಖಗಳಲ್ಲಿ ಸಮಾನವಾಗಿರುವದು, ಔದಾರ್ಯವು, ಪ್ರೇಮವು, ಮತ್ತು ಸತ್ಯ(ವನ್ನು ನುಡಿಯುವಿಕೆ) - ಇವು ಸ್ನೇಹಿತನ ಗುಣಗಳು.

## ೧೩. ವಿಕಲಾಙ್ಗಾಃ

ಕೇಷುಚಿಜ್ಜನೇಷು[1] ನ[2] ಸರ್ವಾಣ್ಯಙ್ಗಾನಿ ದೃಶ್ಯನ್ತೇ । ಕಸ್ಯಚಿದಙ್ಗಸ್ಯ ವೈಲಕ್ಷಣ್ಯಮಪಿ ಭವತಿ । ತದ್ಯಥಾ - ಕಶ್ಚಿತ್ ಕಾಣಃ, ಕಥಂಚಿದ್ದ್ರಷ್ಟುಂ ಶಕ್ನೋತಿ । ಕಶ್ಚಿತ್ ಪುನರನ್ಧ ಏವ, ಸರ್ವಥಾ ದ್ರಷ್ಟುಮಶಕ್ತಃ । ನ ಹಿ ಚಕ್ಷುಷಾ ವಿನಾ ದ್ರಷ್ಟುಂ ಪಾರ್ಯತೇ । ಕಶ್ಚಿದ್ಬಧಿರೋ ಭವತಿ, ನ ಕಿಂಚಿದಪ್ಯುಕ್ತಂ ಶೃಣೋತಿ । ನ ಹಿ ಶ್ರೋತ್ರೇಣ ವಿನಾ ಶ್ರೋತುಂ ಶಕ್ಯತೇ । ಏವಮೇವ ಕಶ್ಚಿತ್ ಕುಣಿಃ, ಸ ವಸ್ತೂನಿ ಗ್ರಹೀತುಂ ನ ಶಕ್ನೋತಿ । ಅನ್ಯಃ ಪಙ್ಗುಃ, ಸ ಗನ್ತುಂ ನ ಶಕ್ನೋತಿ । ಅಪರೋ ಮೂಕಃ, ಸ ಭಾಷಿತುಂ ನ ಶಕ್ತಃ । ಕಶ್ಚಿತ್ತು ವಿಗ್ರಃ, ಸ ಘ್ರಾತುಂ ಶ್ವಸಿತುಂ ವಾ ನ ಸಮ್ಯಕ್ ಪ್ರಭವತಿ ॥

ಈದೃಶೇಷು ಜನೇಷು ಸದಾಪ್ಯಸ್ಮಾಭಿರನುಕಮ್ಪಾ[3] ದರ್ಶಯಿತವ್ಯಾ । ಯಥಾಶಕ್ತಿ ಚ ತೇಷಾಂ ಸಾಹಾಯ್ಯಂ ಕರ್ತವ್ಯಮ್ । ಯತ ಈಶ್ವರೋ ದಯಾಲುಃ[4] ಸರ್ವಾಣ್ಯಪ್ಯಙ್ಗಾನಿ ದತ್ವಾ ಅಸ್ಮಾನನುಗೃಹ್ಣಾತಿ ॥

## ೧೩. ಅಂಗಹೀನರು

ಕೆಲವು ಜನರಲ್ಲಿ ಎಲ್ಲಾ ಅಂಗಗಳೂ ಕಾಣಲ್ಪಡುವದಿಲ್ಲ (ಕಾಣಿಸುವದಿಲ್ಲ). ಯಾವದಾದರೊಂದು ಅಂಗದ ಇಲ್ಲದಿರುವಿಕೆಯೂ (ಕೊರತೆಯು) ಇರುತ್ತದೆ. ಅದು ಹೇಗೆಂದರೆ : ಒಬ್ಬನು ಒಕ್ಕಣ್ಣನಾಗಿರುತ್ತಾನೆ. ಹೇಗೋ (ಕಷ್ಟದಿಂದ)

---

1. ಕೇಷುಚಿತ್- ಜನೇಷು. 2. ಸರ್ವಾಣ್ಯಙ್ಗಾನಿ ನ ದೃಶ್ಯನ್ತೇ (ಅ).
3. ಸದಾ- ಅಪಿ- ಅಸ್ಮಾಭಿಃ- ಅನುಕಮ್ಪಾ. 4. ದಯಾಲುಃ ಈಶ್ವರಃ (ಅ).

ನೋಡುವದಕ್ಕೆ ಶಕ್ತನಾಗಿರುತ್ತಾನೆ. ಆದರೆ ಇನ್ನೊಬ್ಬನು ಕುರುಡನೇ (ಆಗಿರುತ್ತಾನೆ), ಪೂರ್ತಿಯಾಗಿಯೂ ನೋಡುವದಕ್ಕೆ ಅಶಕ್ತನು (ಆಗಿರುತ್ತಾನೆ). ಕಣ್ಣಿಲ್ಲದೆ ನೋಡುವದಕ್ಕೆ ಶಕ್ಯವಾಗುವದಿಲ್ಲವಷ್ಟೆ (ಆಗಲಾರದಷ್ಟೆ). ಒಬ್ಬನು ಕಿವುಡನಾಗಿರುತ್ತಾನೆ, ಹೇಳಲ್ಪಟ್ಟಿದ್ದು ಏನನ್ನೂ ಕೇಳುವದಿಲ್ಲ. ಕಿವಿಯಿಲ್ಲದೆ ಕೇಳುವದಕ್ಕಾಗುವದಿಲ್ಲವಷ್ಟೆ. ಹೀಗೆಯೇ ಒಬ್ಬನು ಮೋಟುಗೈಯವನು (ಆಗಿರುತ್ತಾನೆ). ಅವನು ವಸ್ತುಗಳನ್ನು ಹಿಡಿದುಕೊಳ್ಳುವದಕ್ಕೆ ಶಕ್ತನಾಗುವದಿಲ್ಲ. ಇನ್ನೊಬ್ಬನು ಹೆಳವನು, ಅವನು ನಡೆಯುವದಕ್ಕೆ ಶಕ್ತನಾಗಿರುವದಿಲ್ಲ. ಮತ್ತೊಬ್ಬನು ಮೂಕನು ; ಅವನು ಮಾತಾಡುವದಕ್ಕೆ ಶಕ್ತನಲ್ಲ. ಒಬ್ಬನಾದರೋ ಮೂಗಿಲ್ಲದವನು, ಅವನು ಮೂಸಿ ನೋಡುವದಕ್ಕಾಗಲಿ ಉಸಿರಾಡುವದಕ್ಕಾಗಲಿ ಚೆನ್ನಾಗಿ ಶಕ್ತನಾಗಿರುವದಿಲ್ಲ.

ಇಂಥ ಜನರಲ್ಲಿ ಯಾವಾಗಲು ನಮ್ಮಿಂದ ದೆಯೆಯು ತೋರಿಸಲ್ಪಡಬೇಕು (ನಾವು ಮರುಕವನ್ನು ತೋರಿಸಬೇಕು). ಶಕ್ತಿಯಿದ್ದಷ್ಟು ಅವರಿಗೆ ಸಹಾಯವು ಮಾಡಲ್ಪಡಬೇಕು ( ಸಹಾಯವನ್ನು ಮಾಡಬೇಕು). ಏಕೆಂದರೆ ದಯಾಲುವಾದ ಈಶ್ವರನು ಎಲ್ಲಾ ಅಂಗಗಳನ್ನೂ ಕೊಟ್ಟು ನಮ್ಮನ್ನು ಅನುಗ್ರಹಿಸಿರುತ್ತಾನೆ (ನಮಗೆ ಉಪಕಾರಮಾಡಿರುತ್ತಾನೆ).

## ೧೪. ಭ್ರಾತರಃ

ರಾಮಲಕ್ಷ್ಮಣಭರತಶತ್ರುಘ್ನಾಶ್ಚತ್ವಾರೋಽಪಿ ಭ್ರಾತರಃ । ತೇ ಚ ಪರಸ್ಪರಂ ಪ್ರೇಮಯುಕ್ತಾ ಮಾತಾಪಿತೃಷು ಭಕ್ತಿಮನ್ತಶ್ಚಾಸನ್ । ಸರ್ವೇಽಪಿ ತೇ ವೇದವಿದಃ । ಸರ್ವೇಽಪಿ ಧನುರ್ವೇದೇ ಪ್ರವೀಣಾಃ । ಕೌಸಲ್ಯಾ ಪ್ರಭೃತಯಸ್ತಿಸ್ರೋಽಪಿ ಮಾತರಸ್ತೇಷು ಪರಮಾಂ ಪ್ರೀತಿಮಕುರ್ವನ್ । ಸಪತ್ನ್ಯಾಃ ಪುತ್ರೇಽಪಿ ಸರ್ವಗುಣಸಮ್ಪನ್ನೇ ರಾಮೇ ಸುಮಿತ್ರಾಯಾಃ ಕೈಕೇಯ್ಯಾಶ್ಚ ಸ್ವಪುತ್ರವದೇವ ಪ್ರೀತಿರಾಸೀತ್ ॥

ರಾಮಸ್ತು ಸರ್ವೇಷಾಮಪಿ ಪ್ರಿಯ ಆಸೀತ್ । ಸ ಹಿ ಗಜಸ್ಕನ್ಧಾರೋಹಣೇ ಚತುರಃ,[1] ಅಶ್ವಪೃಷ್ಠಾರೋಹಣೇ ನಿಪುಣಃ, ರಥಚರ್ಯಾಯಾಂ ಕುಶಲಃ, ಧನುರ್ವಿದ್ಯಾಯಾಂ ಸುಶಿಕ್ಷಿತಃ । ದೀನೇಷ್ವನ್ಧೇಷು ಬಧಿರೇಷು ಮೂಕೇಷು, ಅನ್ಯೇಷ್ವಪ್ಯೇತಾದೃಶೇಷು ಚ[2] ದಯಾವಾನ್ । ವಸಿಷ್ಠಾದಿಷು ಪೂಜ್ಯೇಷು ಭಕ್ತಿಮಾನ್ । ಪಿತೄಣಾಮಪಿ ಮಾತೄಣಾಂ ಪಿತುರ್ದಶರಥಸ್ಯ ಚ ಶುಶ್ರೂಷಣೇ ಪರಮಾಸಕ್ತಃ ॥

1. ಚತುರ, ನಿಪುಣ, ಕುಶಲ, ಸುಶಿಕ್ಷಿತ, ಪ್ರವೀಣ- ಇವು ಪರ್ಯಾಯ ಶಬ್ದಗಳು. ಎಂದರೆ ಸ್ವಲ್ಪ ಹೆಚ್ಚುಕಡಿಮೆಯಾಗಿ ಒಂದೇ ಅರ್ಥವುಳ್ಳ ಮಾತುಗಳು ; ಬೇಸರವಾಗದೆ ಇರಲೆಂದು ಬೇರೆಬೇರೆ ಮಾತುಗಳನ್ನು ಉಪಯೋಗಿಸಿರುತ್ತದೆ. 2. ಅನ್ಯೇಷು-ಅಪಿ-ಏತಾದೃಶೇಷು,

ಪಿತಾ ದಶರಥಶ್ಚ ಚತುರ್ಭಿರೀದೃಶೈಃ[1] ಪ್ರಿಯಪುತ್ರೈಃ ಪರಿವೃತೋ ನಿತರಾಂ ಹರ್ಷೋ ಬಭೂವ ॥

## ೧೪. ಅಣ್ಣತಮ್ಮಂದಿರು

ರಾಮಲಕ್ಷ್ಮಣಭರತಶತ್ರುಘ್ನರು ನಾಲ್ಕು ಜನರೂ ಅಣ್ಣತಮ್ಮಂದಿರು. ಅವರು ಒಬ್ಬರಲ್ಲೊಬ್ಬರು ಪ್ರೇಮದಿಂದ ಕೂಡಿದವರೂ ತಾಯಿತಂದೆಗಳಲ್ಲಿ ಭಕ್ತಿಯುಳ್ಳವರೂ ಆಗಿದ್ದರು. ಅವರೆಲ್ಲರೂ ವೇದವನ್ನು ಬಲ್ಲವರು. ಎಲ್ಲರೂ ಧನುರ್ವೇದದಲ್ಲಿ ಪ್ರವೀಣರು. ಕೌಸಲ್ಯೆ ಮೊದಲಾದ ಮೂರು ಜನ ತಾಯಿಯರೂ ಅವರಲ್ಲಿ ಹೆಚ್ಚಿನ ಪ್ರೀತಿಯನ್ನು ಮಾಡುತ್ತಿದ್ದರು. ಸವತಿಯ ಮಗನಾದರೂ ಎಲ್ಲಾ ಗುಣಗಳಿಂದಲೂ ಕೂಡಿದ್ದ ರಾಮನಲ್ಲಿ ಸುಮಿತ್ರೆಗೂ ಕೈಕೇಯಿಗೂ ತಮ್ಮ ಮಗನಲ್ಲಿರುವಂತೆಯೇ ಪ್ರೇಮವಿತ್ತು.

ರಾಮನಾದರೋ ಎಲ್ಲರಿಗೂ ಪ್ರಿಯನಾಗಿದ್ದನು. ಏಕೆಂದರೆ ಅವನು ಆನೆಯ ಹೆಗಲಿನಮೇಲೆ ಏರುವದರಲ್ಲಿ ಜಾಣನು, ಕುದುರೆಯ ಬೆನ್ನನ್ನು ಏರುವದರಲ್ಲಿ ನಿಪುಣನು, ರಥವನ್ನು ನಡೆಯಿಸುವದರಲ್ಲಿ ಗಟ್ಟಿಗನು, ಬಿಲ್ಲುಗಾರಿಕೆಯ ವಿದ್ಯೆಯಲ್ಲಿ ಚೆನ್ನಾಗಿ ಕಲಿಸಲ್ಪಟ್ಟವನು (ಕಲಿತವನು) ; ಬಡವರಲ್ಲಿಯೂ ಕುರುಡರಲ್ಲಿಯೂ ಕಿವುಡರಲ್ಲಿಯೂ ಮೂಕರಲ್ಲಿಯೂ ಇಂಥ ಬೇರೆಯವರಲ್ಲಿಯೂ ದಯೆಯುಳ್ಳವನು ; ವಸಿಷ್ಠರೇ ಮೊದಲಾದ ಪೂಜ್ಯರಲ್ಲಿ ಭಕ್ತಿಯುಳ್ಳವನು ; ಮೂರು ಜನ ತಾಯಂದಿರ ಮತ್ತು ತಂದೆಯಾದ ದಶರಥನ ಶುಶ್ರೂಷೆಯಲ್ಲಿ ಬಹಳ ಆಸಕ್ತಿಯುಳ್ಳವನು.

ತಂದೆಯಾದ ದಶರಥನು ಇಂಥ ನಾಲ್ಕು ಜನ ಮೆಚ್ಚಿನ ಮಕ್ಕಳಿಂದ ಸುತ್ತಲ್ಪಟ್ಟು (ಕೂಡಿಕೊಂಡು) ಬಹಳವಾಗಿ ಸಂತೋಷವುಳ್ಳವನಾಗಿದ್ದನು.

## ೧೫. ಪ್ರಹೇಲಿಕಾಃ

ಅಪದೋ ದೂರಗಾಮೀ ಚ ಸಾಕ್ಷರೋ ನ ಚ ಪಣ್ಡಿತಃ ।
ಅಮುಖಃ ಸ್ಫುಟವಕ್ತಾ ಚ ಯೋ ಜಾನಾತಿ ಸ ಪಣ್ಡಿತಃ ॥ ೧ ॥

ಅಸ್ತಿ ಗ್ರೀವಾ ಶಿರೋ ನಾಸ್ತಿ ದ್ವೌ ಭುಜೌ ಕರವರ್ಜಿತೌ ।
ಶೀತಾಹರಣಸಾಮರ್ಥ್ಯೋ ನ ರಾಮೋ ನ ಚ ರಾವಣಃ ॥ ೨ ॥

ದನ್ತೈರ್ಹೀನಃ ಶಿಲಾಭಕ್ಷೀ ನಿರ್ಜೀವೋ ಬಹುಭಾಷಕಃ ।
ಗುಣಸ್ಯೂತಿಸಮೃದ್ಧೋಽಪಿ ಪರಪಾದೇನ ಗಚ್ಛತಿ ॥ ೩ ॥

1. 'ಈದೃಶೈಃ ಚತುರ್ಭಿಃ ಪ್ರಿಯಪುತ್ರೈಃ - ಎಂದು ಅನ್ವಯ.

## ೧೫. ಒಗಟುಗಳು

ಹೆಜ್ಜೆಯಿಲ್ಲ, ದೂರಹೋಗುವವನು ; ಅಕ್ಷರದಿಂದ ಕೂಡಿರುವವನು, ಪಂಡಿತನಲ್ಲ ; ಮುಖವಿಲ್ಲದವನು, ಸ್ಪಷ್ಟವಾಗಿ ಮಾತಾಡುವವನು. ಯಾವನು (ಇದನ್ನು) ತಿಳಿಯುತ್ತಾನೋ ಅವನು ಪಂಡಿತನು.

ಕತ್ತುಂಟು, ತಲೆಯಿಲ್ಲ ; ಎರಡು ತೋಳುಗಳು, ಕೈಯಿಲ್ಲದವನು ; ಶೀತಾಹರಣದಲ್ಲಿ ಶಕ್ತಿಯುಂಟು, ರಾಮನಲ್ಲ, ರಾವಣನೂ ಅಲ್ಲ.

ಹಲ್ಲುಗಳಿಂದ ಬಿಡಲ್ಪಟ್ಟವನು (ಹಲ್ಲಿಲ್ಲದವನು), ಕಲ್ಲುತಿನ್ನುವವನು ; ಜೀವವಿಲ್ಲದವನು, ಬಹಳ ಮಾತಾಡುವವನು ; ಗುಣಗಳ ಹೊಲಿಗೆ ಹೆಚ್ಚಾಗಿರುವವನಾದರೂ ಮತ್ತೊಬ್ಬರ ಕಾಲಿನಿಂದ ಹೋಗುತ್ತಾನೆ (ಮತ್ತೊಬ್ಬರನ್ನು ಅನುಸರಿಸುತ್ತಾನೆ).

(ಒಗಟಿಗೆ ಉತ್ತರಗಳು : ೧. ಬರೆದ ಕಾಗದ. ೨. ಅಂಗಿ, ಇಲ್ಲಿ 'ಶೀತಾಹರಣ' ಎಂದರೆ 'ಸೀತೆಯನ್ನು ತೆಗೆದುಕೊಂಡುಬರುವದು'- ಎಂಬುದು ರಾಮರಾವಣರ ಪರವಾದ ಅರ್ಥ ; 'ಚಳಿಯನ್ನು ಹೋಗಲಾಡಿಸುವದು' ಎಂಬುದು ಅಂಗಿಯ ಪರವಾದ ಅರ್ಥ ; ರಾಮನ ಹೆಂಡತಿಯೆಂಬರ್ಥದಲ್ಲಿಯೂ 'ಶೀತಾ' ಎಂದು ಪ್ರಯೋಗವುಂಟು. ೩. ಜೋಡು, ಇಲ್ಲಿ 'ಗುಣಸ್ಯೂತಿಸಮೃದ್ಧಃ'- ಎಂದರೆ 'ದಾರದ ಹೊಲಿಗೆ ಹೆಚ್ಚಾಗಿರುವದು' ಎಂದು ಜೋಡಿನ ಪರವಾದ ಅರ್ಥ.)

## ೧೬. ಪಾಠಶಾಲಾ

ಇಯಮಸ್ಮಾಕಂ ಪಾಠಶಾಲಾ । ಇಮೇ ಸರ್ವೇ ಛಾತ್ರಾಃ । ಅತ್ರ ಚತ್ವಾರೋ ವಿದ್ಯಾರ್ಥಿವರ್ಗಾಃ ಸನ್ತಿ । ವಯಂ ಪ್ರಥಮವರ್ಗೀಯಾಃ । ಪ್ರತಿದಿನಂ ವಯಂ ಪ್ರಾತಃ ಸಪ್ತವಾದನಸಮಯೇ ಪಾಠಶಾಲಾಯಾಮುಪತಿಷ್ಠಾಮಹೇ । ಘಣ್ಟಾತ್ರಯಂ ಚಾತ್ರಾಧೀಮಹೇ[1] ।

ಇಯಮಧ್ಯಾಪಕಸ್ಯಾಸನೀ । ಸ ತತ್ರೋಪವಿಶತಿ । ಭಗವತ್ಪ್ರಾರ್ಥನಾಯಾ ಅನನ್ತರಮಸ್ಮಾಕಂ ನಾಮಾನಿ ಸಂಪ್ರಕೀರ್ತಯತಿ । ಉಪಸ್ಥಿತಾನಾಂ ಚ ಸಙ್ಖ್ಯಾಂ ಪರಿಗಣಯತಿ । ತತೋ ವಯಂ ಸರ್ವೇ ದಾರುಪೀಠಿಕಾಸು ಉಪವಿಶಾಮಃ । ಏಕೈಕಸ್ಯಾಂ ಪೀಠಿಕಾಯಾಂ ಪಞ್ಚ ಛಾತ್ರಾ ಉಪವಿಶನ್ತಿ । ಅಧ್ಯಾಪಕಃ ಸಂಸ್ಕೃತಂ

[1] ಅತ್ರ-ಅಧೀಮಹೇ.

ಕರ್ಣಾಟಕಭಾಷಾಂ ಚಾಧ್ಯಾಪಯತಿ । ಭೂಗೋಲಶಾಸ್ತ್ರಂ ಶಿಕ್ಷಯತಿ । ಮಹೀಶೂರದೇಶಸ್ಯ ಇತಿಹಾಸಂ ಕಥಯತಿ । ಅಙ್ಕಗಣಿತಮಪಿ ಬೋಧಯತಿ । ಕದಾಚಿದ್ದಾರುಫಲಕೇ ವಾಕ್ಯಾನಿ ಲಿಖಿತ್ವಾ ಛಾತ್ರೈರಪಿ ತಥೈವ ಲೇಖಯತಿ । ಕದಾಚಿತ್ತೇನ ಪಠಿತಾನ್ಯೇವ ವಾಕ್ಯಾನಿ ವಯಂ ಶ್ರುತ್ವಾ ಲಿಖಾಮಃ ॥

ಸಪ್ತಾಹಸ್ಯ ದ್ವಿರ್ಗಣಿತಪ್ರಶ್ನಾನ್ ದಾರುಫಲಕೇ ಲಿಖತಿ । ವಯಂ ತೇಷಾಮುತ್ತರಂ ಪುಸ್ತಕೇ ಲಿಖಾಮಃ ॥

ಇದಂ ಕ್ರೀಡಾಙ್ಗಣಮ್ । ಸಾಯಂಕಾಲೇಽತ್ರ ಬಾಲಕಾಃ ಕನ್ದುಕೈರ್ಗುಲಿಕಾಭಿರ್ಭ್ರಮರೈಕೈರ್ವಾ ಕ್ರೀಡನ್ತಿ । ಕೇಚಿದ್ವೃಕ್ಷೇಷು ಖೇಲನ್ತಿ । ಕೇಚಿತ್ತು ವ್ಯಾಯಮಂ ಕುರ್ವನ್ತಿ ॥

## ೧೬. ಪಾಠಶಾಲೆ

ಇದು ನಮ್ಮ ಪಾಠಶಾಲೆ. ಇವರೆಲ್ಲರೂ ವಿದ್ಯಾರ್ಥಿಗಳು. ಇಲ್ಲಿ ನಾಲ್ಕು ವಿದ್ಯಾರ್ಥಿಗಳ ತರಗತಿಗಳಿವೆ. ನಾವು ಒಂದನೆಯ ತರಗತಿಯವರು. ಪ್ರತಿದಿನವೂ ನಾವು ಬೆಳಗ್ಗೆ ಏಳು (ಘಂಟೆ) ಹೊಡೆಯುವಹೊತ್ತಿಗೆ ಪಾಠಶಾಲೆಯಲ್ಲಿ (ಹಾಜರು) ಇರುತ್ತೇವೆ. ಮತ್ತು ಮೂರು ಘಂಟೆಗಳನ್ನು (ಮೂರು ಘಂಟೆ ಹೊತ್ತು) ಇಲ್ಲಿ ಓದುತ್ತೇವೆ.

ಇದು ಉಪಾಧ್ಯಾಯನ ಕುರ್ಚಿ. ಆತನು ಇಲ್ಲಿ ಕೂತುಕೊಳ್ಳುತ್ತಾನೆ. ದೇವರ ಪ್ರಾರ್ಥನೆಯ ಅನಂತರದಲ್ಲಿ (ಪ್ರಾರ್ಥನೆಯಾದಮೇಲೆ) ನಮ್ಮಗಳ ಹೆಸರುಗಳನ್ನು ಕರೆಯುತ್ತಾನೆ. ಮತ್ತು ಹಾಜರಿದ್ದವರ ಸಂಖ್ಯೆಯನ್ನು ಲೆಕ್ಕಮಾಡಿ ಗೊತ್ತುಪಡಿಸುತ್ತಾನೆ. ಆಮೇಲೆ ನಾವೆಲ್ಲರೂ ಮರದ ಬೆಂಚುಗಳ ಮೇಲೆ ಕೂತುಕೊಳ್ಳುತ್ತೇವೆ. ಒಂದೊಂದು ಬೆಂಚಿನಲ್ಲಿ ಐದು ವಿದ್ಯಾರ್ಥಿಗಳು ಕೂರುತ್ತಾರೆ. ಉಪಾಧ್ಯಾಯನು ಸಂಸ್ಕೃತವನ್ನೂ ಕನ್ನಡಭಾಷೆಯನ್ನೂ ಓದಿಸುತ್ತಾನೆ. ಭೂಗೋಲಶಾಸ್ತ್ರವನ್ನು ಕಲಿಸುತ್ತಾನೆ. ಮೈಸೂರುದೇಶದ ಇತಿಹಾಸವನ್ನು ಹೇಳುತ್ತಾನೆ. ಅಂಕಗಣಿತವನ್ನೂ ಕಲಿಸುತ್ತಾನೆ. ಕೆಲವು ವೇಳೆ ಬರೆಯುವ ಹಲಗೆಯ ಮೇಲೆ ವಾಕ್ಯಗಳನ್ನು ಬರೆದು ವಿದ್ಯಾರ್ಥಿಗಳನ್ನೂ (ವಿದ್ಯಾರ್ಥಿಗಳಿಂದಲೂ) ಹಾಗೆಯೇ ಸ್ಲೇಟುಗಳಲ್ಲಿ ಬರೆಸುತ್ತಾನೆ. ಕೆಲವು ವೇಳೆ ಆತನಿಂದ ಓದಲ್ಪಟ್ಟ ವಾಕ್ಯಗಳನ್ನೇ ನಾವು ಕೇಳಿ ಬರೆಯುತ್ತೇವೆ. ವಾರಕ್ಕೆ ಎರಡುಸಲ ಗಣಿತದ ಪ್ರಶ್ನೆಗಳನ್ನು ಬರೆಯುವ ಹಲಗೆಯಮೇಲೆ ಬರೆಯುತ್ತಾನೆ. ನಾವು ಅವುಗಳಿಗೆ ಉತ್ತರವನ್ನು ಪುಸ್ತಕದಲ್ಲಿ ಬರೆಯುತ್ತೇವೆ.

ಇದು ಆಟದ ಬಯಲು. ಸಾಯಂಕಾಲದಲ್ಲಿ ಇಲ್ಲಿ ಹುಡುಗರು ಚೆಂಡುಗಳಿಂದ, ಗೋಲಿಗಳಿಂದ ಅಥವಾ ಬುಗುರಿಗಳಿಂದ ಆಡುತ್ತಾರೆ. ಕೆಲವರು ಮರಗಳಲ್ಲಿ ಆಟವಾಡುತ್ತಾರೆ. ಕೆಲವರಾದರೋ ಅಂಗಸಾಧನೆಯನ್ನು ಮಾಡುತ್ತಾರೆ.

## ೧೭. ಪಾಕಶಾಲಾ

ಇದಂ ಮಹಾನಸಮ್ । ಅತ್ರ ಮಮ ಮಾತೈವ ಪಾಕಂ ಕರೋತಿ । ಉತ್ಸವದಿನೇಷು ಸೂದಾನ್ ಪಾಕೇ ನಿಯೋಕ್ಷ್ಯಾಮಃ ॥

ಕುಡ್ಯೇ ಚತುರಸ್ರಾಃ ಖಾನಯೋ ವಿದ್ಯನ್ತೇ । ತಾಸು ರಜ್ಜುಕರಣ್ಡಕೇಷು ನಿಹಿತಾ ಮರೀಚಾಃ, ಜೀರಕಾಃ, ಸರ್ಷಪಾಃ, ತಿಲಾಃ, ಕುಸ್ತುಮ್ಬುರೀ, ಆರ್ದ್ರಕಂ, ಶುಣ್ಠೀ, ಹಿಙ್ಗು, ಹರಿದ್ರಾ, ಮೇಥಿಕಾ- ಇತ್ಯಾದಯಃ ಪದಾರ್ಥಾಃ ಸನ್ತಿ । ಮೇಥೀಚೂರ್ಣಂ, ಮಾಷಚೂರ್ಣಂ, ತಥಾ ಅನ್ಯಾನಿ ಚ ತಾದೃಶಾನಿ ಚೂರ್ಣಾನಿ ಪಿಹಿತಪಾತ್ರೇಷು ರಕ್ಷಿತಾನಿ ವರ್ತನ್ತೇ । ವೇಸವಾರಶ್ಚ ಪೃಥಕ್ಕರಣ್ಡಕೇ ನಿಹಿತೋಽಸ್ತಿ । ತಣ್ಡುಲಾಃ, ಆಢಕೀದಾಲೀ, ತಿನ್ತ್ರಿಡೀಕಂ, ರಕ್ತಮರೀಚಫಲಾನಿ- ಏತಾದೃಶಾನಿ ವಸ್ತೂನಿ ನಾತ್ರ ಸನ್ತಿ। ತಾನಿ ತು ಕೋಷ್ಠಾಗಾರೇ ಬೃಹತ್ಸು ಪಾತ್ರೇಷು ನಿಧೀಯನ್ತೇ ॥

ಇಯಂ ಚುಲ್ಲೀ । ಅತ್ರ ಪಾಕಾರ್ಥಂ ಸ್ಥಾಲೀ ಅಧಿಶ್ರಿಯತೇ । ಪಶ್ಯ, ಪ್ರಧೂಮಿತೋಽಗ್ನಿಃ । ಮಾತಾ ಧಮನ್ಯಾ ಧಮತಿ । ಇದಾನೀಂ ವಹ್ನಿರುಜ್ಜ್ವಲತಿ । ವಿಸ್ಫುಲಿಙ್ಗಾಃ ಸ್ಫುಟನ್ತಿ । ಮಾತಾ ತಣ್ಡುಲಾನ್ ಗಲನ್ಯಾಂ ಜಲೇನ ಪ್ರಕ್ಷಾಲ್ಯ ಸ್ಥಾಲ್ಯಾಂ ಕ್ಷಿಪತಿ, ದರ್ವೀಮಾದಾಯ ಆಲೋಡಯತಿ ಚ । ಅಧುನಾ ಸ್ಥಾಲೀಂ ಶರಾವೇಣ ಪ್ರಚ್ಛಾದಯತಿ । ಚುಲ್ಯಾ ದಕ್ಷಿಣೇ ಪಕ್ಷೇ ಆಢಕೀದಾಲೀ ಕ್ವಥತಿ । ತದಪಿ ಸುಪಕ್ವಮಿವ ಭಾತಿ । ಇದಾನೀಂ ಮಾತಾ ಚಿಞ್ಚಾರಸಂ ಕಿಂಚಿದ್ಗುಡಂ ಬೃಹನ್ಮರೀಚಚೂರ್ಣಂ ಚ ಸಮ್ಮಿಶ್ರ್ಯ ದಾಲೀಕ್ವಾಥೇ ನಿಸಯತಿ । ಲವಣಮಪಿ ಕಿಂಚಿತ್ ಕ್ಷಿಪತಿ । ಘೃತಸಂಸ್ಕೃತಾನ್ ಕತಿಚಿತ್ ಸರ್ಷಪಾನಪಿ ಸಮ್ಮಿಶ್ರಯತಿ । ಅಧುನಾ ಪರ್ಪಟಕಾನ್ ಅಙ್ಗಾರೋಪರಿ ತಾಪಯತಿ ॥

## ೧೭. ಅಡಿಗೆಯ ಮನೆ

ಇದು ಅಡಿಗೆಯ ಮನೆ. ಇಲ್ಲಿ ನಮ್ಮ ತಾಯಿಯೇ ಅಡಿಗೆಯನ್ನು ಮಾಡುತ್ತಾಳೆ. ಹಬ್ಬದ ದಿನಗಳಲ್ಲಿ ಅಡಿಗೆಯವರನ್ನು ಅಡಿಗೆಯಲ್ಲಿ (ಅಡಿಗೆ ಮಾಡುವದಕ್ಕೆ) ಗೊತ್ತುಮಾಡುವೆವು.

ಗೋಡೆಯಲ್ಲಿ ಚೌಕನೆಯ ಗೂಡುಗಳು ಇವೆ. ಅವುಗಳಲ್ಲಿ ತವರದ ಡಬ್ಬಿಗಳಲ್ಲಿಡಲ್ಪಟ್ಟ ಮೆಣಸು, ಜೀರಿಗೆ, ಸಾಸುವೆ, ಎಳ್ಳು, ಕೊತ್ತುಂಬರಿ, ಹಸಿಶುಂಠಿ, ಶುಂಠಿ, ಇಂಗು, ಅರಿಶಿನ, ಮೆಂಥ್ಯ- ಇವೇ ಮುಂತಾದ ಪದಾರ್ಥಗಳು ಇವೆ. ಮೆಂಥ್ಯದ ಹಿಟ್ಟು, ಉದ್ದಿನ ಪುಡಿ, ಮತ್ತು ಇನ್ನೂ ಅಂಥ ಪುಡಿಗಳು ಮುಚ್ಚಲ್ಪಟ್ಟ ಪಾತ್ರೆಗಳಲ್ಲಿ ಕಾಪಾಡಲ್ಪಟ್ಟಿವೆ (ಇಟ್ಟಿರುತ್ತವೆ). ಪಲ್ಯದ ಪುಡಿಯೂ ಬೇರೆ ಭರಣಿಯಲ್ಲಿ ಇಡಲ್ಪಟ್ಟಿದೆ. ಅಕ್ಕಿ, ತೊಗರಿಬೇಳೆ, ಹುಣಸೆಹಣ್ಣು, ಮೆಣಸಿನ ಕಾಯಿ- ಇಂಥ ವಸ್ತುಗಳು ಇಲ್ಲಿ ಇಲ್ಲ. ಅವುಗಳಾದರೋ ಉಗ್ರಾಣದಲ್ಲಿ ದೊಡ್ಡ ಪಾತ್ರೆಗಳಲ್ಲಿ ಇಡಲ್ಪಟ್ಟಿವೆ.

ಇದು ಒಲೆ. ಇಲ್ಲಿ ಅಡಿಗೆಗಾಗಿ ತಪ್ಪಲೆಯು (ಕಾಯುವದಕ್ಕೆ) ಇಡಲ್ಪಡುತ್ತದೆ. ನೋಡು, ಬೆಂಕಿ ಹೊಗೆಯಾಡಿತು. ತಾಯಿ ಊದುಗೊಳವೆಯಿಂದ ಊದುತ್ತಾಳೆ. ಈಗ ಬೆಂಕಿ ಹತ್ತಿಕೊಳ್ಳುತ್ತದೆ, ಕಿಡಿಗಳು ಹಾರುತ್ತವೆ. ತಾಯಿ ಅಕ್ಕಿಯನ್ನು ಜರಡಿಯಲ್ಲಿ ನೀರಿನಿಂದ ತೊಳೆದು ತಪ್ಪಲೆಯಲ್ಲಿ ಹಾಕುತ್ತಾಳೆ, ಮತ್ತು ಸೌಟನ್ನು ತೆಗೆದುಕೊಂಡು ತೊಳಸುತ್ತಾಳೆ. ಈಗ ಮುಚ್ಚುವ ಪಾತ್ರೆಯಿಂದ ತಪ್ಪಲೆಯನ್ನು ಮುಚ್ಚುತ್ತಾಳೆ. ಒಲೆಯ ಬಲಗಡೆಯಲ್ಲಿ (ಒಲೆಯ ಬಲದ ಕೋಡಲೆಯಲ್ಲಿ) ತೊಗರಿಬೇಳೆ ಕುದಿಯುತ್ತಿದೆ. ಅದೂ ಚೆನ್ನಾಗಿ ಬೆಂದಂತೆ ಕಾಣುತ್ತದೆ. ಈಗ ತಾಯಿಯು ಹುಣಸೆಹಣ್ಣಿನ ರಸವನ್ನೂ ಸ್ವಲ್ಪ ಬೆಲ್ಲವನ್ನೂ ಮೆಣಸಿನಕಾಯಿಯ ಪುಡಿಯನ್ನೂ ಸೇರಿಸಿ ಬೇಳೆಯ ಕಟ್ಟಿನೊಳಕ್ಕೆ ಸುರಿಯುತ್ತಾಳೆ. ಉಪ್ಪನ್ನೂ ಸ್ವಲ್ಪ ಹಾಕುತ್ತಾಳೆ, ತುಪ್ಪದಲ್ಲಿ ಒಗ್ಗರಣೆಮಾಡಿದ ಸ್ವಲ್ಪ ಸಾಸುವೆಯನ್ನು ಸೇರಿಸುತ್ತಾಳೆ. ಈಗ ಹಪ್ಪಳಗಳನ್ನು ಬೆಂಕಿಯಮೇಲೆ ಸುಡುತ್ತಾಳೆ.

## ೧೮. ಪ್ರದೀಪಸ್ಯ ಕಥಾ

ಆಷಾಢಮಾಸೇ ಕಸ್ಯಾಂಚಿನ್ನಿಶೀಥಿನ್ಯಾಂ[1] ಪ್ರಭೂತೇನ ತೈಲೇನಾಭಿಷಿಕ್ತಃ ಸ್ಥೂಲಯಾ ವರ್ತ್ಯಾ ಚ ಸಂಯುಕ್ತಃ ಕಶ್ಚನ ದೀಪಃ ಸಮನ್ತತಃ ಪ್ರಭಾಂ ಪ್ರಸಾರಯತಿ ಸ್ಮ । ಸ ಚ ತಾವತ್ತೈವ ಚಾತ್ಮಾನಂ[2] ಬಹುಮನ್ಯತೇ । ವಾರಂ ವಾರಂ ವಿಕತ್ಥತೇ ಚ- 'ಅನ್ಧಕಾರಮಹಮೇವ ಖಲು ನಾಶಯಿತುಂ ಪ್ರಭವಾಮಿ । ನೂನಮಿದಾನೀಂ ಸೂರ್ಯಾದಪಿ ಪ್ರಕೃಷ್ಟಂ ಪ್ರಕಾಶಮಹಂ ಯಚ್ಛಾಮೀ'ತಿ ॥

ಕಸ್ಯಾಂಚಿತ್ - ನಿಶೀಥಿನ್ಯಾಂ. 2. ತಾವತಾ-ಏವ-ಚ-ಆತ್ಮಾನಂ.

ಅತ್ರಾನ್ತರೇ ಬಹಿರ್ಮಹಾನ್[1] ವಾಯುಃ ಸಮುತ್ಥಿತಃ । ಅಪವರಕಸ್ಥೋಽಪಿ ದೀಪಃ ಸದ್ಯ ಏವ ವಾತಾಹತ್ಯಾ ನಿರ್ವಾಣೋಽಭವತ್ । ಅಥ ದೀಪಸ್ವಾಮೀ ತಂ ಪುನಃ ಪ್ರಜ್ವಾಲ್ಯಾಹ- 'ಅರೇ,[2] ಇತಃಪರಮತಿಗರ್ವಂ ಮಾ ವಹ । ಅಭಿಮಾನಂ ಹಿತ್ವಾ ವಿನಯೇನೈವ ಪ್ರಕಾಶಿತುಂ ಯತಸ್ವ । ಯಸ್ಮಾದಿಮಾಸ್ತಾರಕಾ[3] ಅಪಿ ಪುನಃ ಪ್ರಜ್ವಾಲನಮಪೇಕ್ಷನ್ತೇ, ಕಿಂ ಪುನಸ್ತ್ವಾದೃಶ'[4] ಇತಿ ॥

ನ ಮಣೇರಿತೋಽಧಿಕಾ ಭಾ ನೋ ಮೃದುತಾ ನ ಪ್ರಕಾಶಸಮತಾ ವಾ।
ಅಚಿರಸ್ಥಿತಿರಿತಿ ದೀಪೋ ನ ಹಿ ಬಹುಮೂಲ್ಯೋಽಭವತ್ಪ್ರಾಯಃ ॥

## ೧೮. ದೊಡ್ಡದೀಪದ ಕಥೆ

ಆಷಾಢಮಾಸದಲ್ಲಿ ಒಂದಾನೊಂದು ರಾತ್ರಿಯಲ್ಲಿ ಬಹಳ ಎಣ್ಣೆಯನ್ನು ಹಾಕಿ(ದ್ದ), ದೊಡ್ಡ ಬತ್ತಿಯಿಂದ ಕೂಡಿಸಿದ್ದ, ಒಂದಾನೊಂದು ದೀಪವು ಸುತ್ತಲೂ ಬೆಳಕನ್ನು ಹರಡುತ್ತಲಿತ್ತು ; ಅದು ಅಷ್ಟರಿಂದಲೇ ತನ್ನನ್ನು ದೊಡ್ಡವನೆಂದು ತಿಳಿದುಕೊಂಡಿದೆ (ತಿಳಿದುಕೊಂಡಿತ್ತು). ಮತ್ತು ಮತ್ತೆ ಮತ್ತೆ ಜಂಭಕೊಚ್ಚಿಕೊಳ್ಳುತ್ತದೆ (ಜಂಭಕೊಚ್ಚಿಕೊಳ್ಳುತ್ತಿತ್ತು) ; 'ನಿಜವಾಗಿ ಈಗ ಸೂರ್ಯನಿಗಿಂತ ಹೆಚ್ಚಾದ ಬೆಳಕನ್ನು ತಾನು ಕೊಡುತ್ತಲಿದ್ದೇನೆ' ಎಂದು.

ಇಷ್ಟರಲ್ಲಿಯೇ ಹೊರಗೆ ದೊಡ್ಡ ಗಾಳಿಯು ಎದ್ದಿತು. ಕೋಣೆಯಲ್ಲಿದ್ದರೂ ದೀಪವು ಕೂಡಲೆ ಗಾಳಿಯ ಹೊಡೆತದಿಂದ ಆರಿದ್ದಾಯಿತು (ಆರಿಹೋಯಿತು). ಅನಂತರದಲ್ಲಿ ದೀಪದೊಡೆಯನು ಅದನ್ನು ಮತ್ತೆ ಹೊತ್ತಿಸಿ ಹೇಳುತ್ತಾನೆ (ಹೀಗೆಂದನು) : 'ಎಲೈ, ಇನ್ನು ಮೇಲಾದರೂ ಗರ್ವವನ್ನು ಹೊಂದಬೇಡ (ಗರ್ವ ಪಡದಿರು). ಹೆಮ್ಮೆಯನ್ನು ಬಿಟ್ಟು ವಿನಯದಿಂದಲೇ ಬೆಳಗುವದಕ್ಕೆ ಯತ್ನಿಸು. ಏಕೆಂದರೆ ಈ ನಕ್ಷತ್ರಗಳು ಕೂಡ ಮತ್ತೆ ಹೊತ್ತಿಸುವದನ್ನು ಬಯಸುತ್ತವೆ. ನಿನ್ನಂಥವನು (ಮತ್ತೆ ಹೊತ್ತಿಸುವದನ್ನು ಬಯಸುತ್ತಾನೆಂದು) ಹೇಳತಕ್ಕದ್ದೇನಿದೆ[5] ?'

---

1. ಬಹಿಃ-ಮಹಾನ್.

2. ಕಡಿಮೆಯ ದರ್ಜೆಯವರನ್ನು ಕರೆಯುವದಕ್ಕೆ ಇದನ್ನುಪಯೋಗಿಸುವರು.

3. ಯಸ್ಮಾತ್-ಇಮಾಃ- ತಾರಕಾಃ-ಅಪಿ.

4. 'ತ್ವಾದೃಶಃ ಪುನಃ ಪ್ರಜ್ವಾಲನಂ ಅಪೇಕ್ಷತೇ ಇತಿ ಕಿಂ ಪುನರ್ವಕ್ತವ್ಯಂ ?' ಎಂದು ಅಧ್ಯಾಹಾರಮಾಡಿಕೊಂಡು ಅರ್ಥಮಾಡಬೇಕು. 'ನಿನ್ನಂಥವನು ಮತ್ತೆ ಹೊತ್ತಿಸುವದನ್ನು ಅಪೇಕ್ಷಿಸುತ್ತಾನೆಂದು ಮತ್ತೆ ಹೇಳಬೇಕಾದದ್ದೇನು ?,- ಎಂದು ವಾಕ್ಯದ ಅರ್ಥ.

5. ಕ್ರಿಯಾಪದವನ್ನು ಮೊದಲೇ ಹೇಳಿದ್ದರೆ 'ಇತಿ' ಎಂಬುದನ್ನು ಕನ್ನಡಿಸಬೇಕಾದದಿಲ್ಲ.

ರತ್ನಕ್ಕೆ ಇದಕ್ಕಿಂತಲೂ ಹೆಚ್ಚಿನ ಬೆಳಕಿಲ್ಲ, ಮೆದುವಿಲ್ಲ, ಬೆಳಕಿನಲ್ಲಿ ಸಮವಾಗಿ ರುವದೂ ಇಲ್ಲ. ಬಲುಹೊತ್ತು ಇರತಕ್ಕದ್ದಲ್ಲವೆಂತಲೇ (ಸ್ವಲ್ಪ ಹೊತ್ತು ಇರತಕ್ಕದ್ದು ಎಂಬ ಕಾರಣದಿಂದಲೇ) ದೀಪವು ಪ್ರಾಯಶಃ ಬಹು ಬೆಲೆಯುಳ್ಳದ್ದಾಗಲಿಲ್ಲ (ವೋ, ಏನೋ).

## ೧೯. ಸೂರ್ಯಮಣ್ಡಲಂ ಚನ್ದ್ರಮಣ್ಡಲಂ ಚ

ಸೂರ್ಯಬಿಮ್ಬಂ ನಾಮೈಕೋ[1] ಮಹಾನುಷ್ಣಗೋಲಃ । ಸ ಚ ಗೋಲೋ ಭೂಮೇರ್ಬಹುದೂರೇ ವರ್ತತೇ । ಅತ ಏವ ತಸ್ಯ ಪರಿಮಾಣಮಲ್ಪಂ ದೃಶ್ಯತೇ । ಚನ್ದ್ರಬಿಮ್ಬಮಪಿ ಸೂರ್ಯಬಿಮ್ಬಮಿವ ದೃಶ್ಯತೇ । ವಸ್ತುತಸ್ತು[2] ತಸ್ಯ ಪರಿಮಾಣಮಲ್ಪೀಯಃ । ಯತಶ್ಚನ್ದ್ರೋ ಭೂಮೇಃ ಸೂರ್ಯಾದಪಿ[3] ಸಮೀಪತರಃ ॥

ಸೂರ್ಯಾದೇವ ಭೂಮೌ ಪ್ರಕಾಶಃ ಸಮಾಗಚ್ಛತಿ । ಪ್ರಕಾಶಂ ವಿನಾ[4] ನ ಕಿಂಚಿದಪಿ ದ್ರಷ್ಟುಂ ಶಕ್ಯತೇ । ನಾಪಿ ಕಶ್ಚನ ವ್ಯವಹಾರೋ ಭವತಿ । ಸೂರ್ಯಾದುಷ್ಣಮಪಿ ಭೂಮೌ ಸಮಾಗಚ್ಛತಿ । ಉಷ್ಣಸ್ಯ ಪ್ರಭಾವಾದೇವ ವೃಕ್ಷಾ ಗುಲ್ಮಾಸ್ತೃಣಾದಯಶ್ಚ[5] ಪ್ರರೋಹನ್ತಿ, ಶಲಾಟವಶ್ಚ ಪಚ್ಯನ್ತೇ । ಅಹನಿ ಸೂರ್ಯಸ್ಯಾತಪಃ[6] ಕಾನ್ತಿಶ್ಚ ಸರ್ವೈರನುಭೂಯೇತೇ ॥

ಅಸ್ತಮಿತೇ ಸೂರ್ಯೇ[7] ಚನ್ದ್ರ ಉದೇತಿ । ಚನ್ದ್ರೋಽಪಿ ಭಾಸುರ ಏವ ; ಪರಂ ತು ತಸ್ಯ ಪ್ರಕಾಶಃ ಸೌಮ್ಯಃ । ಸೂರ್ಯಂ ವಯಂ ಸಾಕ್ಷಾನ್ನಿರೀಕ್ಷಿತುಂ ನ ಪ್ರಭವಾಮಃ । ತಸ್ಯ ತೇಜಃ ಪ್ರತಿಹನ್ತಿ ನೇತ್ರಮ್ । ಚನ್ದ್ರಬಿಮ್ಬಂ ತು ಸುಖೇನೈವ ಚಿರಾಯ ದ್ರಷ್ಟಂ ಶಕ್ಯತೇ । ಚನ್ದ್ರಸ್ಯ ಕಿರಣಾಃ ಶೀತಾಃ । ಅತಃ ಶೀತಕಿರಣ ಇತ್ಯಪಿ ತಸ್ಯ

---

1. ನಾಮ-ಏಕಃ,
2. ವಸ್ತುತೇ-ತು.
3. ಸೂರ್ಯಾತ್ - ಅಪಿ.
4. 'ವಿನಾ' ಎಂಬುದರ ಹಿಂದೆ ದ್ವಿತೀಯಾ, ತೃತೀಯಾ, ಪಞ್ಚಮೀ-ಇವುಗಳಲ್ಲಿ ಯಾವದಾದರೊಂದು ವಿಭಕ್ತಿಯು ಬರುವದು.
5. ಗುಲ್ಮಾಃ-ತೃಣಾದಯಃ-ಚ. 6. ಸೂರ್ಯಸ್ಯ - ಆತಪಃ
7. ಸೂರ್ಯೇ ಅಸ್ತಮಿತೇ (ಆ). ಹೀಗೆ ಸಪ್ತಮೀವಿಭಕ್ತಿಯ ನಾಮದ ಮುಂದೆ ಸಪ್ತಮೀವಿಭಕ್ತಿಯ ಕೃದಂತವು ಬಂದರೆ 'ಸತಿಸಪ್ತಮಿ' ಎನ್ನುವರು. ಇಲ್ಲಿ ನಾಮಕ್ಕೆ ಪ್ರಥಮಾವಿಭಕ್ತಿಯ ಅರ್ಥವನ್ನು ಹೇಳಬೇಕು. 'ಸೂರ್ಯನು ಅಸ್ತಮಿಸಲು'- ಎಂಬುದು ಇದರ ಒಟ್ಟು ಅರ್ಥ.

ನಾಮ ಭವತಿ । ಸೂರ್ಯಸ್ಯ ತು ಉಷ್ಣಾಃ ಕಿರಣಾಃ । ಅಥ ಏವ ತಸ್ಯ ಉಷ್ಣಕಿರಣ ಇತ್ಯಪಿ ನಾಮ ಭವತಿ ॥

## ೧೯. ಸೂರ್ಯಮಂಡಲವೂ ಚಂದ್ರಮಂಡಲವೂ

ಸೂರ್ಯಬಿಂಬವೆಂಬುದು ಒಂದು ದೊಡ್ಡ ಬಿಸಿಯ ಗುಂಡು. ಆ ಗುಂಡು ಭೂಮಿಯ ದೆಸೆಯಿಂದ (ಭೂಮಿಗೆ) ಬಹು ದೂರದಲ್ಲಿದೆ. ಆದ್ದರಿಂದಲೇ ಅದರ ಪರಿಮಾಣವು ಸ್ವಲ್ಪವಾಗಿ ಕಾಣಲ್ಪಡುತ್ತದೆ (ಕಾಣುತ್ತದೆ). ಚಂದ್ರಬಿಂಬವೂ ಸೂರ್ಯಬಿಂಬದ ಹಾಗೆ ಕಾಣುತ್ತದೆ. ಆದರೆ ನಿಜವಾಗಿ ಅದರ ಪರಿಮಾಣವು (ಇನ್ನೂ) ಕಡಿಮೆ. ಏಕೆಂದರೆ ಚಂದ್ರನು ಭೂಮಿಯ ದೆಸೆಯಿಂದ (ಭೂಮಿಗೆ) ಸೂರ್ಯನಿಗಿಂತಲೂ ಹತ್ತಿರವಾಗಿರುತ್ತಾನೆ.

ಸೂರ್ಯನ ದೆಸೆಯಿಂದಲೇ (ಸೂರ್ಯನಿಂದಲೇ) ಭೂಮಿಯಲ್ಲಿ (ಭೂಮಿಗೆ) ಬೆಳಕು ಬರುತ್ತದೆ. ಬೆಳಕಿಲ್ಲದೆ ಏನನ್ನೂ ನೋಡುವದಕ್ಕಾಗುವದಿಲ್ಲ. ಯಾವ ಕೆಲಸವೂ ಆಗುವದಿಲ್ಲ. ಸೂರ್ಯನ ದೆಸೆಯಿಂದ (ಸೂರ್ಯನಿಂದ) ಉಷ್ಣವೂ ಭೂಮಿಗೆ ಬರುತ್ತದೆ. ಉಷ್ಣದ ಶಕ್ತಿಯಿಂದಲೇ ಮರಗಳೂ ಗಿಡಗಳೂ ಹುಲ್ಲು ಮುಂತಾದವುಗಳೂ ಬೆಳೆಯುತ್ತವೆ, ಮತ್ತು ಕಾಯಿಗಳು ಮಾಗುತ್ತವೆ. ಹಗಲಿನಲ್ಲಿ ಸೂರ್ಯನ ಬಿಸಿಲೂ ಬೆಳಕೂ ಎಲ್ಲರಿಂದಲೂ ಅನುಭವಿಸಲ್ಪಡುತ್ತವೆ.

ಸೂರ್ಯನು ಮುಳುಗುವಾಗ ಚಂದ್ರನು ಹುಟ್ಟುತ್ತಾನೆ. ಚಂದ್ರನೂ ಪ್ರಕಾಶವುಳ್ಳವನಾಗಿಯೇ ಇರುತ್ತಾನೆ ; ಆದರೆ ಅವನ ಬೆಳಕು (ಕಣ್ಣಿಗೆ) ಹಿತವಾಗಿರುತ್ತದೆ. ಸೂರ್ಯನನ್ನು ನಾವು ನೇರಾಗಿ ನೋಡುವದಕ್ಕೆ ಶಕ್ತರಾಗುವದಿಲ್ಲ (ನೋಡಲಾಗುವದಿಲ್ಲ). ಅವನ ಪ್ರಕಾಶವು ಕಣ್ಣನ್ನು ಕುಕ್ಕುತ್ತದೆ. ಆದರೆ ಚಂದ್ರಬಿಂಬವು ಸುಲಭವಾಗಿಯೇ ಬಲುಹೊತ್ತು ನೋಡುವದಕ್ಕೆ ಆಗುತ್ತದೆ. ಚಂದ್ರನ ಕಿರಣಗಳು ತಣ್ಣಗಿರುತ್ತವೆ. ಆದ್ದರಿಂದ ಶೀತಕಿರಣನೆಂದೂ ಅವನಿಗೆ ಹೆಸರು ಉಂಟು. ಆದರೆ ಸೂರ್ಯನ ಕಿರಣಗಳು ಬೆಚ್ಚಗಿರುತ್ತವೆ. ಆದ್ದರಿಂದಲೇ ಅವನಿಗೆ ಉಷ್ಣಕಿರಣನೆಂದು ಹೆಸರುಂಟು.

## ೨೦. ವಿದ್ಯಾ

ವಿದ್ಯಾ ದದಾತಿ ವಿನಯಂ[1] ವಿನಯಾದ್ಯಾತಿ ಪಾತ್ರತಾಮ್ ।
ಪಾತ್ರತ್ವಾದ್ಧನಮಾಪ್ನೋತಿ ಧನಾದ್ಧರ್ಮಂ ತತಃ ಸುಖಮ್ ॥೧॥

1. ವಿದ್ಯಾ ವಿನಯಂ ದದಾತಿ, ವಿನಯಾತ್ ಪಾತ್ರತಾಂ ಯಾತಿ, ಪಾತ್ರತ್ವಾತ್ ಧನಂ ಆಪ್ನೋತಿ. ಧನಾತ್ ಧರ್ಮಂ (ಆಪ್ನೋತಿ), ತತಃ ಸುಖಂ (ಆಪ್ನೋತಿ) -ಎಂದು ಅನ್ವಯ.

ಮಾತೇವ ರಕ್ಷತಿ ಪಿತೇವ ಹಿತೇ ನಿಯುಙ್ಕ್ತೇ
ಕಾನ್ತೇವ ಚಾಭಿರಮಯತ್ಯಪನೀಯ ಖೇದಮ್[1] ।
ಲಕ್ಷ್ಮೀಂ ತನೋತಿ ವಿತನೋತಿ ಚ ದಿಕ್ಷು ಕೀರ್ತಿಂ[2]
ಕಿಂ ಕಿಂ ನ ಸಾಧಯತಿ ಕಲ್ಪಲತೇವ ವಿದ್ಯಾ ? ॥ ೨ ॥

ವಿದ್ವತ್ತ್ವಂ ಚ ನೃಪತ್ವಂ ಚ ನೈವ ತುಲ್ಯಂ ಕದಾಚನ ।
ಸ್ವದೇಶೇ ಪೂಜ್ಯತೇ ರಾಜಾ[3] ವಿದ್ವಾನ್ ಸರ್ವತ್ರ ಪೂಜ್ಯತೇ ॥ ೩ ॥

ವಿದ್ಯಾ ನಾಮ ನರಸ್ಯ ರೂಪಮಧಿಕಂ[4] ಪ್ರಚ್ಛನ್ನಗುಪ್ತಂ ಧನಂ
ವಿದ್ಯಾ ಭೋಗಕರೀ ಯಶಃಸುಖಕರೀ ವಿದ್ಯಾ ಗುರೂಣಾಂ ಗುರುಃ ।
ವಿದ್ಯಾ ಬನ್ಧುಜನೋ ವಿದೇಶಗಮನೇ[5] ವಿದ್ಯಾ ಪರಾ ದೇವತಾ
ವಿದ್ಯಾ ರಾಜಸು ಪೂಜ್ಯತೇ ನ ಹಿ ಧನಂ[6] ವಿದ್ಯಾವಿಹೀನಃ ಪಶುಃ ॥ ೪ ॥

## ೨೦. ವಿದ್ಯೆ

ವಿದ್ಯೆಯು ವಿನಯವನ್ನು ಕೊಡುತ್ತದೆ ; ವಿನಯದಿಂದ ಯೋಗ್ಯತೆಯನ್ನು ಹೊಂದುತ್ತಾನೆ. ಯೋಗ್ಯತೆಯಿಂದ ಹಣವನ್ನು ಪಡೆಯುತ್ತಾನೆ ; ಹಣದಿಂದ ಧರ್ಮವನ್ನು (ಹೊಂದುತ್ತಾನೆ) ; ಅದರಿಂದ ಸುಖವನ್ನು (ಹೊಂದುತ್ತಾನೆ).

ತಾಯಿಯಂತೆ ಕಾಪಾಡುತ್ತದೆ ; ತಂದೆಯಂತೆ ಹಿತವಾದದ್ದರಲ್ಲಿ ಕಟ್ಟುಮಾಡುತ್ತದೆ ; ಹೆಂಡತಿಯಂತೆ ಆಯಾಸವನ್ನು ಹೋಗಲಾಡಿಸಿ ಸಂತೋಷಗೊಳಿಸುತ್ತದೆ ; ಸಂಪತ್ತನ್ನುಂಟುಮಾಡುತ್ತದೆ ; ಮತ್ತು ದಿಕ್ಕುಗಳಲ್ಲಿ (ಎಲ್ಲಾ ಕಡೆಗಳಲ್ಲಿಯೂ) ಕೀರ್ತಿಯನ್ನು ಹರಡುತ್ತದೆ. ವಿದ್ಯೆಯೇ ಕಲ್ಪಲತೆಯಂತೆ ಏನೇನನ್ನು ಸಾಧಿಸಿ(ಕೊಡ)ಲಾರದು ?

1. ಮಾತಾ ಇವ ರಕ್ಷತಿ, ಪಿತಾ ಇವ ಹಿತೇ ನಿಯುಙ್ಕ್ತೇ, ಕಾನ್ತಾ ಇವ ಚ ಖೇದಂ ಅಪನೀಯ ಅಭಿರಮಯತಿ, ಲಕ್ಷ್ಮೀಂ ತನೋತಿ, ದಿಕ್ಷು ಕೀರ್ತಿಂ ವಿತನೋತಿ ಚ ; ವಿದ್ಯಾ ಕಲ್ಪಲತಾ ಇವ ಕಿಂಕಿಂ ನ ಸಾಧಯತಿ ?- ಎಂದು ಅನ್ವಯ.
2. ಕೀರ್ತಿಂ ಚ ದಿಕ್ಷು ವಿತನೋತಿ ತನೋತಿ ಕಾನ್ತಿಂ- ಎಂದು ಪಾಠವುಂಟು.
3. ರಾಜಾ ಸ್ವದೇಶೇ ಪೂಜ್ಯತೇ.
4. ವಿದ್ಯಾ ನಾಮ ನರಸ್ಯ ಅಧಿಕಂ ರೂಪಂ (ಅ).
5. ವಿದೇಶಗಮನೇ ವಿದ್ಯಾ ಬನ್ಧುಜನಃ (ಅ).
6. ಧನಂ ನ (ಪೂಜ್ಯತೇ) (ಅ).

ಪಾಂಡಿತ್ಯವೂ ದೊರೆತನವೂ ಎಂದಿಗೂ (ಒಂದಕ್ಕೊಂದು) ಸಮವಲ್ಲ ! ದೊರೆಯು ತನ್ನ ರಾಜ್ಯದಲ್ಲಿ ಗೌರವಿಸಲ್ಪಡುವನು, ವಿದ್ವಾಂಸನು ಎಲ್ಲೆಲ್ಲಿಯೂ ಗೌರವಿಸಲ್ಪಡುವನು.

ವಿದ್ಯೆಯೆಂಬುದು ಮನುಷ್ಯನಿಗೆ ಹೆಚ್ಚಿನ ಸೌಂದರ್ಯವು, ಬಚ್ಚಿಟ್ಟು ಕಾಪಾಡಿದ ಹಣವು ; ವಿದ್ಯೆಯು ಭೋಗವನ್ನುಂಟುಮಾಡುವದು, ಕೀರ್ತಿಯನ್ನೂ ಸುಖವನ್ನೂ ಉಂಟುಮಾಡುವದು. ವಿದ್ಯೆಯು ಗುರುಗಳಿಗೆ(ಲ್ಲ) ಗುರುವು ; ವಿದ್ಯೆಯು ಪರದೇಶಕ್ಕೆ ಹೋಗುವಲ್ಲಿ ನೆಂಟನಾಗಿರುವದು ; ವಿದ್ಯೆಯು ಹೆಚ್ಚಿನ ದೇವರು : ವಿದ್ಯೆಯು ರಾಜರಲ್ಲಿ ಪೂಜಿಸಲ್ಪಡುವದು ; ಹಣವು (ಪೂಜಿಸಲ್ಪಡುವದಿ)ಲ್ಲ ; ವಿದ್ಯೆಯಿಲ್ಲದವನು ಪಶುವು.

## ೨೧. ಭೃತ್ಯಾಃ

ಕೋಽತ್ರ ಭೋಃ ? ಆರ್ಯ, ಕಿಂ ಕರವಾಣಿ ? ರೇ,[1] ಮಾರ್ಜನ್ಯಾ ವಿತರ್ದಿಂ ಶೋಧಯ । ಅದ್ಯ ಕಿಮಿತಿ ಗೋಮಯೇನ ನೋಪಲಿಪ್ತಾ ವಿತರ್ದಿಃ ?[2] ಭವತು । ಕಿಂ ಮಾರ್ಜಿತಾ ವಿತರ್ದಿಃ ? ದೇವ, ಮಾರ್ಜಿತಾ ಸಾ, ಬಹಿಶ್ಚ ಪ್ರಕ್ಷಿಪ್ತೋಽವಕರಃ[3] । ಅಯಮಾನೀತಃ[4] ಕಟಃ । ತರ್ಹಿ ವಿತರ್ದೌ ಸಮಾಸ್ತೀರ್ಯತಾಮ್ । ಕಿಮಪಿ ಉಪಧಾನಾರ್ಥಂ ಆನಯ । ಶಿವೋಽಪ್ಯಾಗಚ್ಛತು । ಚನ್ದ್ರಃ ಕುತ್ರ ಗತಃ ? ಸ ಶಾಕಾರ್ಥಂ ಆಪಣಂ ಗತಃ । ಅರೇ ಮಲ್ಲ ! ಸ್ವಾಮಿನ್, ಅಯಮಹಮಸ್ಮಿ[4] । ಕಿಂ ಕೋಽಪಿ ಗೃಹೇ ನಾಸ್ತ್ಯೇವ ? ದೇವ, ಮಹಾನಸೇ ಕೇಚಿತ್ ಸನ್ತಿ । ಕಿಂ ತಾನ್ ಆಹ್ವಾಸ್ಯಾಮಿ ? ಮೈವಮ್ । ತೇ ತತ್ರೈವ ತಿಷ್ಠನ್ತು । ಯುವಾಮೇವ ಅತ್ರಾಗಚ್ಛತಮ್ ॥

ಆಜ್ಞಾಪಯತು ದೇವಃ[5] । ಕಿ ಕರವಾವ ? ಏಕಂ ವ್ಯಜನಮಾನಯ । ರೇ, ಕಿಂ ತೂಷ್ಣೀಂ ತಿಷ್ಠಸಿ ? ಶೀಘ್ರಮಾಗಚ್ಛ । ಮಾಂ ವೀಜಯ । ಅತೀವ ಶ್ರಾನ್ತೋಽಹಮ್[6] । ಮಲ್ಲಃ ಪಾದೌ ಸಂವಾಹಯತು ॥

1. ರೇ, ಅರೇ- ಈ ಎರಡನ್ನೂ ಕಡಿಮೆಯ ದರ್ಜೆಯವರನ್ನು ಕರೆಯುವದಕ್ಕೆ ಉಪಯೋಗಿಸುವರು.
2. ವಿತರ್ದಿಃ ಕಿಮಿತಿ ಗೋಮಯೇನ ನೋಪಲಿಪ್ತಾ ?(ಅ).
3. ಅವಕರಃ ಬಹಿಃ ಪ್ರಕ್ಷಿಪ್ತಶ್ಚ (ಅ).
4. ೧೫ನೆಯ ಪುಟದ ೨ನೆಯ ಟಿಪ್ಪಣಿಯನ್ನು ನೋಡಿ.
5. ದೇವಃ ಆಜ್ಞಾಪಯತು (ಅ).
6. ಅಹಂ ಅತೀವ ಶ್ರಾನ್ತಃ (ಅ).

ದೇವ, ಭೋಜನಸಮಯಃ ಸಂಪ್ರಾಪ್ತಃ । ಬಾಲಾಃ ಪ್ರತೀಕ್ಷನ್ತೇ । ತರ್ಹಿ ಕಿಮಿತಿ ಸೂದಾಶ್ಚಿರಯನ್ತಿ ? ತ್ವಮೇವ ಅನ್ತರ್ಗತ್ವಾ ಭೋಜನಪತ್ರಾಣ್ಯಾನೀಯ ಪ್ರಸಾರಯ । ಕ್ಷಿಪ್ರಂ ಪರಿವೇಷಯನ್ತು। ಅಯಂ ಪಾತ್ರಾದಿಕಂ ಸಜ್ಜಂ ಕರೋತು। ಅಹಮನುಪದಮೇವ ಆಯಾಸ್ಯಾಮಿ ॥

## 21. ಸಂಬಳದ ಆಳುಗಳು

ಎಲೈ, ಯಾರಲ್ಲಿ? ಅಯ್ಯ, ಏನು ಮಾಡಲಿ? ಎಲೋ, ಪೊರಕೆಯಿಂದ ಜಗಲಿಯನ್ನು ಗುಡಿಸು. ಇಂದು ಜಗುಲಿಯು ಏತಕ್ಕೆ ಸಗಣಿಯಿಂದ ಸಾರಿಸಲ್ಪಡಲಿಲ್ಲ? (ಇವತ್ತು ಜಗಲಿಯನ್ನೇಕೆ ಸಗಣಿಹಾಕಿ ಸಾರಿಸಲಿಲ್ಲ?) ಇರಲಿ. ಜಗಲಿ ಗುಡಿಸಲ್ಪಟ್ಟಿತೋ ಏನು? (ಜಗಲಿಯನ್ನು ಗುಡಿಸಿದೆಯೇನು?) ಸ್ವಾಮಿ, ಅದು ಗುಡಿಸಲ್ಪಟ್ಟಿತು (ಅದನ್ನು ಗುಡಿಸಿದ್ದೇನೆ). ಮತ್ತು ಕಸವು ಹೊರಗೆ ಹಾಕಲ್ಪಟ್ಟಿತು (ಕಸವನ್ನು ಹೊರಗೆ ಹಾಕಿದ್ದೇನೆ). ಇಗೋ ಚಾಪೆಯು ತರಲ್ಪಟ್ಟಿತು (ಚಾಪೆಯನ್ನು ತಂದಿದ್ದೇನೆ). ಹಾಗಾದರೆ ಜಗಲಿಯಲ್ಲಿ ಹಾಸಲ್ಪಡಲಿ (ಹಾಸು). ಏನಾದರೊಂದನ್ನು ತಲೆದಿಂಬಿಗಾಗಿ ತೆಗೆದುಕೊಂಡು ಬಾ. ಶಿವನು ಕೂಡ ಬರಲಿ. ಚಂದ್ರನು ಎಲ್ಲಿ ಹೋದನು? ಅವನು ತರಕಾರಿಗಾಗಿ ಅಂಗಡಿಗೆ ಹೋದನು. ಎಲೋ, ಮಲ್ಲ ! ಸ್ವಾಮಿ, ಇಗೋ ಇಲ್ಲಿದ್ದೇನೆ. ಯಾರೂ ಮನೆಯಲ್ಲಿ ಇಲ್ಲವೇ? (ಇಲ್ಲವೇನು?) ಸ್ವಾಮಿ, ಅಡಿಗೆಯ ಮನೆಯಲ್ಲಿ ಕೆಲವರು ಇದ್ದಾರೆ. ಅವರನ್ನು ಕರೆಯಲೇನು? ಬೇಡ. ಅವರು ಅಲ್ಲಿಯೇ ಇರಲಿ ನೀವಿಬ್ಬರೇ ಇಲ್ಲಿ ಬನ್ನಿರಿ.

ಸ್ವಾಮಿಯವರು ಅಪ್ಪಣೆಮಾಡಬೇಕು. (ನಾವಿಬ್ಬರೂ) ಏನು ಮಾಡೋಣ? ಒಂದು ಬೀಸಣಿಗೆಯನ್ನು ತೆಗೆದುಕೊಂಡು ಬಾ. ಎಲೈ, ಏಕೆ ಸುಮ್ಮನೆ ನಿಂತಿದ್ದೀಯೆ? ಬೇಗನೆ ಬಾ. ನನ್ನನ್ನು (ಬೀಸಣಿಗೆಯಿಂದ) ಬೀಸು. ನಾನು ಬಹಳವಾಗಿ ಬಳಲಿದ್ದೇನೆ. ಮಲ್ಲನು ಕಾಲುಗಳನ್ನು ಒತ್ತಲಿ.

ಸ್ವಾಮಿ, ಊಟದ ಕಾಲ ಬಂದಿತು. ಹುಡುಗರು ಕಾಯುತ್ತಿದ್ದಾರೆ. ಹಾಗಾದರೆ ಅಡಿಗೆಯವರು ಏತಕ್ಕೆ ತಡಮಾಡುತ್ತಾರೆ? ನೀನೇ ಒಳಗೆ ಹೋಗಿ ಊಟದೆಲೆಗಳನ್ನು ತಂದು ಹರಡು (ಹಾಕು). (ಅವರು) ಬೇಗನೆ ಬಡಿಸಲಿ. ಇವನು ಪಾತ್ರೆ ಮುಂತಾದದ್ದನ್ನು ಅಣಿಮಾಡಲಿ. ನಾನು ಇಷ್ಟರಲ್ಲಿಯೇ ಬರುವೆನು.

## 22. ಪಠನಪ್ರಕಾರಃ

ಗೋವಿನ್ದ , ಉತ್ತಿಷ್ಠ । ಕಾಯಂ ಶಿರೋ ಗ್ರೀವಾಂ ಚ ಸಮಂ ಧಾರಯನ್

ಅಚಲಂ ತಿಷ್ಠ। ಶಿರಃಕಮ್ಪನಂ ಮಾ ಕುರು। ಝಟಿತಿ ಪುಸ್ತಕಮುದ್ಘಾಟಯ। ತೃತೀಯೇ ಪೃಷ್ಠೇ ಕತಿಚಿದ್ವಾಕ್ಯಾನಿ[1] ಪಠ। ದೃಷ್ಟಿಮಿತಸ್ತತೋ ಮಾ ವಿಕ್ಷಿಪ। ಪಾಠ ಏವ[2] ಅವಹಿತೋ ಭವ। ಇದಾನೀಂ ಕಿಂಚಿದ್ವಾಚಯ ॥

ತಿಷ್ಠ ತಿಷ್ಠ। ಕಿಮೇವಂ ಶೀಘ್ರತರಂ ಪಠಸಿ ? ಕಿಂಚಿನ್ಮನ್ದಂ[3] ಪಠ। ಸಗೀತಂ ಮಾ ಪಠ। ಉಚ್ಚೈರ್ನ ಪಠಿತವ್ಯಮ್। ನಾಪಿ[4] ನೀಚೈಃ ಪಠಿತವ್ಯಮ್। ಸತೀರ್ಥ್ಯಾನಾಂ ಯಥಾ ಸುಶ್ರಾವ್ಯಂ ಭವೇತ್ ತಥಾ ಪಠ। ಕಿಮೇಷಾಂ ವಾಕ್ಯಾನಾಮರ್ಥಂ ಜಾನಾತಿ ಭವಾನ್ ? ಅಕ್ಷರಾಣಿ ಸುವ್ಯಕ್ತಮುಚ್ಚಾರಯನ್ ಪದಚ್ಛೇದಂ ಚ ವ್ಯಞ್ಜಯನ್ ಸುಸ್ವರೇಣ ಪಠ। ಅರ್ಥಂ ನ ಜಾನಾಸಿ ಚೇನ್ಮಾಂ[5] ಪೃಚ್ಛ। ಅವಶ್ಯಂ ತ್ವಾಂ ವ್ಯುತ್ಪಾದಯಿಷ್ಯಾಮಿ। ಅಧೀತಂ ಪಾಠಂ ಮಾ ವಿಸ್ಮರ। ಏವಂ ಕ್ರಮೇಣ ಯೋಽಭ್ಯಸ್ಯತಿ ಸ ನೂನಂ ಪಣ್ಡಿತೋ ಭವಿಷ್ಯತಿ ॥

**ಗೀತೀ ಶೀಘ್ರೀ ಶಿರಃಕಮ್ಪೀ ಯಥಾಲಿಖಿತಪಾಠಕಃ।**
**ಅನರ್ಥಜ್ಞೋಽಲ್ಪಕಣ್ಠಶ್ಚ ಷಡೇತೇ ಪಾಠಕಾಧಮಾಃ ॥**

## 22. ಓದುವ ರೀತಿ

ಗೋವಿಂದ, ಏಳು. ಶರೀರವನ್ನೂ ತಲೆಯನ್ನೂ ಕುತ್ತಿಗೆಯನ್ನು (ಒಂದೇ) ಸಮನಾಗಿಟ್ಟುಕೊಂಡು ಅಲ್ಲಾಡದೆ ನಿಲ್ಲು. ತಲೆಯನ್ನಲ್ಲಾಡಿಸುವಿಕೆಯನ್ನು ಮಾಡಬೇಡ (ತಲೆಯನ್ನು ಅಲ್ಲಾಡಿಸಬೇಡ). ಬೇಗನೆ ಪುಸ್ತಕವನ್ನು ತೆರೆ. ಮೂರನೆಯ ಪುಟದಲ್ಲಿ ಕೆಲವು ವಾಕ್ಯಗಳನ್ನು ಓದು. ನೋಟವನ್ನು ಇತ್ತಲಾಗಿ ಅತ್ತಲಾಗಿ (ಅತ್ತಿತ್ತ) ಹಾಕಬೇಡ. ಪಾಠದಲ್ಲಿಯೇ ಮನಸ್ಸಿಟ್ಟವನಾಗು. ಈಗ ಸ್ವಲ್ಪ ಓದು.

ನಿಲ್ಲು, ನಿಲ್ಲು. ಹೀಗೆ ಬಲುಬೇಗನೆ ಏತಕ್ಕೆ ಓದುತ್ತೀಯೆ? ಸ್ವಲ್ಪ ನಿಧಾನವಾಗಿ ಓದು. ರಾಗದಿಂದ ಕೂಡಿಕೊಂಡು (ರಾಗವಾಗಿ) ಓದಬೇಡ. ಗಟ್ಟಿಯಾಗಿ ಓದಬಾರದು. ಮೆಲ್ಲಗೂ ಓದಬಾರದು. ಒಳ್ಳೆಯ ಸ್ವರದಿಂದ ಜೊತೆಯ ವಿದ್ಯಾರ್ಥಿಗಳಿಗೆ ಹೇಗೆ ಚೆನ್ನಾಗಿ ಕೇಳಿಸೀತೋ ಹಾಗೆ (ಚೆನ್ನಾಗಿ ಕೇಳಿಸುವ ಹಾಗೆ) ಓದು. ಈ ವಾಕ್ಯಗಳ ಅರ್ಥವನ್ನು ನೀನು ತಿಳಿದಿದ್ದೀಯೇನು? ಅಕ್ಷರಗಳನ್ನು ಸ್ಪಷ್ಟವಾಗಿ ಉಚ್ಚಾರಣೆ ಮಾಡುತ್ತಾ ಪದಚ್ಛೇದವನ್ನು ತೋರಿಸುತ್ತಾ ಒಳ್ಳೆಯ ಸ್ವರದಿಂದ ಓದು. ಅರ್ಥವನ್ನು (ನೀನು) ತಿಳಿಯುವದಿಲ್ಲವಾದರೆ

1. ಕತಿಚಿತ್–ವಾಕ್ಯಾನಿ
2. ಪಾಠೇ–ಏವ.
3. ಕಿಂಚಿತ್–ಮನ್ದಮ್.
4. ನೀಚೈರಪಿ ಪಠಿತವ್ಯಮ್ (ಅ).
5. ಚೇತ್–ಮಾಂ. ಕೇಳು ಎಂಬರ್ಥದ ಮಾತುಗಳಿಗೆ ಎರಡು ಕರ್ಮಗಳು ಬರುತ್ತವೆ.

(ನೀನು) ತಿಳಿಯುವದಿಲ್ಲವಾದರೆ ನನ್ನನ್ನು ಕೇಳು. ಅಗತ್ಯವಾಗಿ ನಿನ್ನನ್ನು (ನಿನಗೆ) ತಿಳಿಸಿಕೊಡುತ್ತೇನೆ. ಓದಿದ ಪಾಠವನ್ನು ಮರೆಯಬೇಡ. ಈ ಕ್ರಮದಿಂದ ಯಾರು ಅಭ್ಯಾಸಮಾಡುತ್ತಾನೋ ಅವನು ನಿಜವಾಗಿ ಪಂಡಿತನಾಗುವನು.

ರಾಗದಿಂದ (ಓದುವವನು), ಬೇಗನೆ (ಓದುವವನು), ತಲೆಯನ್ನು ಅಲ್ಲಾಡಿಸುವವನು, (ಬರೆದದ್ದನ್ನು) ಬರೆದಂತೆಯೇ ಓದುವವನು, ಅರ್ಥವನ್ನು ತಿಳಿಯದವನು, ಮತ್ತು ಸ್ವಲ್ಪಕಂಠ (ತಗ್ಗಿದ ಕಂಠಸ್ವರ)ವುಳ್ಳವನು- ಈ ಆರು ಜನರು ಕೆಟ್ಟ ಓದುಗಾರರು.

## ೨೩. ಅವಿಪಾಲಸ್ಯ ವೃಕಶಾವಸ್ಯ ಚ ಕಥಾ

ಕಶ್ಚನಾವಿಪಾಲಃ ಕದಾಚಿದ್ವನೋದ್ದೇಶೇ ಕಂಚಿದ್ವೃಕಶಾವಮಪಶ್ಯತ್ । ಅಥಾಸೌ ಕೃಪಯಾ ಆಹಾರಾದಿಕಂ ದತ್ವಾ ತಮಪೋಷಯತ್ ; ಕಾಲಕ್ರಮೇಣ ಚ ಸನ್ನಿಹಿತೇಭ್ಯೋಽವಿಕುಲೇಭ್ಯೋ ಬರ್ಕರಾನ್ ಚೋರಯಿತುಮಪಿ ತಂ[1] ಶಿಕ್ಷಿತವಾನ್ ॥

ಏವಂ ವಿನೀತೋ ವೃಕಬಾಲಃ ಕದಾಚಿತ್ ಸ್ವಾಮಿನಂ ಪ್ರಾಹ- ''ಅಹಂ ಬರ್ಕರಚೌರ್ಯಂ ಸುಷ್ಠು ಶಿಕ್ಷಿತೋಽಸ್ಮಿ । ನಿಪುಣಶ್ಚಾಹಂ ಸಂವೃತ್ತೋಽಸ್ಯಾಂ ಕಲಾಯಾಮ್[2] । ಇತಃಪರಂ ಭವತಾ ಜಾಗರೂಕೇಣ ಭವಿತವ್ಯಮ್ । ನೋ ಚೇತ್ ಸ್ವಸ್ಯಾಪಿ ಪಶುಯೂಥೇ ಬಾಲಚ್ಛಾಗಾನ್ ನ ದ್ರಕ್ಷ್ಯಸಿ!'' ॥

### ೨೩. ಕುರುಬರವನು ಮತ್ತು ತೋಳದ ಮರಿಯ ಕಥೆ

ಒಬ್ಬಾನೊಬ್ಬ ಕುರುಬನು ಒಂದಾನೊಂದು ಕಾಲದಲ್ಲಿ ಕಾಡಿನ ಪ್ರದೇಶದಲ್ಲಿ ಒಂದು ತೋಳದ ಮರಿಯನ್ನು ಕಂಡನು. ಆಮೇಲೆ ಅವನು ಕೃಪೆಯಿಂದ ಆಹಾರವೇ ಮುಂತಾದದ್ದನ್ನು ಕೊಟ್ಟು ಅದನ್ನು ಕಾಪಾಡಿದನು ; ಮತ್ತು ಕಾಲಕ್ರಮದಿಂದ ಹತ್ತಿರವಿರುವ ಕುರಿಯ ಮಂದೆಗಳ ದೆಸೆಯಿಂದ ಕುರಿಮರಿಗಳನ್ನು ಕದಿಯುವದನ್ನೂ ಅದನ್ನು (ಅದಕ್ಕೆ) ಹೇಳಿಕೊಟ್ಟನು.

ಹೀಗೆ ತಯಾರುಮಾಡಲ್ಪಟ್ಟ ತೋಳದ ಮರಿಯು ಒಂದಾನೊಂದು ಸಲ ಯಜಮಾನನನ್ನು ಕುರಿತು ಹೇಳುತ್ತದೆ (ಹೇಳಿದ್ದೇನೆಂದರೆ)- ''ನಾನು ಕುರಿಮರಿಗಳನ್ನು ಕದಿಯುವದನ್ನು ಚೆನ್ನಾಗಿ ಕಲಿಸಲ್ಪಟ್ಟವನಿರುತ್ತೇನೆ. (ನನಗೆ ಕಲಿಸಿದ್ದೀಯೆ). ಈ ವಿದ್ಯೆಯಲ್ಲಿ ನಾನು ಜಾಣನೂ ಆದೆನು. ಇನ್ನು ಮೇಲೆ ನಿನ್ನಿಂದ

1. ಕಲಿಸು ಎಂಬರ್ಥದ ಮಾತುಗಳಿಗೆ ಎರಡೆರಡು ಕರ್ಮಗಳು ಬರುತ್ತವೆ.
2. ಅಹಂ ಅಸ್ಯಾಂ ಕಲಾಯಾಂ ನಿಪುಣಃ ಸಂವೃತ್ತಶ್ಚ (ಅ).

ಜಾಗರೂಕನಾಗಿರೋಣವಾಗಬೇಕು (ನೀನು ಜಾಗರೂಕನಾಗಿರಬೇಕು). ಇಲ್ಲದಿದ್ದರೆ ನಿನ್ನ ಮಂದೆಯಲ್ಲಿಯೂ ಕೂಡ ಕುರಿಮರಿಗಳನ್ನು ಕಾಣದೆ ಹೋದೀಯೆ (ಕುರಿಮರಿ ಗಳು ಕಾಣದೆಹೋದಾವು) !''

## ೨೪. ಋತವಃ

ಋತುಷು ವಸನ್ತೋಽತಿಮನೋಹರಃ । ತದಾನೀಂ ವೃಕ್ಷಾಃ ಪಲ್ಲವಿತಾಃ ಪುಷ್ಪಿತಾಶ್ಚ ಭವನ್ತಿ । ನಾಧಿಕಂ ಶೀತಂ ನಾಪ್ಯಧಿಕೋ ಘರ್ಮಃ । ಪಕ್ಷಿಣಃ ಕಲಂ ಕೂಜನ್ತಿ। ಪವನಶ್ಚ ಕುಸುಮಸುಗನ್ಧಿತೋ ಮನ್ದಂ ವಹತಿ ॥

ಗ್ರೀಷ್ಮೇಽತೀವ ಘರ್ಮಃ । ದಿವಸೋ ವೃದ್ಧಿಂ ಯಾತಿ, ರಾತ್ರಿಸ್ತು ಕ್ಷೀಣಾ ಭವತಿ। ಅನ್ತರಿಕ್ಷಂ ಕದಾಚಿದ್ಧೂಲೀ[1] ವ್ಯಾಪ್ನೋತಿ । ಪವನೋಽಪ್ಯುಷ್ಣೋ[2] ಭವತಿ । ಮನಃ ಸ್ವಾಸ್ಥ್ಯಂ ನ ಲಭತೇ ॥

ವರ್ಷಾಸು[3] ಮೇಘೈರಾಕಾಶಮಾವ್ರಿಯತೇ । ವಾಯುರತೀವ ವೇಗೇನ ವಾತಿ । ಮೇಘಾ ಗರ್ಜನ್ತಿ, ವಿದ್ಯುಲ್ಲಸತಿ,[4] ಅಶನಿಃ ಪತತಿ । ವೃಷ್ಟಿಧಾರಾಃ ಸಂಪತನ್ತಿ । ಜಲಾನಿ ಭೂಮೌ ಸಂಪ್ಲವನ್ತೇ । ಮಾರ್ಗಾಃ ಪಙ್ಕಿಲಾ ಭವನ್ತಿ । ನದ್ಯಃ ಪೂರ್ಣಾಃ ಪ್ರವಹನ್ತಿ ॥

ಶರತ್ಕಾಲೇ ಮೇಘಾ ಜಲೇನ ಹೀಯನ್ತೇ । ದಿಶಃ ಪ್ರಸೀದನ್ತಿ । ಕ್ಷೇತ್ರೇಷು ಸಸ್ಯಾನಿ ಪಚ್ಯನ್ತೇ । ರಾತ್ರೌ ; ಚನ್ದ್ರಿಕಾ ಮಾನಸಮಾಹ್ಲಾದಯತಿ ॥

ಹೇಮನ್ತಶಿಶಿರಯೋಃ ಶೀತಂ ಸೋಢುಮಶಕ್ಯಂ ಭವತಿ । ರಾತ್ರೌ ಹಿಮಾನಿ ಪತನ್ತಿ । ಅಹಃ ಕ್ಷೀಯತೇ, ರಾತ್ರಿಸ್ತು ದೀರ್ಘಾ ಭವತಿ । ಧಾನ್ಯಾನಿ ಸ್ವಲ್ಪಾರ್ಘಾಣಿ ಭವನ್ತಿ । ಸರ್ವೇ ಜನಾಃ ಸನ್ತೋಷೇಣ ಕಾಲಂ ನಯನ್ತಿ ॥

## ೨೪. ಋತುಗಳು

ಋತುಗಳಲ್ಲಿ ವಸಂತವು ಬಹಳ ಮನೋಹರವಾದದ್ದು. ಆಗ ಮರಗಳು ಚಿಗುರಿದವೂ ಹೂಬಿಟ್ಟವೂ ಆಗಿರುತ್ತವೆ (ಚಿಗುರಿ ಹೂಬಿಟ್ಟಿರುತ್ತವೆ). ಬಹಳ

1. ಕದಾಚಿತ್ - ಧೂಲೀ.
2. ಉಷ್ಣ, ಶೀತ- ಈ ಮಾತುಗಳು ಗುಣದ ಹೆಸರಾದರೆ ನಪುಂಸಕ (ಬಿಸಿಯಾದ ತಣ್ಣನೆಯ) ; ಪದಾರ್ಥಗಳ ಹೆಸರಾದರೆ ಮೂರು ಲಿಂಗವೂ ಆಗಬಹುದು.
3. 'ಮಳೆಗಾಲ'ವೆಂಬರ್ಥದಲ್ಲಿ ಇದಕ್ಕೆ ಬಹುವಚನದಲ್ಲಿಯೇ ಪ್ರಯೋಗ.

ವಿದ್ಯುತ್ - ಲಸತಿ.

ಚಳಿಯೂ ಇಲ್ಲ, ಬಹಳ ಸೆಕೆಯೂ ಇಲ್ಲ. ಹಕ್ಕಿಗಳು ಇಂಪಾಗಿ ಕೂಗುತ್ತವೆ. ಗಾಳಿಯು ಹೂಗಳ ನರುಗಂಪಿನಿಂದ ಕೂಡಿ ಮೆಲ್ಲಗೆ ಬೀಸುತ್ತದೆ.

ಗ್ರೀಷ್ಮದಲ್ಲಿ ಬಹಳ ಸೆಕೆ. ಹಗಲು ಹೆಚ್ಚುಗೆಯನ್ನು ಹೊಂದುತ್ತದೆ ; ಆದರೆ ರಾತ್ರಿಯು ಸವೆಯುವದು ಆಗುತ್ತದೆ (ಹಗಲು ಹೆಚ್ಚುತ್ತದೆ, ರಾತ್ರೆ ಕಡಿಮೆಯಾಗುತ್ತದೆ). ಅಂತರಿಕ್ಷವನ್ನು ಕೆಲವು ವೇಳೆ ಧೂಳು ಮುಸುಕಿಕೊಳ್ಳುವದು. ಗಾಳಿಯೂ ಬೆಚ್ಚಗಾಗುವದು. ಮನಸ್ಸು ಸ್ವಾಸ್ಥ್ಯವನ್ನು ಪಡೆಯುವದಿಲ್ಲ.

ಮಳೆಗಾಲದಲ್ಲಿ ಮೋಡಗಳಿಂದ ಆಕಾಶವು ಮುಚ್ಚಿಕೊಂಡಿರುವದು ; ಗಾಳಿಯು ಬಹುವೇಗದಿಂದ ಬೀಸುತ್ತದೆ. ಮೋಡಗಳು ಗುಡುಗುತ್ತವೆ. ಮಿಂಚು ಥಳಾರೆನ್ನುತ್ತದೆ. ಸಿಡಿಲು ಬೀಳುತ್ತದೆ. ಮಳೆಯ ಧಾರೆಗಳು ಸುರಿಯುತ್ತವೆ. ನೀರುಗಳು ನೆಲದಲ್ಲಿ (ನೆಲದಮೇಲೆ) ಹೆಚ್ಚಾಗಿ ನಿಂತಿರುತ್ತವೆ. ದಾರಿಗಳು ಕೆಸರಾಗುತ್ತವೆ. ನದಿಗಳು ತುಂಬಿ ಹರಿಯುತ್ತವೆ.

ಶರತ್ಕಾಲದಲ್ಲಿ ಮೋಡಗಳು ನೀರಿನಿಂದ ಬಿಡಲ್ಪಡುತ್ತವೆ (ನೀರಿಲ್ಲದವಾಗುತ್ತವೆ). ದಿಕ್ಕುಗಳು ನಿರ್ಮಲವಾಗುತ್ತವೆ. ಹೊಲಗಳಲ್ಲಿ ಪೈರುಗಳು ಮಾಗುತ್ತವೆ. ರಾತ್ರಿಯಲ್ಲಿ ಬೆಳದಿಂಗಳು ಮನಸ್ಸನ್ನು ಉಲ್ಲಾಸಗೊಳಿಸುತ್ತದೆ.

ಹೇಮಂತಶಿಶಿರಗಳಲ್ಲಿ ಚಳಿಯು ತಡೆಯುವದಕ್ಕೆ ಅಶಕ್ಯವಾಗುತ್ತದೆ. ರಾತ್ರಿಯಲ್ಲಿ ಮಂಜುಗಳು ಬೀಳುತ್ತವೆ. ಹಗಲು ಕುಗ್ಗುತ್ತದೆ, ರಾತ್ರಿಯು ಹಿಗ್ಗುತ್ತದೆ. ದವಸಗಳು ಸ್ವಲ್ಪಬೆಲೆಯುಳ್ಳವು (ಅಗ್ಗವಾಗುತ್ತವೆ). ಎಲ್ಲಾ ಜನರೂ ಸಂತೋಷದಿಂದ ಕಾಲವನ್ನು ಕಳೆಯುತ್ತಾರೆ.

## ೨೫. ಲೇಖ್ಯಮ್

ಸ್ವಸ್ತಿ ।[1] ಮಿತ್ರವರ್ಯಂ ರಙ್ಗಾಚಾರ್ಯಂ ನಮಸ್ಕರೋತಿ ಶ್ರೀನಿವಾಸಶರ್ಮಾ।[2] ಕಲ್ಯಾಣಪುರ್ಯಾಮಹಮಕ್ಷಯಮಾರ್ಗಶೀರ್ಷಬಹುಲತೃತೀಯಾ ಪರ್ಯನ್ತಂ ಕುಶಲೀ । ಆಶಾಸೇ ಚ ಭವಾನಪಿ ತತ್ರ ಕುಶಲೀ ಭವಿಷ್ಯತೀತಿ[3] ॥

ಪೂರ್ವತರೇದ್ಯುರಸ್ಮಾಕಂ[4] ಷಾಣ್ಮಾಸಿಕೀ ಪರೀಕ್ಷಾ ಸಂಜಾತಾ । ಅಹಂ ಚತುರ್ಣಾಂ ಪ್ರಶ್ನಪತ್ರಾಣಾಂ ಸುಷ್ಠೂತ್ತರಂ ಲಿಖಿತವಾನ್ । ವಿಶೇಷತಃ

1. ಸ್ವಸ್ತಿ ಎಂಬ ಮಾತಿನಿಂದ ಕಾಗದವನ್ನು ಪ್ರಾರಂಭಿಸುವುದು ಸಂಸ್ಕೃತದಲ್ಲಿ ರೂಢಿ.
2. ಶ್ರೀನಿವಾಸಶರ್ಮಾ ನಮಸ್ಕರೋತಿ (ಅ). 3. ಭವಾನಪಿ ತತ್ರ ಕುಶಲೀ ಭವಿಷ್ಯತೀತಿ ಆಶಾಸೇ ಚ (ಅ). 4. ಪೂರ್ವತರೇದ್ಯುಃ - ಅಸ್ಮಾಕಮ್.

ಸಂಸ್ಕೃತಭಾಷಾಪತ್ರೇ ಸಮ್ಯಗುತ್ತರಂ ದತ್ತವಾನಸ್ಮಿ । ಪರಂ ತು ಭೂಗೋಲಶಾಸ್ತ್ರೇ ಮಮ ಈಷತ್ ಸನ್ದೇಹೋಽಸ್ತಿ ॥

ಯುಷ್ಮಾಕಂ ಪರೀಕ್ಷಾ ಸಂವೃತ್ತಾ ವಾ ? ತರ್ಹಿ ಪ್ರಶ್ನಪತ್ರಾಣಿ ಪ್ರೇಷಯಿತವ್ಯಾನಿ। ಸ್ವವೃತ್ತಾನ್ತಂ ಚ ಶೀಘ್ರಂ ಲೇಖಿತವ್ಯಮಿತಿ -

- ಭವತೋ ಮಿತ್ರಮ್ ॥

## ೨೫. ಕಾಗದ

ಸ್ವಸ್ತಿ. ಮಿತ್ರಶ್ರೇಷ್ಠ ರಂಗಾಚಾರ್ಯನನ್ನು ನಮಸ್ಕರಿಸುತ್ತಾನೆ, ಶ್ರೀನಿವಾಸಶರ್ಮನು (ರಂಗಾಚಾರ್ಯರಿಗೆ ಶ್ರೀನಿವಾಸಶರ್ಮನ ನಮಸ್ಕಾರ). ಕಲ್ಯಾಣಪುರಿಯಲ್ಲಿ ನಾನು ಅಕ್ಷಯ (ಸಂವತ್ಸರದ) ಮಾರ್ಗಶಿರ ಬಹುಳ ತದಿಗೆಯವರೆಗೆ ಕ್ಷೇಮವುಳ್ಳವನು (ಕ್ಷೇಮ). ನಂಬಿರುತ್ತೇನೆ ನೀನೂ ಅಲ್ಲಿ ಕ್ಷೇಮವಾಗಿರುತ್ತೀಯೆಂದು (ತಾವೂ ಅಲ್ಲಿ ಕ್ಷೇಮವಾಗಿರುವಿರೆಂದು ನಂಬಿದ್ದೇನೆ).

ಮೊನ್ನೆಯ ದಿನ ನಮಗೆ ಆರು ತಿಂಗಳ ಪರೀಕ್ಷೆಯು ಆಯಿತು. ನಾನು ನಾಲ್ಕು ಪ್ರಶ್ನಪತ್ರಗಳಿಗೆ ಚೆನ್ನಾಗಿ ಉತ್ತರವನ್ನು ಬರೆದವನು (ಬರೆದಿದ್ದೇನೆ). ಅದರಲ್ಲಿಯೂ ಸಂಸ್ಕೃತಭಾಷೆಯ ಪತ್ರದಲ್ಲಿ ಚೆನ್ನಾಗಿ ಉತ್ತರವನ್ನು ಕೊಟ್ಟಿರುತ್ತೇನೆ. ಆದರೆ ಭೂಗೋಲಶಾಸ್ತ್ರದಲ್ಲಿ ನನಗೆ ಸ್ವಲ್ಪ ಸಂದೇಹವಿದೆ.

ನಿಮ್ಮ ಪರೀಕ್ಷೆ ಆಯಿತೆ ? ಹಾಗಾದರೆ ಪ್ರಶ್ನಪತ್ರಗಳು ಕಳುಹಲ್ಪಡತಕ್ಕವು (ಪ್ರಶ್ನೆಪತ್ರಿಕೆಗಳನ್ನು ಕಳುಹಿಸಬೇಕು). ನಿಮ್ಮ ವೃತ್ತಾಂತವೂ ಬೇಗ ಬರೆಯಲ್ಪಡತಕ್ಕದ್ದು (ನಿಮ್ಮ ಕಡೆಯ ಸಮಾಚಾರವನ್ನೂ ಬೇಗ ಬರೆಯಬೇಕು).

-(ಇಂತೀ) ನಿಮ್ಮ ಮಿತ್ರ.

## ೨೬. ಚನ್ದ್ರಮಾಃ

ಚನ್ದ್ರಮಣ್ಡಲಂ ದರ್ಪಣ ಇವಾಚರತಿ । ಯತಃ ಸೂರ್ಯಸ್ಯ ಪ್ರಕಾಶಸ್ತಸ್ಮಿನ್ ನಿಪತತಿ । ತತಶ್ಚ ಪರಾವೃತ್ಯ ಭೂಮಿಮಾಗಚ್ಛತಿ । ಚನ್ದ್ರಸ್ಯ ಕಾನ್ತಿಃ ಪ್ರಸನ್ನಾ ಆಹ್ಲಾದಕರೀ ಚ । ಅತ ಏವ ಜನಾಶ್ಚನ್ದ್ರೋದಯಸ್ಯ' ದರ್ಶನೇ ಕುತೂಹಲಿನೋ ಭವನ್ತಿ ॥

ಚನ್ದ್ರಸ್ಯ ಪ್ರಭಾ ಕೌಮುದೀತಿ ಕಥ್ಯತೇ । ಕೌಮುದೀ ಸದಾ

ಜನಾಃ - ಚನ್ದ್ರೋದಯಸ್ಯ.

ರಾತ್ರೇರಾದಿಭಾಗೇ ಏವ ನ ಪ್ರಸರತಿ । ಯತಃ ಕದಾಚಿದರ್ಧರಾತ್ರೇ ಕದಾಚಿನ್ನಿಶಾಯಾ ಅವಸಾನೇಽಪಿ ಚನ್ದ್ರ ಉದೇತಿ । ಕೌಮುದ್ಯಾ ರಹಿತಾ ರಾತ್ರಿಸ್ತಮಿಸ್ರಾ ಭವತಿ ॥

ಚನ್ದ್ರಃ ಸದಾ ನ ವೃತ್ತಾಕಾರೋ ಭವತಿ । ತಸ್ಯ ವೃದ್ಧಿಃ ಕ್ಷಯಶ್ಚ ಕ್ರಮೇಣ ಭವತಃ । ಪ್ರತಿದಿನಂ ಷೋಡಶಾಂಶ ಏಕಪಕ್ಷಂ ಯಾವದುಪಚೀಯತೇ ;[1] ಸ ಶುಕ್ಲಃ ಪಕ್ಷಃ । ತತಃ ಪ್ರತಿದಿನಂ ಷೋಡಶಾಂಶೋಽಪಚೀಯತೇ ; ಸ ಕೃಷ್ಣಃ ಪಕ್ಷಃ । ಚನ್ದ್ರಃ ಪೂರ್ಣಿಮಾಯಾಂ ಷೋಡಶಭಿರಪಿ ಕಲಾಭಿಃ ಪರಿಪೂರ್ಣೋ ಭವತಿ । ಅಮಾವಾಸ್ಯಾಯಾಂ ನೈಕಾಪಿ ಕಲಾ ಶಿಷ್ಯತೇ ॥

ವರಮೇಕೋ ಗುಣೀ ಪುತ್ರೋ ನ ಚ ಮೂರ್ಖಶತಾನ್ಯಪಿ ।
ಏಕಶ್ಚನ್ದ್ರಸ್ತಮೋ[2] ಹನ್ತಿ ನ ಚ ತಾರಾಗಣೋಽಪಿ ಚ ॥

## ೨೬. ಚಂದ್ರನು

ಚಂದ್ರಮಂಡಲವು ಕನ್ನಡಿಯ ಹಾಗೆ ಕೆಲಸಮಾಡುತ್ತದೆ (ಇದೆ). ಏಕೆಂದರೆ ಸೂರ್ಯನ ಬೆಳಕು ಅದರಲ್ಲಿ (ಅದರಮೇಲೆ) ಬೀಳುತ್ತದೆ ; ಮತ್ತು ಅಲ್ಲಿಂದ ಹಿಂತಿರುಗಿ ಭೂಮಿಯನ್ನು (ಭೂಮಿಗೆ) ಬರುತ್ತದೆ. ಚಂದ್ರನ ಬೆಳಕು ನಿರ್ಮಲವಾಗಿಯೂ ಸಂತೋಷವನ್ನುಂಟುಮಾಡುವದಾಗಿಯೂ ಇರುತ್ತದೆ. ಆದ್ದರಿಂದಲೇ ಜನರು ದ್ರನು ಹುಟ್ಟುವದರ ನೋಡುವಿಕೆಯಲ್ಲಿ (ಹುಟ್ಟುವದನ್ನು ನೋಡುವದಕ್ಕೆ) ಕುತೂಹಲವುಳ್ಳವರಾಗಿರುತ್ತಾರೆ.

ಚಂದ್ರನ ಬೆಳಕು ಬೆಳದಿಂಗಳೆಂದು ಕರೆಯಲ್ಪಡುತ್ತದೆ. ಬೆಳದಿಂಗಳು ಯಾವಾಗಲೂ ರಾತ್ರಿಯ ಮೊದಲಭಾಗದಲ್ಲಿಯೇ ಹರಡುವದಿಲ್ಲ. ಏಕೆಂದರೆ ಕೆಲವುವೇಳೆ ರಾತ್ರಿಸರಿಹೊತ್ತಿನಲ್ಲಿಯೂ, ಕೆಲವುವೇಳೆ ರಾತ್ರಿಯ ಕೊನೆಯಲ್ಲಿಯೂ (ಬೆಳಗಿನ ಜಾವದಲ್ಲಿಯೂ) ಚಂದ್ರನು ಹುಟ್ಟುತ್ತಾನೆ. ಬೆಳದಿಂಗಳಿಂದ ಬಿಡಲ್ಪಟ್ಟ (ಬೆಳದಿಂಗಳಿಲ್ಲದ) ರಾತ್ರಿಯು ಕಗ್ಗತ್ತಲೆಯುಳ್ಳದ್ದಾಗಿರುತ್ತದೆ.

ಚಂದ್ರನು ಯಾವಾಗಲೂ ಗುಂಡಾಗಿಯೇ ಇರುವದಿಲ್ಲ. ಅವನಿಗೆ ಹೆಚ್ಚುಕಡಿಮೆಯೂ ಕ್ರಮವಾಗಿ ಆಗುತ್ತದೆ. ಪ್ರತಿದಿನವೂ ಹದಿನಾರನೆಯ ಒಂದು ಪಾಲು ಒಂದು ಪಕ್ಷದವರೆಗೆ ಹೆಚ್ಚುತ್ತದೆ ; ಅದು ಶುಕ್ಲಪಕ್ಷವು. ಆಮೇಲೆ ಪ್ರತಿದಿನವೂ ಹದಿನಾರನೆಯ ಒಂದು ಪಾಲು ಕಡಿಮೆಯಾಗುತ್ತದೆ ; ಅದು ಕೃಷ್ಣಪಕ್ಷವು. ಚಂದ್ರನು

1. ಯಾವದ್ - ಉಪಚೀಯತೇ.
2. ಏಕಃ - ಚನ್ದ್ರಃ -ತಮಃ.

ಹುಣ್ಣಿಮೆಯಲ್ಲಿ ಹದಿನಾರು ಕಲೆಗಳಿಂದಲೂ ತುಂಬಿದವನಾಗಿರುತ್ತಾನೆ. ಅಮಾವಾಸ್ಯೆಯಲ್ಲಿ ಒಂದು ಕಲೆಯು ಕೂಡ ಉಳಿಯುವದಿಲ್ಲ.

ಗುಣವಂತನಾದ ಒಬ್ಬ ಮಗನು ಮೇಲು, ಮೂರ್ಖರ ನೂರು (ನೂರು ಜನ ಮೂರ್ಖರೂ) (ಮೇಲ)ಲ್ಲ. ಒಬ್ಬ ಚಂದ್ರನು ಕತ್ತಲೆಯನ್ನು ನಾಶಗೊಳಿಸುತ್ತಾನೆ. ನಕ್ಷತ್ರಗಳ ಗುಂಪೂ (ನಾಶಗೊಳಿಸುವ) ದಿಲ್ಲ.

## ೨೭. ವಿಶ್ವಾಮಿತ್ರಃ

ಕದಾಚಿದ್ವಿಶ್ವಾಮಿತ್ರೋ ನಾಮ ಮಹರ್ಷಿಃ ಕಾರ್ಯವಶಾದಯೋಧ್ಯಾಂ[1] ಅಭ್ಯಾಗಚ್ಛತ್ । ರಾಜಾ ದಶರಥಸ್ತಂ ದೃಷ್ಟ್ವಾ ಸಹಸಾ ಪ್ರತ್ಯುತ್ಥಾಯ ವಿಧಿನಾ ಸಂಪೂಜ್ಯ ಆಗಮನಕಾರಣಂ ಅಪೃಚ್ಛತ್ ॥

ತಂ ವಿಶ್ವಾಮಿತ್ರೋಽಬ್ರವೀತ್- 'ಹೇ ರಾಜನ್, ಮಮಾಶ್ರಮಸ್ಯ ಅಭ್ಯಾಶೇ ಮಾರೀಚಸುಬಾಹುನಾಮಾನೌ ದ್ವೌ ರಾಕ್ಷಸೌ ನಿವಸತಃ । ತೌ ಚ ಮಮ ಯಾಗಕ್ರಿಯಾಯಾ ನಿತ್ಯಂ ವಿಘ್ನಂ ಕುರುತಃ । ಅತಸ್ತಯೋರ್ವಧಾಯ ಜ್ಯೇಷ್ಠಪುತ್ರಂ ರಾಮಂ ಲಕ್ಷ್ಮಣೇನ ಸಹ[2] ಪ್ರೇಷಯ । ತವ ಶ್ರೇಯೋ ಭವಿಷ್ಯತೀತಿ ॥

ಸುಕುಮಾರಂ ರಾಮಂ ಮುನಯೇ ದಾತುಂ ರಾಜಾ ಪ್ರಥಮಂ ನೋತ್ಸಹತೇ ಸ್ಮ[3] । ತಥಾಪಿ ಕುಲಗುರುಣಾ ವಸಿಷ್ಠೇನ ಸಹ ಸಮ್ಮಂತ್ರ್ಯ ತದಾಜ್ಞಯಾ ಕಥಂಚಿತ್ ತಂ ಪ್ರಿಯಪುತ್ರಂ ಲಕ್ಷ್ಮಣಂ ಚ ವಿಶ್ವಾಮಿತ್ರಾಯ ಸಮರ್ಪಯತ್ । ಅಥ ಭಗವಾನ್ ವಿಶ್ವಾಮಿತ್ರೋಽತೀವ ಹೃಷ್ಟಃ ತಾಭ್ಯಾಂ ರಾಜಪುತ್ರಾಭ್ಯಾಂ ಸಹ ಪ್ರತಸ್ಥೇ ॥

## ೨೭. ವಿಶ್ವಾಮಿತ್ರನು

ಒಂದಾನೊಂದು ಕಾಲದಲ್ಲಿ ವಿಶ್ವಾಮಿತ್ರನೆಂಬ ಮಹರ್ಷಿಯು ಕೆಲಸದ ವಶದಿಂದ ಅಯೋಧ್ಯೆಯನ್ನು (ಅಯೋಧ್ಯೆಗೆ) ಬಂದನು. ದೊರೆಯಾದ ದಶರಥನು ಆತನನ್ನು ಕಂಡು ತಟ್ಟನೆ ಎದ್ದು ಶಾಸ್ತ್ರದಿಂದ (ಶಾಸ್ತ್ರದಲ್ಲಿ ಹೇಳಿರುವಂತೆ) ಪೂಜಿಸಿ ಬಂದ ಕಾರಣವನ್ನು ಕೇಳಿದನು.

1. 'ಹೋಗು' ಎಂಬರ್ಥದ ಧಾತುವಿಗೆ ಸೇರಿರುವ (ಹೋಗುವ ಸ್ಥಳದ) ಹೆಸರು ದ್ವಿತೀಯಾವಿಭಕ್ತಿಯಲ್ಲಿರುವದು.

2. 'ಒಡನೆ' ಎಂಬರ್ಥದ ಮಾತಿನ ಜೊತೆಯಲ್ಲಿರುವ ನಾಮಕ್ಕೆ ತೃತೀಯಾ ವಿಭಕ್ತಿ ಬೇಕು.

3. ರಾಜಾ ಸುಕುಮಾರಂ ರಾಮಂ ಮುನಯೇ ದಾತುಂ ನೋತ್ಸಹತೇ ಸ್ಮ (ಅ).

ಆತನನ್ನು (ಕುರಿತು) ವಿಶ್ವಾಮಿತ್ರನು (ಹೀಗೆಂದು) ಹೇಳಿದನು : 'ಎಲೈ ಅರಸನೆ, ನನ್ನ ಆಶ್ರಮದ ನೆರೆಯಲ್ಲಿ ಮಾರೀಚ, ಸುಬಾಹು- ಎಂಬ ಹೆಸರಿನ ಇಬ್ಬರು ರಾಕ್ಷಸರು ವಾಸಮಾಡಿಕೊಂಡಿರುವರು. ಮತ್ತು ಅವರು ನನ್ನ ಯಾಗದ ಕೆಲಸಕ್ಕೆ ಯಾವಾಗಲೂ ಅಡ್ಡಿಯನ್ನು ಮಾಡುತ್ತಾರೆ. ಆದ್ದರಿಂದ ಅವರಿಬ್ಬರ ಕೊಲೆಗಾಗಿ ಹಿರಿಯಮಗನಾದ ರಾಮನನ್ನು ಲಕ್ಷ್ಮಣನೊಡನೆ ಕಳುಹಿಸು. ನಿನಗೆ ಒಳ್ಳೆಯದಾಗುವದು'.

ಕೋಮಲನಾದ ರಾಮನನ್ನು ಮುನಿಗೆ ಕೊಡುವದಕ್ಕೆ ಅರಸನು ಮೊದಲು ಶಕ್ತನಾಗಲಿಲ್ಲ. (ಕೊಡಲಾರದೆ ಹೋದನು). ಹಾಗಿದ್ದರೂ ಕುಲಗುರುವಾದ ವಸಿಷ್ಠನೊಡನೆ ಆಲೋಚಿಸಿ ಆತನ ಅಪ್ಪಣೆಯಿಂದ (ಅಪ್ಪಣೆಯಂತೆ) ಹೇಗೋ ಆ ಪ್ರಿಯಪುತ್ರನನ್ನೂ ಲಕ್ಷ್ಮಣನನ್ನೂ ವಿಶ್ವಾಮಿತ್ರನಿಗೆ ಸಮರ್ಪಿಸಿದನು. ಆಮೇಲೆ ಭಗವಂತನಾದ ವಿಶ್ವಾಮಿತ್ರನು ಬಹಳವಾಗಿ ಸಂತೋಷವುಳ್ಳವನಾಗಿ ಆ ಇಬ್ಬರು ರಾಜಕುಮಾರರೊಡನೆ ಹೊರಟನು.

## ೨೮. ಪರಿಕರ್ಮಾಷ್ಟಕಮ್

ಅತ್ರ ಕತಿಚನ ಸಙ್ಖ್ಯಾವಾಚಕಾ ವಿದ್ಯನ್ತೇ । ತಾನ್ ಸಮ್ಯಕ್ ಪಠತ । ಪಞ್ಚವಿಂಶತಿಃ, ಷಡ್ವಿಂಶತಿಃ, ಸಪ್ತವಿಂಶತಿಃ, ಅಷ್ಟಾವಿಂಶತಿಃ, ಏಕೋನತ್ರಿಂಶತ್,[1] ತ್ರಿಂಶತ್, ಸಪ್ತತ್ರಿಂಶತ್, ದ್ವಾಚತ್ವಾರಿಂಶತ್,[2] ತ್ರಯಃ ಪಞ್ಚಾಶತ್,[3] ದ್ವಿಷಷ್ಟಿಃ,[4] ಸಪ್ತಸಪ್ತತಿಃ, ಅಶೀತಿಃ, ತ್ರ್ಯಶೀತಿಃ, ಷಣ್ಣವತಿಃ, ಶತಂ, ದ್ವಿಶತಂ,[5] ತ್ರಿಶತಂ,[6] ಸಹಸ್ರಮ್ ॥

ಚತ್ವಾರಿ ನವಭಿಃ ಸಙ್ಕಲಯ । ಅನಯೋಃ ಸಙ್ಖ್ಯಯೋರ್ಯೋಗಃ ಕಿಂ ಭವತಿ? ಏಕಚತ್ವಾರಿಂಶತೋ[7] ದ್ವಾತ್ರಿಂಶತಂ ವ್ಯವಕಲಯ । ಕಿಮವಶಿಷ್ಯತೇ ? ಅನಯೋಃ ಸಙ್ಖ್ಯಯೋರನ್ತರಂ ಕಿಯದ್ಭವತಿ ? ನವ । ದ್ವಾದಶ ಚತುರ್ಭಿರ್ಗುಣಯ ।[8] ಫಲಂ ಕಿಂ

1. ನವವಿಂಶತಿಃ, ಊನತ್ರಿಂಶತ್, ಏಕಾನ್ನತ್ರಿಂಶತ್- ಎಂದೂ ಹೇಳಬಹುದು.
2. ದ್ವಿಚತ್ವಾರಿಂಶತ್ ಎಂದೂ ಹೇಳಬಹುದು.
3. ತ್ರಿಪಂಚಾಶತ್ ಎಂದೂ ಹೇಳಬಹುದು.
4. ದ್ವಾಷಷ್ಟಿಃ ಎಂದೂ ಹೇಳಬಹುದು.
5. ದ್ವೇ ಶತೇ ಎಂದೂ ಹೇಳಬಹುದು.
6. ಅಥವಾ - ತ್ರೀಣಿ ಶತಾನಿ'.
7. ಇದು ಪಞ್ಚಮೀವಿಭಕ್ತಿ.
8. ಈ ಪಾಠದಲ್ಲಿರುವ ಕೆಲವು ಸಂಖ್ಯಾವಾಚಕಗಳು ಸಂಸ್ಕೃತದಲ್ಲಿ ಬಹುವಚನವಾದರೂ ಇವುಗಳನ್ನು ಏಕವಚನದಿಂದಲೇ ಕನ್ನಡಿಸಬೇಕು.

ಭವತಿ ? ಅಷ್ಟಾಚತ್ವಾರಿಂಶತ್ । ಚತುಃಷಷ್ಟಿಂ ದ್ವಾದಶಭಿರ್ಭಾಜಯ । ಪಞ್ಚ ಲಭ್ಯನ್ತೇ, ಚತ್ವಾರಿ ಶಿಷ್ಯನ್ತೇ । ಷಟ್ಸಪ್ತತ್ಯಾ ಅಷ್ಟನವತಿಂ ಭಾಜಯ । ಲಬ್ಧಂ ಕಿಯತ್ ಭವತಿ ? ಶೇಷಶ್ಚ ಕಿಯಾನ್ ? ಚತುಸ್ತ್ರಿಂಶತೋಽರ್ಧಂ ಕಿಯತ್ ? ಸಪ್ತದಶ । ದ್ವಾದಶಾನಾಂ ಚತುರ್ಥೋಽಂಶಃ ಕಿಯಾನ್ ತ್ರೀಣಿ । ಷಣ್ಣಾಂ ವರ್ಗಃ ಕಿಯಾನ್ ಭವತಿ ? ಷಟ್ತ್ರಿಂಶತ್। ಏಕಾಶೀತೇಃ ವರ್ಗಮೂಲಂ ಕಿಮ್ ? ನವ । ದಶಾನಾಂ ಘನಃ ಕಿಯಾನ್ ಸಹಸ್ರಮ್ । ಚತುಃಷಷ್ಟೇರ್ಘನಮೂಲಂ ಕಿಯದ್ಭವತಿ ? ಚತ್ವಾರಿ ॥

## ೨೮. ಲೆಕ್ಕದ ಎಂಟು ಬಗೆ

ಇಲ್ಲಿ ಕೆಲವು ಸಂಖ್ಯೆಯನ್ನು ಹೇಳುವ ಮಾತುಗಳು ಇವೆ. ಅವುಗಳನ್ನು ಚೆನ್ನಾಗಿ ಓದಿರಿ, ಇಪ್ಪತ್ತೈದು, ಇಪ್ಪತ್ತಾರು, ಇಪ್ಪತ್ತೇಳು, ಇಪ್ಪತ್ತೆಂಟು, ಇಪ್ಪತ್ತೊಂಬತ್ತು, ಮೂವತ್ತು, ಮೂವತ್ತೇಳು, ನಲವತ್ತೆರಡು, ಐವತ್ತಮೂರು, ಅರವತ್ತೆರಡು, ಎಪ್ಪತ್ತೊಂಬತ್ತು, ಎಂಬತ್ತು, ಎಂಬತ್ತುಮೂರು, ತೊಂಬತ್ತಾರು, ನೂರು, ಇನ್ನೂರು, ಮುನ್ನೂರು, ಸಾವಿರ.

ನಾಲ್ಕನ್ನು ಒಂಬತ್ತರೊಡನೆ (ಒಂಬತ್ತಕ್ಕೆ) ಸೇರಿಸು. ಈ ಎರಡು ಸಂಖ್ಯೆಗಳ ಒಟ್ಟು ಎಷ್ಟಾಗುತ್ತದೆ ? ನಲವತ್ತೊಂದರಿಂದ ಮೂವತ್ತೆರಡನ್ನು ಕಳೆ. ಏನು ಉಳಿಯುತ್ತದೆ ? ಇವೆರಡು ಸಂಖ್ಯೆಗಳ ವ್ಯತ್ಯಾಸವು ಎಷ್ಟಾಗುವದು ? ಒಂಬತ್ತು. ಹನ್ನೆರಡನ್ನು ನಾಲ್ಕರಿಂದ ಗುಣಿಸು. ಫಲವು ಎಷ್ಟು ಆಗುತ್ತದೆ ? ನಲವತ್ತೆಂಟು. ಅರವತ್ತುನಾಲ್ಕನ್ನು ಹನ್ನೆರಡರಿಂದ ಭಾಗಿಸು. ಐದು ಬರುತ್ತದೆ, ಮತ್ತು ನಾಲ್ಕು ಉಳಿಯುತ್ತದೆ. ಎಪ್ಪತ್ತಾರರಿಂದ ತೊಂಬತ್ತೆಂಟನ್ನು ಭಾಗಿಸು. ಲಬ್ಧವು ಎಷ್ಟಾಗುತ್ತದೆ? ಮತ್ತು ಶೇಷವು ಎಷ್ಟು ? ಮೂವತ್ತು ನಾಲ್ಕರ ಅರ್ಧವೆಷ್ಟು ? ಹದಿನೇಳು. ಹನ್ನೆರಡರ ನಾಲ್ಕನೆಯಂಶವು (ಕಾಲುಪಾಲು) ಎಷ್ಟು ? ಮೂರು. ಆರರ ವರ್ಗವೆಷ್ಟು? ಮೂವತ್ತಾರು. ಎಂಬತ್ತೊಂದರ ವರ್ಗಮೂಲವೇನು ? ಒಂಬತ್ತು. ಹತ್ತಕ್ಕೆ ಘನವೆಷ್ಟು ? ಸಾವಿರ. ಅರವತ್ತುನಾಲ್ಕರ ಘನಮೂಲವೆಷ್ಟಾಗುವದು ? ನಾಲ್ಕು

## ೨೯. ಭಾರತಸಾವಿತ್ರೀ

ಮಹರ್ಷಿರ್ಭಗವಾನ್ ವ್ಯಾಸಃ ಕೃತ್ವೇಮಾಂ ಸಂಹಿತಾಂ ಪುರಾ ।
ಶ್ಲೋಕೈಶ್ಚತುರ್ಭಿರ್ಧರ್ಮಾತ್ಮಾ ಪುತ್ರಮಧ್ಯಾಪಯಚ್ಛುಕಮ್ ॥[1]

1. ಪುರಾ ಧರ್ಮಾತ್ಮಾ ಮಹರ್ಷಿಃ ಭಗವಾನ್ ವ್ಯಾಸಃ, ಇಮಾಂ ಸಂಹಿತಾಂ ಕೃತ್ವಾ ಚತುರ್ಭಿಃ ಶ್ಲೋಕೈಃ ಪುತ್ರಂ ಶುಕಂ ಅಧ್ಯಾಪಯತ್ (ಅ).

ಮಾತಾಪಿತೃಸಹಸ್ರಾಣಿ ಪುತ್ರದಾರಶತಾನಿ ಚ ।
ಸಂಸಾರೇಷ್ವನುಭೂತಾನಿ ಯಾನ್ತಿ ಯಾಸ್ಯನ್ತಿ ಚಾಪರೇ ॥
ಹರ್ಷಸ್ಥಾನಸಹಸ್ರಾಣಿ ಭಯಸ್ಥಾನಶತಾನಿ ಚ ।
ದಿವಸೇ ದಿವಸೇ ಮೂಢಮಾವಿಶನ್ತಿ ನ ಪಣ್ಡಿತಮ್ ॥
ಊರ್ಧ್ವಬಾಹುರ್ವಿರೌಮ್ಯೇಷ ನ ಚ ಕಶ್ಚಿಚ್ಛೃಣೋತಿ ಮೇ ।[1]
ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ ॥

ನ ಜಾತು ಕಾಮಾನ್ನ ಭಯಾನ್ನ ಲೋಭಾ-
ದ್ಧರ್ಮಂ ತ್ಯಜೇಜ್ಜೀವಿತಸ್ಯಾಪಿ[2] ಹೇತೋಃ ।
ನಿತ್ಯೋ ಧರ್ಮಃ ಸುಖದುಃಖೇ ತ್ವನಿತ್ಯೇ
ಜೀವೋ ನಿತ್ಯೋ ಹೇತುರಸ್ಯ ತ್ವನಿತ್ಯಃ ॥

ಇಮಾಂ ಭಾರತಸಾವಿತ್ರೀಂ ಪ್ರಾತರುತ್ಥಾಯ ಯಃ[3] ಪಠೇತ್ ।
ಸ ಭಾರತಫಲಂ ಪ್ರಾಪ್ಯ ಪರಂ ಬ್ರಹ್ಮಾಧಿಗಚ್ಛತಿ ॥

## ೨೯. ಭಾರತಸಾವಿತ್ರಿ

ಪೂರ್ವದಲ್ಲಿ ಧರ್ಮಾತ್ಮನೂ ಪೂಜ್ಯನೂ ಮಹರ್ಷಿಯೂ ಆದ ವ್ಯಾಸನು ಈ (ಭಾರತ)ಸಂಹಿತೆಯನ್ನು ಮಾಡಿ ನಾಲ್ಕು ಶ್ಲೋಕಗಳಿಂದ (ಅದನ್ನು ಸಂಗ್ರಹಿಸಿ) ಮಗನಾದ ಶುಕನನ್ನು ಓದಿಸಿದನು.

ತಾಯಿತಂದೆಗಳ (ಎಷ್ಟೋ) ಸಾವಿರಗಳು, ಮತ್ತು ಮಕ್ಕಳು ಹೆಂಡಿರ (ಎಷ್ಟೋ) ನೂರುಗಳು ಸಂಸಾರಗಳಲ್ಲಿ ಅನುಭವಿಸಲ್ಪಟ್ಟವು, (ಈಗ) ಬರುತ್ತಲಿವೆ, ಬೇರೆ (ಎಷ್ಟೋ) ಮಂದಿಯೂ (ಮುಂದೆ) ಬರುವರು.

ಸಂತೋಷಕ್ಕೆ ಕಾರಣಗಳು ಸಾವಿರಾರು, ಹೆದರಿಕೆಗೆ ಕಾರಣಗಳು ನೂರಾರು- ದಿನದಿನದಲ್ಲಿಯೂ ಮೂಢನಾದವನನ್ನು ಬಂದು ಸೇರುತ್ತವೆ, ಪಂಡಿತನನ್ನು (ಸೇರುವದು) ಇಲ್ಲ.

---

1. ಏಷಃ (ಅಹಮ್) ಊರ್ಧ್ವಬಾಹುಃ ವಿರೌಮಿ, ನ ಚ ಮೇ ಕಶ್ಚಿತ್ ಶೃಣೋತಿ (ಅ).

2. ಕಾಮಾತ್ ಧರ್ಮಂ ನ ಜಾತು ತ್ಯಜೇತ್, ಭಯಾತ್ ನ (ತ್ಯಜೇತ್), ಲೋಭಾತ್ ನ (ತ್ಯಜೇತ್), ಜೀವಿತಸ್ಯ ಹೇತೋರಪಿ (ನ ತ್ಯಜೇತ್), ಧರ್ಮೋ ನಿತ್ಯಃ, ಸುಖದುಃಖೇ ತು ಅನಿತ್ಯೇ, ಜೀವೋ ನಿತ್ಯಃ, ಅಸ್ಯ ಹೇತುಸ್ತು ಅನಿತ್ಯಃ.

3. ಯಃ ಪ್ರಾತರುತ್ಥಾಯ ಇಮಾಂ ಭಾರತಸಾವಿತ್ರೀಂ ಪಠೇತ್ (ಅ).

ಇಗೋ, ಮೇಲಕ್ಕೆತ್ತಿದ ಭುಜಗಳುಳ್ಳವನಾಗಿ (ಮೇಲಕ್ಕೆ ಕೈಯೆತ್ತಿ) ಸಾರಿ ಹೇಳುತ್ತಿದ್ದೇನೆ. ನನ್ನ (ಮಾತನ್ನು) ಯಾರೂ ಕೇಳುವದಿಲ್ಲ (ಕೇಳುವದಿಲ್ಲವಲ್ಲ!) ಧರ್ಮದ ದೆಸೆಯಿಂದ ಅರ್ಥವೂ ಕಾಮವೂ (ಆಗುತ್ತವೆ) ; ಅದು ಏತಕ್ಕೋಸ್ಕರ ಮಾಡಲ್ಪಡುವದಿಲ್ಲ ? (ಧರ್ಮದಿಂದಲೇ ಅರ್ಥವೂ ಕಾಮವೂ ಉಂಟಾಗುತ್ತವೆಯಲ್ಲ, ಅಂಥ ಧರ್ಮವನ್ನು ಏಕೆ ಅನುಸರಿಸಬಾರದು ?)

ಕಾಮದ ದೆಸೆಯಿಂದ ಎಂದಿಗೂ ಧರ್ಮವನ್ನು ಬಿಡಬಾರದು, ಭಯದ ದೆಸೆಯಿಂದಲೂ (ಹೆದರಿಕೆಯಿಂದಲೂ) ಬಿಡಬಾರದು, ಲೋಭದ ದೆಸೆಯಿಂದಲೂ (ಲೋಭದಿಂದಲೂ) ಬಿಡಬಾರದು, ಪ್ರಾಣದ ಕಾರಣದಿಂದ ಕೂಡ ಬಿಡಬಾರದು. [ಆಸೆಯನ್ನು ಪೂರ್ತಿಮಾಡಿಕೊಳ್ಳುವದಕ್ಕಾಗಲಿ, ತನಗುಂಟಾಗಬಹುದಾದ ಕಷ್ಟಕ್ಕೆ ಹೆದರಿಯಾಗಲಿ, ಇದ್ದದ್ದು ಕಳೆದುಹೋಗಬಾರದೆಂಬ ಜಿಪುಣತನದಿಂದಾಗಲಿ, ಧರ್ಮವನ್ನು ಬಿಡಬಾರದು ; ತನ್ನ ಪ್ರಾಣವೇ ಹೋಗುವಂತಿದ್ದರೂ ಬಿಡಬಾರದು.] ಧರ್ಮವು ನಿತ್ಯವಾದದ್ದು, ಸುಖದುಃಖಗಳಾದರೋ ಅನಿತ್ಯವಾದವುಗಳು ; ಜೀವನು ನಿತ್ಯನು, ಇವನ (ಸುಖದುಃಖಕ್ಕೆ) ಕಾರಣವಾದದ್ದಾದರೋ ಅನಿತ್ಯವು.

ಯಾವನು ಬೆಳಗ್ಗೆ ಎದ್ದು ಈ ಭಾರತಸಾವಿತ್ರಿಯನ್ನು ಹೇಳುತ್ತಾನೋ ಅವನು ಭಾರತ(ವನ್ನು ಓದಿದ) ಫಲವನ್ನು ಹೊಂದಿ ಪರಬ್ರಹ್ಮವನ್ನು ಪಡೆಯುತ್ತಾನೆ.

## ೩೦. ತಾಟಕಾದೀನಾಂ ವಧಃ

ರಾಜಪುತ್ರಾಭ್ಯಾಂ ಸಹ ಗಚ್ಛನ್ ವಿಶ್ವಾಮಿತ್ರೋ ಮಾರ್ಗೇ ರಾಮಾಯ ಬಲಾ, ಅತಿಬಲಾ ಚೇತಿ ಪ್ರಖ್ಯಾತೇ ದ್ವೇ ವಿದ್ಯೇ ಉಪಾದಿಶತ್ । ತಯೋಃ ಪ್ರಭಾವೇಣ ತಸ್ಯ ತತಃ ಪರಂ ಕ್ಷುಧಾ ಪಿಪಾಸಾ ವಾ[1] ನ ಸಮಜಾಯತ । ಅಥ ತಸ್ಯ ಮುನೇರ್ವಚನಾತ್ ರಾಮೋ ಲೋಕಸ್ಯ ಪೀಡಾಕರೀಂ ತಾಟಕಾಂ ನಾಮ ರಾಕ್ಷಸೀಮೇಕೇನೈವ ಬಾಣೇನ ಸಂಹೃತವಾನ್ । ತೇನ ಕಾರ್ಯೇಣ ಸಂತುಷ್ಟೋ ಭಗವಾನ್ ಮುನೀನ್ದ್ರಃ ತಸ್ಮೈ ವಿವಿಧಾನ್ಯಸ್ತ್ರಾಣಿ[2] ಪ್ರಾಯಚ್ಛತ್ ॥

ತತಸ್ತೇ ಕ್ರಮೇಣ ಸಿದ್ಧಾಶ್ರಮಂ ನಾಮ ವಿಶ್ವಾಮಿತ್ರಸ್ಯ ಆಶ್ರಮಂ ಸಂಪ್ರಾಪ್ತಾಃ । ಅಥ ಪ್ರಾರಬ್ಧೇ ಯಜ್ಞೇ[3] ವಿಘ್ನಕರ್ತಾರೌ ಮಾರೀಚಸುಬಾಹೂ ಯಥಾಪೂರ್ವಂ

1. ಕ್ಷುಧಾ ವಾ ಪಿಪಾಸಾ ವಾ - ಎಂದು ಎರಡು ಶಬ್ದಗಳಿಗೂ 'ವಾ' ಎಂಬ ಅವ್ಯಯವನ್ನು ಸೇರಿಸಬಹುದು.

2. ವಿವಿಧಾನಿ-ಅಸ್ತ್ರಾಣಿ. 3. 'ಯಜ್ಞೇ ಪ್ರಾರಬ್ಧೇ' (ಅ). 'ಸತಿ' ಸಪ್ತಮೀ.

ಸಮಾಗತೌ । ರಾಮೋಽಪಿ ಧನುರಾದಾಯ ದ್ವೌ ಬಾಣೌ ಸಮಧತ್ತ । ತಯೋರೇಕೇನ ಬಾಣೇನ ಮಾರೀಚೋ ಬಹುದೂರೇ ಸಮುದ್ರೇ ಕ್ಷಿಪ್ತಃ । ಅಪರೇಣ ತು ಸುಬಾಹುರ್ನಿಹತಃ । ತಯೋರ್ದೈತ್ಯಯೋರನುಚರಾಂಶ್ಚ[1] ಲಕ್ಷ್ಮಣಃ ಪ್ರಾಣೈರ್ವಿಯೋಜಿತವಾನ್ ॥

ಏತದ್ದೃಷ್ಟ್ವಾ ವಿಶ್ವಾಮಿತ್ರಃ, ಸಿದ್ಧಾಶ್ರಮೇ ಸ್ಥಿತಾ ಅನ್ಯೇ ಮುನಯಶ್ಚ ರಾಮಲಕ್ಷ್ಮಣಯೋಃ ಪರಾಕ್ರಮಂ ಬಹುಧಾ ಪ್ರಾಶಂಸನ್ । ಅಥ ವಿಶ್ವಾಮಿತ್ರಸ್ಯ ಯಜ್ಞೋ ನಿರ್ವಿಘ್ನಂ ಸಮಾಪ್ತಿಮಗಚ್ಛತ್ ॥

## ೩೦. ತಾಟಕಿಯೇ ಮೊದಲಾದವರನ್ನು ಕೊಂದದ್ದು

ರಾಜಪುತ್ರರೊಡನೆ ಹೋಗುತ್ತಾ ವಿಶ್ವಾಮಿತ್ರನು ದಾರಿಯಲ್ಲಿ ರಾಮನಿಗೆ ಬಲಾ, ಅತಿಬಲಾ- ಎಂದು ಪ್ರಸಿದ್ಧವಾದ ಎರಡು ವಿದ್ಯೆಗಳನ್ನು ಉಪದೇಶಮಾಡಿದನು. ಅವುಗಳ ಸಾಮರ್ಥ್ಯದಿಂದ ಅವನಿಗೆ ಆಮೇಲೆ ಹಸಿವಾಗಲಿ ಬಾಯಾರಿಕೆಯಾಗಲಿ ಉಂಟಾಗಲಿಲ್ಲ. ಅನಂತರದಲ್ಲಿ ಆ ಮುನಿಯ ಮಾತಿನ ದೆಸೆಯಿಂದ (ಮಾತಿನಂತೆ) ರಾಮನು ಜನಕ್ಕೆ ತೊಂದರೆಮಾಡುತ್ತಿರುವ ತಾಟಕಿಯೆಂಬ ರಾಕ್ಷಸಿಯನ್ನು ಒಂದೇ ಬಾಣದಿಂದ ಸಂಹರಿಸಿದನು. ಆ ಕೆಲಸದಿಂದ ಸಂತೋಷಗೊಂಡ ಪೂಜ್ಯನಾದ ಮುನಿಶ್ರೇಷ್ಠನು ಅವನಿಗೆ ಬಗೆಬಗೆಯಾದ ಅಸ್ತ್ರಗಳನ್ನು ಕೊಟ್ಟನು.

ಆಮೇಲೆ ಅವರು ಕ್ರಮದಿಂದ (ಕಾಲಕ್ರಮದಲ್ಲಿ) ಸಿದ್ಧಾಶ್ರಮವೆಂಬ ವಿಶ್ವಾಮಿತ್ರನ ಆಶ್ರಮವನ್ನು ತಲುಪಿದರು. ಆಮೇಲೆ ಯಜ್ಞವು ಮೊದಲಾಗಲು ಅಡ್ಡಿಯನ್ನು ಮಾಡುವ ಮಾರೀಚಸುಬಾಹುಗಳು ಮೊದಲಿನಂತೆ ಬಂದರು. ರಾಮನೂ ಬಿಲ್ಲನ್ನು ತೆಗೆದುಕೊಂಡು ಎರಡು ಬಾಣಗಳನ್ನು ಹೂಡಿದನು. ಅವುಗಳಲ್ಲಿ ಒಂದು ಬಾಣದಿಂದ ಮಾರೀಚನು ಬಹುದೂರದಲ್ಲಿದ್ದ ಸಮುದ್ರದಲ್ಲಿ ಎಸೆಯಲ್ಪಟ್ಟನು (ಬಾಣವು ಮಾರೀಚನನ್ನು ಬಹು ದೂರದಲ್ಲಿದ್ದ ಸಮುದ್ರಕ್ಕೆ ಹಾಕಿತು). ಮತ್ತೊಂದರಿಂದ ಸುಬಾಹುವು ಕೊಲ್ಲಲ್ಪಟ್ಟನು (ಮತ್ತೊಂದು ಸುಬಾಹುವನ್ನು ಕೊಂದಿತು). ಆ ಇಬ್ಬರು ದೈತ್ಯರ ಸೇವಕರನ್ನು ಕೂಡ ಲಕ್ಷ್ಮಣನು ಪ್ರಾಣಗಳಿಂದ ಅಗಲಿಸಿದನು. (ಕೊಂದನು).

ಇದನ್ನು ಕಂಡು ವಿಶ್ವಾಮಿತ್ರನೂ ಉಳಿದ ಮುನಿಗಳೂ ರಾಮಲಕ್ಷ್ಮಣರ ಪರಾಕ್ರಮವನ್ನು ಬಹುವಾಗಿ ಕೊಂಡಾಡಿದರು. ಆಮೇಲೆ ವಿಶ್ವಾಮಿತ್ರನ ಯಜ್ಞವು ನಿರ್ವಿಘ್ನವಾಗಿ (ಅಡ್ಡಿಯಿಲ್ಲದೆ) ಕೊನೆಯನ್ನು ಹೊಂದಿತು. (ಕೊನೆಗೊಂಡಿತು).

1. ಅನುಚರಾನ್ - ಚ.

# ೩೧. ಛತ್ರಮ್

ಮಮ ನಿಕಟೇ ಏಕಂ ಛತ್ರಮಸ್ತಿ । ವರ್ಷಾಸು ಗ್ರೀಷ್ಮಸಮಯೇ ವಾ ಅಹಮನೇನ ಸಹಿತ ಏವ ಬಹಿಃ ಸಞ್ಚರಾಮಿ । ತತೋ ಮೇ ವರ್ಷಾದಾತಪಾದ್ವಾ[1] ಭೀತಿರ್ನ ವಿದ್ಯತೇ ॥

ಛತ್ರೇಷು ದಣ್ಡಃ, ಶಲಾಕಾಪಞ್ಜರಮ್, ಆಚ್ಛಾದನಂ ಚೇತಿ ತ್ರೀಣಿ ಪ್ರಧಾನಾನ್ಯಙ್ಗಾನಿ । ಅಸ್ಮಿಂಶ್ಛತ್ರೇ[2] ದಣ್ಡಃ ಕಪಿಶವರ್ಣೋಽಸ್ತಿ । ದಣ್ಡಸ್ಯ ಮುಷ್ಟಿಸ್ತು ನೀಲಾ ಸ್ಥೂಲಾ ಸುವೃತ್ತಾ ಚ । ದಣ್ಡಃ ಪಞ್ಜರೋದ್ದೇಶೇ ತನುತರೋಽಸ್ತಿ । ಆಚ್ಛಾದನಾದ್ಬಹಿರ್ನಿಃಸೃತಸ್ಯ ತಸ್ಯ ಕೋಟಿಸ್ತು ಅಯೋಮಯೇನ ಶಿರಸ್ತ್ರಾಣೇನ ಸಂವೃತಾಸ್ತಿ । ತೇನ ದಣ್ಡಃ ಶೀಘ್ರಂ ನ ಜೀರ್ಯತೇ ॥

ದಣ್ಡಸ್ಯ ಮುಷ್ಟಿದೇಶೇ ಏಕಾ ಸನ್ನತತನ್ತ್ರೀ ವಿದ್ಯತೇ । ತಸ್ಯಾ ಬಲತಃ ಛತ್ರಂ ಸಂಕೋಚಯಿತುಂ ಶಕ್ಯತೇ । ತಥೈವ ತನುತರಾಯಾಃ ಕೋಟೇಃ ಪ್ರದೇಶೇ ಅಪರಾ ತನ್ತ್ರೀ ವಿದ್ಯತೇ । ತತ್ಸಹಾಯೇನ ಛತ್ರಂ ವಿಸ್ತಾರಯಿತುಂ ಶಕ್ಯತೇ ॥

ಛತ್ರಸ್ಯ ಪಞ್ಜರಂ ತೀಕ್ಷ್ಣಾಯಸಾ ನಿರ್ಮಿತಮಸ್ತಿ । ದಣ್ಡಸ್ಯ ತನುತರಾಗ್ರಸ್ಯ ಸಮೀಪೇ ಪಿತ್ತಲೋರ್ಮಿಕಾ ವಿದ್ಯತೇ । ಅಷ್ಟೌ ಶಲಾಕಾಸ್ತಯಾ ಸಂಬದ್ಧಾಃ ಸನ್ತಿ । ಅಪರಾ ಅಷ್ಟ ಶಲಾಕಾಸ್ತಾಭಿಃ ಸಂಬದ್ಧಾಃ ಸತ್ಯಃ[3] ದ್ವಿತೀಯಸ್ಮಿನ್ನಗ್ರೇ ಅನ್ಯಯೋ-ರ್ಮಿಕಯಾ ಸಂಬದ್ಧಾಸ್ತಿಷ್ಠನ್ತಿ । ಸಾ ಚೇಯಮೂರ್ಮಿಕಾ ದಣ್ಡಸ್ಯ ಊರ್ಧ್ವಮಧಶ್ಚ ಚಾಲಯಿತುಂ ಶಕ್ಯತೇ । ಅಸ್ಯಾ ಆರೋಹಣೇನಾವರೋಹಣೇನ ಚ ಛತ್ರಂ ವಿಸ್ತೃತಂ ಸಂಕುಚಿತಂ ಚ ಭವತಿ ॥

ಛತ್ರಸ್ಯಾಚ್ಛಾದನಂ ಕೃಷ್ಣಂ, ಕಾರ್ಪಾಸಿಕಂ ಚ । ಕ್ವಚಿತ್ತು ಛತ್ರಾಣಾ-ಮಾಚ್ಛಾದನವಸ್ತ್ರಾಣಿ ಕೌಶೇಯೇನಾಪಿ ಕ್ರಿಯನ್ತೇ । ಆಚ್ಛಾದನಂ ಪಞ್ಜರೋಪರಿ ವಿತತಶಲಾಕಾಕೋಟಿಷು ತನ್ತುಭಿರ್ಬದ್ಧಮಸ್ತಿ ॥

---

1. ಹೆದರಿಕೆಯೆಂಬರ್ಥದ ಮಾತು ಸೇರಿದರೆ ಏತಕ್ಕೆ ಹೆದರುತ್ತಾರೋ ಅದರ ಹೆಸರಿಗೆ ಸಂಸ್ಕೃತದಲ್ಲಿ ಪಂಚಮಿ ಬರುವದು.

2. ಅಸ್ಮಿನ್ - ಛತ್ರೇ.

3. ಸನ್, ಸತೀ, ಸತ್- ಎಂಬ ಶಬ್ದಗಳನ್ನು ಆಯಾ ಲಿಂಗದಲ್ಲಿ 'ಆಗಿ' ಎಂಬರ್ಥದಲ್ಲಿ ಸೇರಿಸುವರು ; ಆಗ ವಿಶೇಷಣಗಳಿಗೆ ಉತ್ತರವಿಶೇಷಣವೆಂದು ಹೆಸರು. ಉದಾಹರಣೆ : ಸಂಬದ್ಧಃ ಸನ್- ಸೇರಿಸಲ್ಪಟ್ಟವನಾಗಿ, ಸಂಬದ್ಧಾ ಸತೀ - ಸೇರಿಸಲ್ಪಟ್ಟವಳಾಗಿ, :ಬದ್ಧಂ ಸತ್- ಸೇರಿಸಲ್ಪಟ್ಟದ್ದಾಗಿ.

## ೩೧. ಕೊಡೆ

ನನ್ನ ಹತ್ತಿರ ಒಂದು ಕೊಡೆಯಿದೆ. ಮಳೆಗಾಲದಲ್ಲಿಯಾಗಲಿ ಬೇಸಿಗೆಯಲ್ಲಾಗಲಿ ನಾನು ಇದರೊಡನೆಯೇ (ಇದನ್ನು ಹಿಡಿದುಕೊಂಡೇ) ಹೊರಗೆ ಓಡಾಡುತ್ತೇನೆ. ಆದ್ದರಿಂದ ನನಗೆ ಮಳೆಯ ದೆಸೆಯಿಂದಾಗಲಿ ಬಿಸಿಲಿನ ದೆಸೆಯಿಂದಾಗಲಿ (ಮಳೆಯ ಅಥವಾ ಬಿಸಿಲಿನ) ಹೆದರಿಕೆ ಇರುವದಿಲ್ಲ.

ಕೊಡೆಗಳಲ್ಲಿ ಕೋಲು, ಸಲಾಕೆಗಳ ಗೂಡು, ಮತ್ತೂ ಹೊದಿಕೆ- ಎಂದು ಮೂರು ಮುಖ್ಯವಾದ ಭಾಗಗಳು. ಈ ಕೊಡೆಯಲ್ಲಿ ಕೋಲು ಕಂದು ಬಣ್ಣದ್ದಾಗಿದೆ. ಕೋಲಿನ ಹಿಡಿಯಾದರೋ ಕಪ್ಪು, ದಪ್ಪ, ಮತ್ತು ದುಂಡಗಿರುವಂಥದ್ದು. ಕೋಲು ಗೂಡಿನ ಕಡೆಯಲ್ಲಿ ಹೆಚ್ಚು ಸಣ್ಣನಾಗಿದೆ. ಹೊದಿಕೆಯ ಹೊರಗೆ ಅದರ ಕೊನೆಯಾದರೋ ಕಬ್ಬಿಣದಿಂದ ಮಾಡಿದ ತೋಪಿಯಿಂದ ಮುಚ್ಚಲ್ಪಟ್ಟಿರುತ್ತದೆ. ಅದರಿಂದ ಕೋಲು ಬೇಗ ಸವೆಯುವದಿಲ್ಲ.

ಕೋಲಿನ ಹಿಡಿಯ ಕಡೆಯಲ್ಲಿ ಒಂದು ಬಗ್ಗಿದ ತಂತಿ ಇದೆ. ಅದರ ಬಲದಿಂದ ಕೊಡೆಯನ್ನು ಸಣ್ಣದುಮಾಡುವದಕ್ಕೆ (ಮಡಿಸುವದಕ್ಕೆ) ಆಗುತ್ತದೆ ; ಅದರಂತೆಯೇ ಸಣ್ಣ ಕೊನೆಯ ಕಡೆಯಲ್ಲಿ ಮತ್ತೊಂದು ತಂತಿ ಇದೆ. ಅದರ ಸಹಾಯದಿಂದ ಕೊಡೆಯನ್ನು ಅಗಲಿಸುವದಕ್ಕೂ (ಅಗಲಿಸಿಡುವದಕ್ಕೂ) ಆಗುತ್ತದೆ.

ಕೊಡೆಯ ಗೂಡು ಉಕ್ಕಿನಿಂದ ಮಾಡಲ್ಪಟ್ಟಿದೆ. ಕೋಲಿನ ಸಣ್ಣ ಕೊನೆಯ ಹತ್ತಿರ ಹಿತ್ತಾಳೆಯ ಉಂಗುರವಿದೆ. ಎಂಟು ಸಲಾಕೆಗಳು ಅದರೊಡನೆ ಸೇರಿಸಲ್ಪಟ್ಟಿವೆ. ಬೇರೆ ಎಂಟು ಸಲಾಕೆಗಳು ಅವುಗಳೊಡನೆ ಸೇರಿಸಲ್ಪಟ್ಟವಾಗಿ ಎರಡನೆಯ (ಮತ್ತೊಂದು) ತುದಿಯಲ್ಲಿ ಬೇರೊಂದು ಉಂಗುರದೊಡನೆ ಸೇರಿಸಲ್ಪಟ್ಟು ಇರುತ್ತವೆ. ಆ ಈ ಉಂಗುರವು ಕೋಲಿನ ಮೇಲೂ ಕೆಳಗೂ ಓಡಾಡಿಸುವದಕ್ಕೆ ಬರುತ್ತದೆ. ಇದರ ಏರುವಿಕೆಯಿಂದಲೂ ಇಳಿಯುವಿಕೆಯಿಂದಲೂ ಕೊಡೆಯು ಅಗಲಿಸಲ್ಪಟ್ಟದ್ದಾಗಿಯೂ ಮಡಿಸಲ್ಪಟ್ಟದ್ದಾಗಿಯೂ ಆಗುತ್ತದೆ.

ಕೊಡೆಯ ಹೊದಿಕೆಯು ಕಪ್ಪು ಮತ್ತು ಹತ್ತಿಯದು. ಕೆಲವು ವೇಳೆಯಾದರೊ ಕೊಡೆಗಳ ಹೊದಿಕೆಯ ಬಟ್ಟೆಗಳು ರೇಷ್ಮೆಯಿಂದಲೂ ಮಾಡಲ್ಪಡುತ್ತವೆ. ಹೊದಿಕೆಯು ಗೂಡಿನಮೇಲೆ ಹರಡಿ ಸಲಾಕಿಯ ಕೊನೆಗಳಲಿ ದಾರಗಳಿಂದ ಕಟ್ಟಲ್ಪಟ್ಟಿರುತ್ತದೆ.

# ೩೨. ಸೀತಾವಿವಾಹಃ

ಅಸ್ತಿ ಜನಕೋ ನಾಮ ವಿದೇಹಾನಾಂ[1] ರಾಜಾ । ತಸ್ಯ ವಶೇ ಮಹಾಧನುರೇಕಮವರ್ತತ । ಏತಸ್ಯ ಧನುಷು ಆರೋಪಯಿತಾ ಮಮ ದುಹಿತುಃ ಪತಿರ್ಭವಿಷ್ಯತೀತಿ ಸ ಭೂಪತಿಃ ಪ್ರತಿಜ್ಞಾಮಕರೋತ್ । ಧನುಷ ಆರೋಪಣೇಽನೇಕೇ ರಾಜಾನಃ ಪ್ರಾಯತನ್ತ । ಪರಂ ತಸ್ಯ ತೋಲನೇಽಪಿ ತೇ ನ ಪ್ರಾಭವನ್ ॥

ಏವಂ ಸ್ಥಿತೇ ವಿಶ್ವಾಮಿತ್ರೋ ರಾಮಲಕ್ಷ್ಮಣಾಭ್ಯಾಂ ಸಹ ಜನಕಸ್ಯ ರಾಜಧಾನೀಂ ಮಿಥಿಲಾಮಗಚ್ಛತ್ । ತತಸ್ತದ್ಧನುಷೋ ವೃತ್ತಾನ್ತಂ ತಸ್ಮಾದ್ಭೂಪತೇಃ[2] ಶ್ರುತ್ವಾ ರಾಮಾಯ ಧನುರ್ದರ್ಶಯೇತ್ಯಬ್ರವೀತ್ । ಮುನೇರ್ವಚನಂ ಪ್ರತಿಪೂಜ್ಯ ರಾಜಾ ತ್ವರಿತಮೇವ ಆನೀಯತಾಂ ಧನುರಿತಿ[3] ಸೇವಕಾನಾಜ್ಞಾಪಯತ್ । ತಥಾನುಷ್ಠಿತೇ, ರಾಮಸ್ತದ್ಧನುಃಶ್ರೇಷ್ಠಂ ದೃಷ್ಟ್ವಾ ಲೀಲಯಾ ಮಧ್ಯೇ ಗೃಹೀತ್ವಾ ಸಮತೋಲಯತ್ । ಸರ್ವೇಷು ಚ ಪಶ್ಯತ್ಸು[4] ಧನುರಾರೋಪಯಿತ್ವಾ ಮೌರ್ವೀಮಪೂರಯತ್ । ತಾವನ್ಮಾತ್ರೇಣ ಧನುರ್ಮಹಾನ್ತಂ ಶಬ್ದಂ ಜನಯನ್ ಭಜ್ಯತೇ ಸ್ಮ ॥

ತತಃ ಪ್ರತಿಜ್ಞಾನುಸಾರೇಣ ಜನಕೋ ರಾಮಾಯ ವಿವಾಹವಿಧಿನಾ ಸೀತಾಮಯಚ್ಛತ್ । ತಸ್ಮಿನ್ನೇವ ಕಾಲೇ ಸೀತಾಯಾಃ ಕನೀಯಸೀಂ ಸ್ವಸಾರಮೂರ್ಮಿಳಾಂ ಲಕ್ಷ್ಮಣಃ, ಜನಕಸ್ಯ ಕನೀಯಸೋ ಭ್ರಾತುಃ ಸುತೇ ಮಾಣ್ಡವೀಶ್ರುತ-ಕೀರ್ತಿಶ್ಚೇತಿ ಖ್ಯಾತೇ ಭರತಶತ್ರುಘ್ನೌ ಚ ಪತ್ನ್ಯರ್ಥಂ ಸ್ವೀಕೃತವನ್ತಃ । ಏವಂ ತೇ ಚತ್ವಾರೋಽಪಿ ರಾಜಪುತ್ರಾಶ್ಚತಸೃಣಾಂ ತಾಸಾಂ ರಾಜಪುತ್ರೀಣಾಂ[5] ಪಾಣೀನೇಕೇ-ನಾಹ್ನಾ ಅಗೃಹ್ಣನ್ ॥

## ೩೨. ಸೀತೆಯ ಮದುವೆ

ಜನಕನೆಂಬ ವಿದೇಹದೇಶದ ರಾಜನುಂಟು. ಅವನ ವಶದಲ್ಲಿ ದೊಡ್ಡ ಧನುಸ್ಸಿತ್ತು. ಈ ಬಿಲ್ಲನ್ನು (ಹುರಿಕಟ್ಟಿ) ಏರಿಸಿದವನು ನನ್ನ ಮಗಳಿಗೆ ಗಂಡನಾಗುವನು ಎಂದು ಆ ರಾಜನು ಪ್ರತಿಜ್ಞೆಯನ್ನು ಮಾಡಿದನು. ಧನುಸ್ಸಿನ ಏರಿಸುವಿಕೆಯಲ್ಲಿ

1. ದೇಶಗಳ ಹೆಸರುಗಳು ನಾಮಾನ್ಯವಾಗಿ ಬಹುವಚನದಲ್ಲಿರುವವು. ಆದರೆ ದೇಶವಾಚಕವಾದ ಶಬ್ದವು ಇವುಗಳ ಕೊನೆಯಲ್ಲಿ ಸೇರಿದ್ದರೆ ಏಕವಚನದಲ್ಲಿರುತ್ತವೆ. ಉದಾಹರಣೆ ಅಙ್ಗಾಃ - ಅಂಗದೇಶ, ಕಲಿಙ್ಗಾಃ- ಕಲಿಂಗದೇಶ; ಮಗಧದೇಶಃ - ಮಗಧದೇಶ.

2. ಪಞ್ಚಮೀ. 3. ಧನುಃ ತ್ವರಿತಮೇವ ಆನೀಯತಾಮ್ (ಅ).

4. 'ಸತಿ' ಸಪ್ತಮೀ. 5. ಏಕೇನ ಅಹ್ನಾ ಚತಸೃಣಾಂ ತಾಸಾಂ ರಾಜಪುತ್ರೀಣಾಂ ಪಾಣೀನ್ ಅಗೃಹ್ಣನ್ (ಅ).

(ಧನುಸ್ಸನ್ನು ಏರಿಸುವದಕ್ಕೆ) ಅನೇಕ ರಾಜರು ಪ್ರಯತ್ನಿಸಿದರು. ಆದರೆ ಅದರ ಎತ್ತುವಿಕೆಯಲ್ಲಿ ಕೂಡ (ಅದನ್ನು ಹಿಡಿದು ಎತ್ತುವದಕ್ಕೆ ಕೂಡ) ಅವರು ಶಕ್ತರಾಗಲಿಲ್ಲ.

ಹೀಗೆ ಇರುವಲ್ಲಿ ವಿಶ್ವಾಮಿತ್ರನು ರಾಮಲಕ್ಷ್ಮಣರೊಡನೆ ಜನಕನ ರಾಜಧಾನಿಯಾದ ಮಿಥಿಲೆಯನ್ನು (ಮಿಥಿಲೆಗೆ) ಹೋದನು. ಆಮೇಲೆ ಧನುಸ್ಸಿನ ವೃತ್ತಾಂತವನ್ನು ಆ ರಾಜನಿಂದ ಕೇಳಿ 'ರಾಮನಿಗೆ ಬಿಲ್ಲನ್ನು ತೋರಿಸು' ಎಂದನು. ಮುನಿಯ ಮಾತನ್ನು ಗೌರವಿಸಿ ರಾಜನು ಬೇಗನೆ ಬಿಲ್ಲು ತರಲ್ಪಡಲಿ (ಬಿಲ್ಲನ್ನು ತನ್ನಿರಿ) ಎಂದು ಸೇವಕರನ್ನು ಆಜ್ಞಾಪಿಸಿದನು. ಹಾಗೆ ಮಾಡಲ್ಪಡಲಾಗಿ, (ಅವರು ಹಾಗೆ ಮಾಡಲು) ರಾಮನು ಶ್ರೇಷ್ಠವಾದ ಆ ಧನುಸ್ಸನ್ನು ನೋಡಿ ಸುಲಭವಾಗಿ ಮಧ್ಯದಲ್ಲಿ ಹಿಡಿದುಕೊಂಡು ಎತ್ತಿದನು. ಎಲ್ಲರೂ ನೋಡುತ್ತಿರಲು ಬಿಲ್ಲನ್ನು ಹುರಿಯೇರಿಸಿ ಹೆದೆಯನ್ನು (ಬಾಣದಿಂದ) ಸಜ್ಜುಗೊಳಿಸಿದನು. ಅಷ್ಟುಮಾತ್ರದಿಂದ ಬಿಲ್ಲು ದೊಡ್ಡ ಶಬ್ದವನ್ನು ಮಾಡುತ್ತಾ ಮುರಿದುಹೋಯಿತು.

ಆಮೇಲೆ ಪ್ರತಿಜ್ಞೆಗೆ ಅನುಸಾರವಾಗಿ ಜನಕನು ರಾಮನಿಗೆ ವಿವಾಹ ವಿಧಿಯಿಂದ ಸೀತೆಯನ್ನು ಕೊಟ್ಟನು. ಅದೇ ಕಾಲದಲ್ಲಿ ಸೀತೆಯ ತಂಗಿಯಾದ ಊರ್ಮಿಳೆಯನ್ನು ಲಕ್ಷ್ಮಣನೂ ಮಾಂಡವಿ ಶ್ರುತಕೀರ್ತಿ ಎಂದು ಪ್ರಸಿದ್ಧರಾದ ಜನಕನ ತಮ್ಮನ ಹೆಣ್ಣುಮಕ್ಕಳನ್ನು ಭರತಶತ್ರುಘ್ನರೂ ಪತ್ನಿಯರನ್ನಾಗಿ ಸ್ವೀಕರಿಸಿದರು. ಹೀಗೆ ಅವರು ನಾಲ್ಕು ಜನ ರಾಜಪುತ್ರರೂ ನಾಲ್ಕುಜನ ರಾಜಪುತ್ರಿಯರ ಕೈಗಳನ್ನು ಒಂದೇ ದಿನದಲ್ಲಿ ಹಿಡಿದರು.

## ೩೩. ಪಾಠಶಾಲಾವಿವರಣಮ್

ಅಸ್ಯಾಂ ವಿದ್ಯಾಶಾಲಾಯಾಂ ಚತುರ್ದಶ ಕಕ್ಷ್ಯಾ ವಿದ್ಯನ್ತೇ । ತತ್ರಾದಿತಶ್ಚತಸೃಷು ಕಕ್ಷ್ಯಾಸು ಚತುಃಷಷ್ಟಿಶ್ಛಾತ್ರಾಃ ಸನ್ತಿ । ತತಃ ಪರಂ ಪಞ್ಚಸು ಅಷ್ಟಾಸಪ್ತತಿರಿದಾನೀಂ ಪಠನ್ತಿ । ಅಥೋತ್ತರಾಸು ಪಞ್ಚಸು ಕಕ್ಷ್ಯಾಸು ದ್ವಿಪಞ್ಚಾಶದಧ್ಯಯನಂ ಕುರ್ವನ್ತಿ । ಸಙ್ಕಲನೇನ ಚತುರ್ನವತ್ಯಧಿಕಂ ಶತಂ ಛಾತ್ರಾಃ ಸಂಪದ್ಯನ್ತೇ । ಏತೈಃ ಸರ್ವೈರಪಿ ಮಾಸಿಕೀ ಶಿಕ್ಷಣಭೃತಿರ್ನ ದೀಯತೇ । ಕತಿಪಯೇ ಧನಿನಾಂ ಪುತ್ರಾಃ ಸಂಪೂರ್ಣಾಂ ಭೃತಿಂ ಸಮರ್ಪಯನ್ತಿ । ಚತ್ವಾರಿಂಶತೋಽಧಿಕಾ ವಿದ್ಯಾರ್ಥಿನಃ ಸ್ವಲ್ಪಾಯವತಾಂ ಸುತಾಃ । ಶಿಷ್ಟೇಷು ಕೇಚಿತ್ ಕೇವಲಮರ್ಧಭೃತಿಂ ಯಚ್ಛನ್ತಿ । ತೇ ತ್ವಾಸನ್ನಚತ್ವಾರಿಂಶಾಃ ಸನ್ತೀತಿ ಸಂಭಾವ್ಯತೇ । ಏಕೋನಸಪ್ತತಿರ್ಬಾಲಾಃ ಪುನರತಿದರಿದ್ರಾಣಾಮಪತ್ಯಾನಿ । ಅತಸ್ತೇಭ್ಯೋ ವಿದ್ಯಾರ್ಥಿವೃತ್ತಿರಪಿ ದೀಯತೇ ॥

ಛಾತ್ರೇಭ್ಯಃ ಪ್ರತ್ಯೇಕಂ ರೂಪ್ಯಕತ್ರಯಂ ವೃತ್ತಿಃ । ಶಾಲಾಯಾಂ ಪ್ರಧಾನಾಧ್ಯಾಪಕಸ್ಯ ಪಞ್ಚಾಶದಧಿಕಂ ದ್ವಿಶತಂ ರೂಪ್ಯಕಾಃ ಮಾಸಿಕಂ ವೇತನಮ್ । ಸಹಾಯಾಧ್ಯಾಪಕಾನಾಂ ಸರ್ವೇಷಾಮಾಹತ್ಯ ಪಞ್ಚಾಶದುತ್ತರಂ ತ್ರಿಶತಂ ರೂಪ್ಯಕಾಃ । ಏವಂ ಸರ್ವಸಙ್ಕಲನೇನ ಅಷ್ಟಾಶತಾದಧಿಕಮೇವ ಮಾಸಿಕೋ ವ್ಯಯಃ ಸಂಜಾಯತೇ॥

## ೩೩. ಪಾಠಶಾಲೆಯ ವಿವರ

ಈ ಪಾಠಶಾಲೆಯಲ್ಲಿ ಹದಿನಾಲ್ಕು ತರಗತಿಗಳು ಇವೆ. ಅವುಗಳಲ್ಲಿ ಮೊದಲಿನಿಂದ ನಾಲ್ಕು ತರಗತಿಗಳಲ್ಲಿ ಅರವತ್ತುನಾಲ್ಕು ವಿದ್ಯಾರ್ಥಿಗಳು ಇದ್ದಾರೆ. ಅಲ್ಲಿಂದಾಚೆಗೆ ಐದರಲ್ಲಿ ಎಪ್ಪತ್ತೆಂಟು ಜನ ಈಗ ಓದುತ್ತಾರೆ. ಇನ್ನು ಮುಂದಿನ ಐದುತರಗತಿ ಗಳಲ್ಲಿ ಐವತ್ತೆರಡುಜನ ಅಧ್ಯಯನವನ್ನು ಮಾಡುತ್ತಾರೆ (ಓದುತ್ತಾರೆ). ಸೇರಿಸಿದರೆ ನೂರ ತೊಂಬತ್ತುನಾಲ್ಕು ವಿದ್ಯಾರ್ಥಿಗಳು ಆಗುತ್ತಾರೆ. ಇವರೆಲ್ಲರಿಂದಲೂ ತಿಂಗಳ ಫೀಜು ಕೊಡಲ್ಪಡುವದಿಲ್ಲ. ಕೆಲವರು ಹಣವಂತರ ಮಕ್ಕಳು ಪೂರ ಫೀಜನ್ನು ಕೊಡುತ್ತಾರೆ. ನಲವತ್ತಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಮಿತವಾದ ಆದಾಯವುಳ್ಳವರ ಮಕ್ಕಳು. ಉಳಿದವರಲ್ಲಿ ಕೆಲವರು ಅರ್ಧಫೀಜನ್ನು ಕೊಡುತ್ತಾರೆ. ಅವರಾದರೆ ಸುಮಾರು ನಲವತ್ತು ಜನರಿರಬಹುದೆಂದು ಊಹಿಸಲ್ಪಡುತ್ತದೆ. ಅರವತ್ತೊಂಭತ್ತು ಜನ ಹುಡುಗರಾದರೂ ಬಹಳ ದರಿದ್ರರ ಮಕ್ಕಳು. ಆದ್ದರಿಂದ ಅವರಿಗೆ ವಿದ್ಯಾರ್ಥಿವೃತ್ತಿಯೂ (ಸ್ಕಾಲರ್‌ಷಿಪ್ಪು ಕೂಡ) ಕೊಡಲ್ಪಡುತ್ತದೆ.

ವಿದ್ಯಾರ್ಥಿಗಳಿಗೆ ಒಬ್ಬೊಬ್ಬರಿಗೂ ಮೂರು ಮೂರು ರೂಪಾಯಿಗಳು ವೃತ್ತಿ. ಪಾಠಶಾಲೆಯಲ್ಲಿ ಮುಖ್ಯೋಪಾಧ್ಯಾಯರಿಗೆ (ಹೆಡ್‌ಮಾಸ್ಟರಿಗೆ) ಇನ್ನೂರ ಐವತ್ತು ರೂಪಾಯಿಗಳು ತಿಂಗಳ ಸಂಬಳ. ಸಹಾಯೋಪಾಧ್ಯಾಯರಿಗೆಲ್ಲ ಒಟ್ಟು ಮುನ್ನೂರೈವತ್ತು ರೂಪಾಯಿಗಳು. ಹೀಗೆ ಎಲ್ಲಾ ಸೇರುವದರಿಂದ (ಸೇರಿದರೆ) ಎಂಟು ನೂರಕ್ಕಿಂತ ಹೆಚ್ಚಾಗಿಯೇ ತಿಂಗಳ ಖರ್ಚು ಆಗುತ್ತದೆ.

## ೩೪. ಮಹಿಶೂರದೇಶಃ

ಮಹಿಶೂರದೇಶಃ ಕರ್ಣಾಟಕೇಷು ಪ್ರಧಾನಃ ಪ್ರಾನ್ತಃ । ಅತ್ರ ಚನ್ದ್ರದ್ರೋಣಾದಯಃ ಪರ್ವತಾ ವಿರಾಜನ್ತೇ । ಕಾವೇರೀತುಂಗಭದ್ರಾದಯೋ ನದ್ಯಃ ಪ್ರವಹನ್ತಿ ।

ಚನ್ದನಾದಿಭಿರ್ವೃಕ್ಷೈರುಪಶೋಭಿತಾನಿ ವನಾನಿ, ಸುವರ್ಣಾಯಃಪ್ರಮುಖೈರ್ಲೋಹೈಃ ಸಮೃದ್ಧಾ ಆಕರಾಶ್ಚ ತತ್ರ ತತ್ರ ವಿದ್ಯನ್ತೇ ॥

ಶ್ರೀಮಾನ್ ಕೃಷ್ಣಭೂಪತಿರಿಹ ರಾಜ್ಯಂ ಪರಿಪಾಲಯತಿ । ಪ್ರಜಾನಾಂ ಸ್ವಾಸ್ಥ್ಯಾಯ ಚಿಕಿತ್ಸಾಲಯಾಃ ಬುದ್ಧಿವಿಕಾಸಾಯ ವಿದ್ಯಾಶಾಲಾ ವಾಚನಾಲಯಾಃ ಸರಸ್ವತೀಮನ್ದಿರಾಣಿ ಚ ಸ್ಥಾಪಿತಾನಿ ಸನ್ತಿ । ಪ್ರಯಾಣಸ್ಯ ವಾಣಿಜ್ಯಸ್ಯ ಚ ಸೌಕರ್ಯಾಯ ಮಹಾಪಥಾ ನಿರ್ಮಿತಾ ವರ್ತನ್ತೇ, ಬಾಷ್ಪಶಕಟೀಮಾರ್ಗಾಶ್ಚ ಪ್ರತಿಷ್ಠಾಪಿತಾಃ ಸನ್ತಿ । ದೂರೇ ಸ್ಥಿತಾನಾಂ ಪರಸ್ಪರಂ ವೃತ್ತಾನ್ತಸ್ಯ ವಿಜ್ಞಾಪನಾಯ ಲೇಖ್ಯಾಲಯಾಸ್ತನ್ತ್ರೀ-ವಾರ್ತಾಲಯಾಶ್ಚ ಕಲ್ಪಿತಾಃ ಸನ್ತಿ । ಗ್ರಾಮೇಷು ಪತ್ತನೇಷು ನಗರೇಷು ಚ ಪ್ರಜಾನಾಂ ಕ್ಷೇಮಾರ್ಥಂ ರಕ್ಷಣಾಲಯಾಃ ಸ್ಥಾಪಿತಾಃ ಸನ್ತಿ । ವ್ಯವಹಾರಾಣಾಂ ನಿರ್ಣಯಾಯ ನ್ಯಾಯಸ್ಥಾನಾನಿ ತತ್ರ ತತ್ರ ವಿಹಿತಾನಿ ಶೋಭನ್ತೇ । ದೇಶೇ ಸರ್ವೇ ಜನಾಃ ಸುಖೇನ ಜೀವನ್ತಿ ॥

## ೩೪. ಮೈಸೂರುದೇಶ [1]

ಮೈಸೂರುದೇಶವು ಕರ್ಣಾಟಕದಲ್ಲಿ ಮುಖ್ಯವಾದ ಭಾಗವು. ಇಲ್ಲಿ ಚಂದ್ರದ್ರೋಣ (ಬಾಬಾಬುಡನ್‌ಗಿರಿ) ಮುಂತಾದ ಪರ್ವತಗಳು ಹೊಳೆಯುತ್ತಿವೆ. ಕಾವೇರಿ, ತುಂಗಭದ್ರೆ- ಮುಂತಾದ ನದಿಗಳು ಹರಿಯುತ್ತಿವೆ. ಶ್ರೀಗಂಧ ಮುಂತಾದ ಮರಗಳಿಂದ ಶೋಭಿಸಲ್ಪಟ್ಟ ಕಾಡುಗಳೂ ಚಿನ್ನ, ಕಬ್ಬಿಣ- ಮುಂತಾದವುಗಳಿಂದ ತುಂಬಿರುವ ಖನಿಗಳು ಅಲ್ಲಲ್ಲಿ ಇರುತ್ತವೆ.

ಶ್ರೀಮಾನ್ ಕೃಷ್ಣಭೂಪತಿಯು ಇಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದಾನೆ. ಪ್ರಜೆಗಳ ಆರೋಗ್ಯಕ್ಕಾಗಿ ಆಸ್ಪತ್ರೆಗಳು, ಬುದ್ಧಿಯು ಅರಳುವದಕ್ಕಾಗಿ ಪಾಠಶಾಲೆಗಳು, ವಾಚನಾಲಯಗಳು, ಸರಸ್ವತೀಭಂಡಾರಗಳು ಕೂಡ ಸ್ಥಾಪಿತವಾಗಿವೆ. ಪ್ರಯಾಣಕ್ಕೂ ವ್ಯಾಪಾರಕ್ಕೂ ಅನುಕೂಲವಾಗಿರುವದಕ್ಕಾಗಿ ದೊಡ್ಡ ಮಾರ್ಗಗಳು ನಿರ್ಮಿಸಲ್ಪಟ್ಟಿವೆ ; ರೈಲುದಾರಿಗಳು ಹಾಕಲ್ಪಟ್ಟಿವೆ. ದೂರದಲ್ಲಿರುವವರಿಗೆ ಒಬ್ಬರಿಗೊಬ್ಬರಿಗೆ ವೃತ್ತಾಂತವನ್ನು ತಿಳಿಸುವದಕ್ಕಾಗಿ ಅಂಚೆಮನೆಗಳೂ ತಂತಿಸುದ್ದಿಯ ಆಫೀಸುಗಳೂ ಕಲ್ಪಿಸಲ್ಪಟ್ಟಿವೆ. ಹಳ್ಳಿಗಳಲ್ಲಿಯೂ ಪಟ್ಟಣಗಳಲ್ಲಿಯೂ ನಗರಗಳಲ್ಲಿಯೂ ಕ್ಷೇಮಕ್ಕಾಗಿ ಪೋಲೀಸು · ಠಾಣೆಗಳು ಇಡಲ್ಪಟ್ಟಿವೆ. ವ್ಯವಹಾರಗಳನ್ನು ನಿರ್ಣಯಿಸುವದಕ್ಕಾಗಿ (ವ್ಯಾಜ್ಯಗಳನ್ನು ಫೈಸಲುಮಾಡುವದಕ್ಕಾಗಿ) ಕೋರ್ಟುಗಳು ಅಲ್ಲಲ್ಲಿ ಮಾಡಲ್ಪಟ್ಟು ಒಪ್ಪುತ್ತಿವೆ. ದೇಶದಲ್ಲಿ ಎಲ್ಲ ಜನರೂ ಸುಖದಿಂದ ಜೀವಿಸುತ್ತಾರೆ.

1. 1934ನೆಯ ಇಸವಿಯಲ್ಲಿದ್ದಂತೆ ರಚಿಸಿದ್ದ ಪಾಠವನ್ನು ಹಾಗೆಯೇ ಉಳಿಸಿಕೊಂಡಿದೆ.

# ೩೫. ರಾವಣವಧಃ

ಅತಿಪ್ರಾಚೀನೇ ಕಾಲೇ ದಕ್ಷಿಣಾಪಥೇ ಜನಸ್ಥಾನಂ ನಾಮ ಮಹಾವನಮಾಸೀತ್ । ತದಾನೀಂ ತಸ್ಮಿನ್ ಕಾನ್ತಾರೇ ತತ್ರ ತತ್ರ ಕತಿಪಯೇ ಋಷೀಣಾಮಾಶ್ರಮಾ ಆಸನ್ । ಸರ್ವತ್ರ ಚ ಪ್ರಭೂತಾ ರಾಕ್ಷಸಾಃ ಸಮಚರನ್ । ತೇಷಾಂ ಸರ್ವೇಷಾಮಪಿ ರಾಜಾ ರಾವಣೋ ಲಙ್ಕಾಯಾಂ ರಾಜ್ಯಮಕರೋತ್ ॥

ಶ್ರೀರಾಮಃ ಕದಾಚಿತ್ ಪಿತುರಾದೇಶಾದಯೋಧ್ಯಾಂ ತ್ಯಕ್ತ್ವಾ ವನವಾಸಾಯ ಪ್ರಸ್ಥಿತಃ । ಸ ಚ ಭಾರ್ಯಯಾ ಸೀತಯಾ ಅನುಜೇನ ಲಕ್ಷ್ಮಣೇನ ಚ ಸಹಿತೋ ಜನಸ್ಥಾನಮಗಚ್ಛತ್ । ತತ್ರ ಪರ್ಣಶಾಲಾಂ ಕೃತ್ವಾ ಕಂಚಿತ್ಕಾಲಂ ನ್ಯವಸಚ್ಚ । ಮಹಾಮಾಯಾವೀ ರಾವಣಃ ಸೀತಾಯಾಃ ಸೌನ್ದರ್ಯಂ ಶ್ರುತ್ವಾ ತಾಂ ದ್ರಷ್ಟುಂ ಸಂನ್ಯಾಸಿವೇಷೇಣ ತತ್ರ ಸಮಾಯಾತಃ । ತದಾನೀಂ ರಾಮೋ ಲಕ್ಷ್ಮಣೋ ವಾ[1] ಪರ್ಣಶಾಲಾಯಾಂ ನ ಸ್ಥಿತಃ । ದುಷ್ಟೋ ರಾವಣಸ್ತಾಮೇಕಾಕಿನೀಂ ದೃಷ್ಟ್ವಾ ಪರ್ಣಶಾಲಾಯಾ ಬಲಾದಾಕೃಷ್ಯ ಲಙ್ಕಾಂ ಪ್ರಾಪಯತ್ ॥

ಪ್ರತ್ಯಾಗತೌ ರಾಮಲಕ್ಷ್ಮಣೌ ಸೀತಾಮದೃಷ್ಟ್ವಾ ಅತಿದುಃಖಿತಾವಭವತಾಮ್। ಅಥ ತತ್ರ ತತ್ರ ತಾಮನ್ವೇಷ್ಟುಮಾರಭೇತಾಮ್ । ವಾನರಾಣಾಮಧಿಪತಿನಾ ಸುಗ್ರೀವೇಣ ಸೀತಾನ್ವೇಷಣೇ ರಾಮಸ್ಯ ಬಹು ಸಾಹಾಯ್ಯಂ ಕೃತಮ್ । ತತೋ ರಾಮೋ ವಾನರೈಃ ಸಹ ಲಙ್ಕಾಂ ಗತ್ವಾ ಲೋಕಕಣ್ಟಕಂ ರಾವಣಂ ಯುದ್ಧೇ ಹತ್ವಾ ಸೀತಯಾ ಸಾರ್ಧಂ ಅಯೋಧ್ಯಾಂ ಪ್ರಾಪ್ನೋತ್ । ತತ್ರ ಚ ರಾಜ್ಯೇ ಅಭಿಷಿಕ್ತೋ ಧರ್ಮೇಣ ರಾಜ್ಯಂ ಬಹುಕಾಲಂ ಪರ್ಯಪಾಲಯತ್ ॥

ರಾಮೋ ರಾಜಮಣಿಃ ಸದಾ ವಿಜಯತೇ ರಾಮಂ ರಮೇಶಂ ಭಜೇ ।
ರಾಮೇಣಾಭಿಹತಾ ನಿಶಾಚರಚಮೂ ರಾಮಾಯ ತಸ್ಮೈ ನಮಃ ॥
ರಾಮಾನ್ನಾಸ್ತಿ ಪರಾಯಣಂ ಪರತರಂ ರಾಮಸ್ಯ ದಾಸೋಽಸ್ಮ್ಯಹಮ್ ।
ರಾಮೇ ಚಿತ್ತಲಯಃ ಸದಾ ಭವತು ಮೇ ಭೋ ರಾಮ ಮಾಮುದ್ಧರ ॥

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಮ್ ।
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

[1] ರಾಮೋ ವಾ ಲಕ್ಷ್ಮಣೋ ವಾ- ಎಂದೂ ಹೇಳಬಹುದು.

## ೩೫. ರಾವಣನ ವಧೆ

ಬಲು ಹಿಂದಿನ ಕಾಲದಲ್ಲಿ ದಕ್ಷಿಣದೇಶದಲ್ಲಿ ಜನಸ್ಥಾನವೆಂಬ ದೊಡ್ಡ ಕಾಡು ಇತ್ತು. ಆಗ ಆ ಕಾಡಿನಲ್ಲಿ ಅಲ್ಲಲ್ಲಿ ಕೆಲವು ಋಷಿಗಳ ಆಶ್ರಮಗಳು ಇದ್ದವು. ಎಲ್ಲೆಲ್ಲಿಯೂ ಬಹಳ ರಾಕ್ಷಸರು ಓಡಾಡುತ್ತಿದ್ದರು. ಅವರೆಲ್ಲರಿಗೂ ರಾಜನಾದ ರಾವಣನು ಲಂಕೆಯಲ್ಲಿ ರಾಜ್ಯವನ್ನು ಮಾಡುತ್ತಿದ್ದನು (ಆಳುತ್ತಿದ್ದನು).

ಶ್ರೀರಾಮನು ಒಂದಾನೊಂದು ಕಾಲದಲ್ಲಿ ತಂದೆಯ ಅಪ್ಪಣೆಯ ದೆಸೆಯಿಂದ (ಅಪ್ಪಣೆಯಂತೆ) ಅಯೋಧ್ಯೆಯನ್ನು ಬಿಟ್ಟು ಅರಣ್ಯವಾಸಕ್ಕೆ ಹೊರಟನು. ಆತನು ಹೆಂಡತಿ ಸೀತೆಯೊಡನೆಯೂ ತಮ್ಮ ಲಕ್ಷ್ಮಣನೊಡನೆಯೂ ಕೂಡಿ ಜನಸ್ಥಾನಕ್ಕೆ ಹೋದನು. ಅಲ್ಲಿ ಎಲೆಯ ಮನೆಯನ್ನು ಮಾಡಿಕೊಂಡು ಕೆಲವುಕಾಲ ವಾಸಮಾಡಿಕೊಂಡೂ ಇದ್ದನು. ದೊಡ್ಡ ಮಾಯಾವಿಯಾದ ರಾವಣನು ಸೀತೆಯ ಸೌಂದರ್ಯವನ್ನು ಕೇಳಿ ಆಕೆಯನ್ನು ನೋಡುವದಕ್ಕೆ ಸಂನ್ಯಾಸಿಯ ವೇಷದಿಂದ ಅಲ್ಲಿಗೆ ಬಂದನು. ಆಗ ರಾಮನಾಗಲಿ ಲಕ್ಷ್ಮಣನಾಗಲಿ ಎಲೆಮನೆಯಲ್ಲಿರಲಿಲ್ಲ. ಕೆಟ್ಟವನಾದ ರಾವಣನು ಆ ಒಂಟಿಗಳನ್ನು ಕಂಡು (ಅವಳು ಒಬ್ಬಳೇ ಇದ್ದದ್ದನ್ನು ಕಂಡು) ಎಲೆಮನೆಯಿಂದ ಬಲವಾಗಿ ಎಳೆದುಕೊಂಡು ಲಂಕೆಯನ್ನು ಸೇರಿಸಿದನು.

ಹಿಂತಿರುಗಿ ಬಂದ ರಾಮಲಕ್ಷ್ಮಣರು ಸೀತೆಯನ್ನು ಕಾಣದೆ ಬಲು ದುಃಖಿತರಾದರು. ಆಮೇಲೆ ಅಲ್ಲಲ್ಲಿ ಆಕೆಯನ್ನು ಹುಡುಕಲು ಮೊದಲು ಮಾಡಿದರು. ವಾನರರ ಒಡೆಯನಾದ ಸುಗ್ರೀವನಿಂದ ಸೀತೆಯ ಹುಡುಕುವಿಕೆಯಲ್ಲಿ ರಾಮನಿಗೆ ಬಹಳ ಸಹಾಯವು ಮಾಡಲ್ಪಟ್ಟಿತು. ಆಮೇಲೆ ರಾಮನು ವಾನರರೊಡನೆ ಲಂಕೆಯನ್ನು ತಲುಪಿ ಲೋಕಕ್ಕೆ ಮುಳ್ಳಾಗಿದ್ದ ರಾವಣನನ್ನು ಕಾಳಗದಲ್ಲಿ ಕೊಂದು ಸೀತೆಯೊಡನೆ ಅಯೋಧ್ಯೆಯನ್ನು ಸೇರಿದನು. ಮತ್ತು ಅಲ್ಲಿ ರಾಜ್ಯದಲ್ಲಿ ಅಭಿಷಿಕ್ತನಾಗಿ ಧರ್ಮದಿಂದ ರಾಜ್ಯವನ್ನು ಬಹು ಕಾಲದವರೆಗೆ ಕಾಪಾಡುತ್ತಿದ್ದನು.

ರಾಜಶ್ರೇಷ್ಠನಾದ ರಾಮನು ಯಾವಾಗಲೂ ಒಪ್ಪುತ್ತಿರುವನು. ಲಕ್ಷ್ಮಿಯ ಒಡೆಯನಾದ ರಾಮನನ್ನು ಭಜಿಸುತ್ತೇನೆ. ರಾಮನಿಂದ ಕತ್ತಲೆಯಲ್ಲಿ ಅಡ್ಡಾಡುವ (ರಾಕ್ಷಸರ) ಪಡೆಯು ಕೊಲ್ಲಲ್ಪಟ್ಟಿತು. ಆ ರಾಮನಿಗೆ ನಮಸ್ಕಾರವು. ರಾಮನಿಗಿಂತಲೂ ಹೆಚ್ಚಿನ ಗತಿಯು ಇಲ್ಲ. ನಾನು ರಾಮನ ಆಳು. ನನಗೆ ರಾಮನಲ್ಲಿ ಯಾವಾಗಲೂ ಚಿತ್ತದ ಅಡಗುವಿಕೆಯಾಗಲಿ (ಯಾವಾಗಲೂ ನನ್ನ ಮನಸ್ಸು ರಾಮನಲ್ಲಿಯೇ ನಿಂತಿರಲಿ). ಎಲೈ ರಾಮನೆ, ನನ್ನನ್ನು ಕಾಪಾಡು.

[1] ಪ್ರಜೆಗಳಿಗೆ ಸ್ವಸ್ತಿ, ನೆಲದೊಡೆಯರು ನ್ಯಾಯವಾದ ದಾರಿಯಿಂದ ಭೂಮಿ

1. ಈ ಪಾಠದ ಕೊನೆಯ ಎರಡು ಶ್ಲೋಕಗಳಿಗೂ ಅರ್ಥಕ್ಕನುಗುಣವಾಗಿ ಅನ್ವಯವನ್ನು ವಿದ್ಯಾರ್ಥಿಗಳೇ ಊಹಿಸಿಕೊಳ್ಳಬೇಕು.

ಯನ್ನು ಕಾಪಾಡಲಿ. ಗೋಬ್ರಾಹ್ಮಣರಿಗೆ ಯಾವಾಗಲೂ ಶುಭವಾಗಲಿ. ಎಲ್ಲಾ ಜನರೂ ಸುಖಿಗಳಾಗಿರಲಿ.

# ಅಭ್ಯಾಸಗಳು

[ಈ ಅಭ್ಯಾಸಗಳಲ್ಲಿ ಕೊಟ್ಟಿರುವ ವಾಕ್ಯಗಳನ್ನು ಸಂಸ್ಕೃತಕ್ಕೆ ತಿರುಗಿಸಿರಿ. ವಿಶೇಷ್ಯದ ಲಿಂಗವಿಭಕ್ತಿವಚನಗಳೇ ವಿಶೇಷಣಕ್ಕೆ ಇರಬೇಕೆಂಬುದನ್ನು ಲಕ್ಷ್ಯದಲ್ಲಿಡಬೇಕು. ಬೇಕಾದ ಮಾತುಗಳಿಗೆ ಸಂಸ್ಕೃತವನ್ನು ಕನ್ನಡ ಶಬ್ದಕೋಶದಿಂದ ಕಂಡುಕೊಳ್ಳಬೇಕು ; ವಿಭಕ್ತಿಗಳ ರೂಪಗಳನ್ನು ವಿಭಕ್ತಿಮಾಲೆಯಲ್ಲಿ ತೋರಿಸಿರುವ ಉದಾಹರಣೆಗಳಿಂದ ಊಹಿಸಬಹುದು. ಮಾತಿನ ಮುಂದೆ ಕನ್ನಡದ ಅಂಕೆಯಿದ್ದರೆ ಆಯಾ ವಿಭಕ್ತಿಯನ್ನು ಉಪಯೋಗಿಸಬೇಕೆಂದಭಿಪ್ರಾಯ.

೧

ಇವನು ಯಾರು ? ಇವನ ಹೆಸರೇನು ? ಈತನ ತಂದೆ ಯಾರು ? ಈ ಪೂರಿಗೆ (೨) ಯಾವಾಗ ಬಂದನು ? ಇವನಿಗೆ (೧) ಸಂಸ್ಕೃತವು ತಿಳಿಯುತ್ತದೆಯೇನು ? ಕನ್ನಡವನ್ನು ಓದಲೂ ಬರೆಯಲೂ ಬಲ್ಲನೊ ? ಈಗ ಇವನಿಗೆ (೬) ಏನು ಬೇಕು ?

೨

ನಿನ್ನೆ ರಾತ್ರಿಯಲ್ಲಿ ಒಬ್ಬ ಕಳ್ಳನು ಅವರ ಮನಗೆ (೨) ನುಗ್ಗಿದನು. ಮಲಗುವ ಕೋಣೆಗೆ (೨) ಹೋದನು. ಅಲ್ಲಿ ಒಂದು ಪೆಟ್ಟಿಗೆಯಿತ್ತು. ಆ ಪೆಟ್ಟಿಗೆಯಲ್ಲಿ ಎರಡು ರೇಷ್ಮೆಯ ಬಟ್ಟೆಗಳಿದ್ದವು[1] ಖಾನಿಯಲ್ಲಿ ಒಂದು ಚಿನ್ನದ ಉಂಗುರವಿತ್ತು. ಕಳ್ಳನು ಬಟ್ಟೆಗಳೆರಡನ್ನೂ ಆ ಉಂಗುರವನ್ನೂ ತೆಗೆದುಕೊಂಡು ಹಿತ್ತಲು ಬಾಗಿಲಿನಿಂದ ಓಡಿಹೋದನು.

ಹೊಟ್ಟೆಯು ಸುಮ್ಮನೆ ಕೂತುಕೊಂಡಿರುತ್ತದೆ. ನಾವಾದರೋ ಯಾವಾಗಲೂ ಕೆಲಸಮಾಡುತ್ತಿರುತ್ತೇವೆ. ಕೈಗಳು ಆಹಾರವನ್ನು ತೆಗೆದುಕೊಳ್ಳುತ್ತವೆ. ಹಲ್ಲುಗಳು ಅದನ್ನು ಚೆನ್ನಾಗಿ ಅಗಿಯುತ್ತವೆ. ನಾಲಗೆಯು ಅದನ್ನು ತಿರಿಪಿ ಹಾಕುತ್ತದೆ. ಆಗ

1. ಎರಡು ಪದಾರ್ಥಗಳ ಹೆಸರಿಗೆ ದ್ವಿವಚನವನ್ನುಪಯೋಗಿಸಿ.

ಹೊಟ್ಟೆಯು ತುಂಬಿಕೊಳ್ಳುತ್ತದೆ. ಎಲೈ ನಾಲಗೆಯೆ, ಇನ್ನು ಮೇಲೆ ರುಚಿ ನೋಡ ಬೇಡ. ಎಲೈ ಹಲ್ಲುಗಳೆ, ಇನ್ನು ಮೇಲೆ ಅಗಿಯಬೇಡಿರಿ. ಎಲೈ ಕೈಗಳೆ, ಇನ್ನು ಮೇಲೆ ನೀವು ಆಹಾರವನ್ನು ತರಬೇಡಿರಿ. ಈ ಹೊಟ್ಟೆಯು ಏನು ಮಾಡುವದು, ನೋಡೋಣ.

ಪೂರ್ವದಲ್ಲಿ ಧೃತರಾಷ್ಟ್ರ, ಪಾಂಡು - ಎಂಬ ಇಬ್ಬರು ಅಣ್ಣತಮ್ಮಂದಿರಾದ ರಾಜಪುತ್ರರಿದ್ದರು. ಅವರಲ್ಲಿ ಹಿರಿಯನಾದ ಧೃತರಾಷ್ಟ್ರನು ಕುರುಡನು. ಅವನಿಗೆ ಗಾಂಧಾರಿಯಲ್ಲಿ ನೂರೊಂದು ಜನ ಮಕ್ಕಳು ಹುಟ್ಟಿದರು. ಇವರು ಕೌರವರೆಂಬ ಹೆಸರಿನಿಂದ ಪ್ರಸಿದ್ಧರಾದರು. ಅವರಲ್ಲೆಲ್ಲ ಹಿರಿಯವನು ದುರ್ಯೋಧನನು. ಪಾಂಡುವಿಗೆ ಕುಂತಿಯೆಂದೂ ಮಾದ್ರಿಯೆಂದೂ ಇಬ್ಬರು ಹೆಂಡತಿಯರಿದ್ದರು. ಇವರಲ್ಲಿ ಪಾಂಡುವಿಗೆ ಐದು ಜನ ಗಂಡುಮಕ್ಕಳಾದರು. ಇವರೇ ಪಾಂಡವರು. ಯುಧಿಷ್ಠಿರ, ಭೀಮ, ಅರ್ಜುನ- ಇವರು ಮೂವರೂ ಕುಂತಿಯ ಮಕ್ಕಳು ; ನಕುಲಸಹದೇವರು ಕಿರಿಯವಳಾದ ಮಾದ್ರಿಯ ಅವಳಿಮಕ್ಕಳು. ಕೌರವರೂ ಪಾಂಡವರೂ ದ್ರೋಣಾಚಾರ್ಯರಿಂದ ಧನುರ್ವೇದವನ್ನು ಕಲಿತುಕೊಂಡರು.

೫

ನೂರೈವತ್ತು ವರ್ಷಗಳ (೫) ಹಿಂದೆ ಮೈಸೂರುದೇಶದಲ್ಲಿ ಸರ್ಕಾರದ ಸ್ಕೂಲುಗಳು ಇರಲಿಲ್ಲ. ಬಹುಜನರು ಓದುವದಕ್ಕೂ ಬರೆಯುವದಕ್ಕೂ ಬಲ್ಲವರಾಗಿ ರಲಿಲ್ಲ. ಈಗಿನಹಾಗೆ ಉಪಾಧ್ಯಾಯರ ಸೌಕರ್ಯಕ್ಕಾಗಿ ಪಾಠ ಹೇಳಿಕೊಡುವ ಸಾಧನ ಗಳೂ ಇರಲಿಲ್ಲ. ಬ್ರಾಹ್ಮಣರು ಮಾತ್ರ ಸಂಸ್ಕೃತವನ್ನು ಕಲಿಯುತ್ತಿದ್ದರು. ಮಿಕ್ಕವರಲ್ಲಿ ಕೆಲವರು ಕನ್ನಡವನ್ನು ಬಲ್ಲವರಾಗಿದ್ದರು. ಆಗಿನ ಕಾಲದಲ್ಲಿ ಓದುವದಕ್ಕೆ ಫೀಜು ಕೊಡುತ್ತಿರಲಿಲ್ಲ. ಉಪಾಧ್ಯಾಯರಿಗೆ ಈಗಿನ ಹಾಗೆ ರಾಜರಿಂದ ಸಂಬಳವೂ ಕೊಡ ಲ್ಪಡುತ್ತಿರಲಿಲ್ಲ. ವಿದ್ಯಾರ್ಥಿಗಳ ತಂದೆಗಳು ಧಾನ್ಯ ಮುಂತಾದದ್ದನ್ನು ವರ್ಷಕ್ಕೆ (೬) ಎರಡು ಸಲ ಕೊಡುತ್ತಿದ್ದರು. ಬಲು ಬಡವರಾದವರ ಮಕ್ಕಳಾದರೋ ಗುರುಗಳ ಶುಶ್ರೂಷೆಯನ್ನು ಮಾಡುತ್ತಿದ್ದರು.

ಈಗ ಭರತಖಂಡವು ಸ್ವತಂತ್ರವಾಗಿದೆ. ಹಿಮಾಲಯದಿಂದ (೫) ಸೇತುವಿನವರೆಗೂ ಇಲ್ಲಿ ಪ್ರಜಾಪ್ರಭುತ್ವವು ಸ್ಥಾಪಿಸಲ್ಪಟ್ಟಿದೆ. ಎಲ್ಲಾ ಕಡೆಯಲ್ಲಿಯೂ

ರಸ್ತೆಗಳೂ ರೈಲುಮಾರ್ಗಗಳೂ ಇವೆ. ವಿದ್ಯೆಯು ದಿನದಿನಕ್ಕೆ (೭) ಅಭಿವೃದ್ಧಿಯನ್ನು ಹೊಂದುತ್ತಲಿದೆ. ಮಹಮ್ಮದೀಯರು, ಹಿಂದುಗಳು, ಕ್ರಿಶ್ಚಿಯನ್ನರು, ಪಾರ್ಸಿಗಳು- ಇವರೇ ಮುಂತಾದ ಬೇರೆಬೇರೆ ಧರ್ಮದ ಜನರು ಇಲ್ಲಿ ಪ್ರಜೆಗಳಾಗಿದ್ದಾರೆ. ಇವರಿಗೆ ಪರಸ್ಪರವಾಗಿ ಹೆಚ್ಚು ಪ್ರೀತಿಯು ಉಂಟುಮಾಡಲ್ಪಡಬೇಕು. ಈಗ ಇಂಗ್ಲಿಷ್ ಭಾಷೆಯನ್ನು ಕೆಲವರು ಮಾತ್ರ ಕಲಿಯುತ್ತಾರೆ. ಇದರಂತೆಯೇ ಸಂಸ್ಕೃತವನ್ನೂ ಕೆಲವರಾದರೂ ಕಲಿಯಬೇಕು. ಆಗ ದೇಶಕ್ಕೆ ಒಳ್ಳೆಯದಾಗುವದು.

ಎಮ್ಮೆಯು ಬಹಳ ಹಾಲು ಕೊಡುತ್ತದೆ. ಅದರ ಹಾಲು ಬಹಳ ಗಟ್ಟಿ. ಆ ಹಾಲಿನಿಂದ ಹೆಚ್ಚು ಬೆಣ್ಣೆಯು ಸಿಕ್ಕುತ್ತದೆ. ಆದರೆ ಹಸುವಿನ ಹಾಲಿನ ಹಾಗೆ ಎಮ್ಮೆಯ ಹಾಲು ಆರೋಗ್ಯಕರವಲ್ಲ. ಕೋಣವು ಎತ್ತಿಗಿಂತ ಹೆಚ್ಚು ಬಲವುಳ್ಳದ್ದು. ಅದು ಎತ್ತಿನಹಾಗೆಯೇ ಹೊಲವನ್ನು ಉಳುತ್ತದೆ. ಗಾಡಿಯನ್ನೂ ಹೊರುತ್ತದೆ. ಕಾಡಿನಲ್ಲಿ ದೊಡ್ಡದೊಡ್ಡ ಕೋಣಗಳಿರುವವು. ಅವು ಬಲು ಭಯಂಕರವಾದ ಪ್ರಾಣಿಗಳು. ಅವು ಹುಲಿಗೂ (೫) ಹೆದರುವದಿಲ್ಲ. ಅವು ಬಲು ವೇಗದಿಂದ ಓಡುತ್ತವೆ. ಅವುಗಳಿಗೆ ಬಲವಾದ ಕೊಂಬುಗಳಿರುತ್ತವೆ.

೮

ಸೂರ್ಯನಿಗೆ (೬) ಹಗಲು ರಾತ್ರೆಗಳು ಇಲ್ಲ. ಅವನು ಯಾವಾಗಲೂ ಪ್ರಕಾಶಿಸುತ್ತಿರುತ್ತಾನೆ. ನಮಗೆ ಸೂರ್ಯನ ಪ್ರಕಾಶದಿಂದ (೫) ಹಗಲು ಆಗುವದು ; ಆ ಪ್ರಕಾಶವು ಇಲ್ಲದಿದ್ದರೆ ರಾತ್ರಿಯಾಗುವದು. ರಾತ್ರಿಯಲ್ಲಿ ಎಲ್ಲೆಲ್ಲಿಯೂ ಕತ್ತಲೆ ಇರುತ್ತದೆ. ಆಗ ಓದುವದಕ್ಕೆ ಆಗುವದಿಲ್ಲ. ಆದ್ದರಿಂದ ಜನರು ಮನೆಯಲ್ಲಿ ದೀಪವನ್ನು ಹಚ್ಚಿಸುತ್ತಾರೆ. ಎಣ್ಣೆ (೨) ಇದ್ದ ಹೊರತು ದೀಪವು ಉರಿಯುವದಿಲ್ಲ. ಗಾಳಿಯ ಹೊಡೆತಕ್ಕೆ (೩) ಅದು ಆರಿಹೋಗುತ್ತದೆ.

೯

ರಾಜನು ಹೊಲದಲ್ಲಿ ಒಬ್ಬ ಮುದುಕಿಯನ್ನು ಕಂಡನು. ಅವಳು ಹೊಲದ ಕೆಲಸದಲ್ಲಿ ಆಸಕ್ತಳಾಗಿದ್ದಳು. ರಾಜನು ಅವಳನ್ನು ಕೇಳಿದನು ; 'ಅಮ್ಮ, ನಿನ್ನ ಜತೆಗಾತಿಯರೆಲ್ಲಿ ? ಆಕೆ ಉತ್ತರಕೊಡುತ್ತಾಳೆ : 'ಅವರೆಲ್ಲ ರಾಜನನ್ನು ನೋಡುವದಕ್ಕೆ ಹೋಗಿದ್ದಾರೆ'. ಹಾಗಾದರೆ ನೀನೇತಕ್ಕೆ 'ಅವರೊಡನೆ ಹೋಗಲಿಲ್ಲ ? 'ಅವನ ದರ್ಶನದಿಂದ ಏನು (ಆಗಬೇಕು ?) ಅವರೆಲ್ಲ ಮೂರ್ಖರು, ಏಕೆಂದರೆ ಅವರಿಗೆ

ಒಂದು ದಿನದ ಕೆಲಸವು ನಷ್ಟವಾಗುತ್ತದೆ. ನಾನು ಬಹಳ ಬಡವಳು. ನನಗೆ ನಾಲ್ಕು ಜನ ಮಕ್ಕಳಿರುವರು. ಒಂದು ದಿನದ ಉದ್ಯೋಗವನ್ನು ಕಳೆದುಕೊಳ್ಳಲಾರೆ.' ಹೀಗೆಂದು ಆ ಮುದುಕಿಯು ನುಡಿದಳು. ರಾಜನು ಅವಳ ಕೈಯಲ್ಲಿ ಒಂದು ಚಿನ್ನದ ನಾಣ್ಯವನ್ನು ಇಟ್ಟನು. 'ತಾಯಿ, ನಿನ್ನ ಜತೆಯವರು ಬೇಗನೆ ಹಿಂತಿರುಗಿ ಬರುವರು. 'ರಾಜನು ನನ್ನನ್ನು ನೋಡುವದಕ್ಕೆ ತಾನೇ ಬಂದಿದ್ದನು. ತನ್ನ ಬರುವಿಕೆಯ ಜ್ಞಾಪಕಾರ್ಥವಾಗಿ ಈ ನಾಣ್ಯವನ್ನು ಕೊಟ್ಟನು- ಹೀಗೆಂದು ಅವರಿಗೆ ತಿಳಿಸು.' ಹೀಗೆಂದು ಹೇಳಿ ರಾಜನು ಹೊರಟುಹೋದನು.

## ೧೦

ಒಬ್ಬ ಕುರುಬರ ಹುಡುಗನು ಒಂದು ಹಳ್ಳಿಯ ಹತ್ತಿರ ಕುರಿಯ ಮಂದೆಯನ್ನು ಕಾಯುತ್ತಿದ್ದನು. ಅವನು ಒಂದು ದಿನ ವಿನೋದಕ್ಕಾಗಿ 'ತೋಳ ಬಂತು ! ತೋಳ ಬಂತು!' ಎಂದು ಕೂಗಿಕೊಂಡನು. ಹಳ್ಳಿಯಲ್ಲಿ ಜನರು ಇವನ ಶಬ್ದವನ್ನು ಕೇಳಿ, 'ಅಯ್ಯೋ ! ಹುಡುಗನು ಸಂಕಟದಲ್ಲಿ ಬಿದ್ದಿದ್ದಾನೆ' - ಎಂದು ದೊಣ್ಣೆ ಮುಂತಾದವುಗಳನ್ನು ತೆಗೆದುಕೊಂಡು ಬೇಗಬೇಗನೆ ಅವನ ಬಳಿಗೆ ಬಂದರು. ಅವನು ಅವರನ್ನೆಲ್ಲ ಕಂಡು ಗಟ್ಟಿಯಾಗಿ ನಕ್ಕನು. 'ಅಯ್ಯ, ಗದ್ದಲಮಾಡಬೇಡಿರಿ ; ಕುರಿಗಳೆಲ್ಲ ಹೆದರಿ ಓಡಿಹೋಗುತ್ತವೆ' ಎಂದನು. ಅವರೆಲ್ಲರೂ ವಂಚಿಸಲ್ಪಟ್ಟಿದ್ದೇವೆ' ಎಂದು ಊರಿಗೆ (೨) ಹೋದವರಾದರು.

ಹುಡುಗನು ಮತ್ತೊಂದು ಸಲ 'ತೋಳ ಬಂತು!' ಎಂದು ಕೂಗಿಕೊಂಡನು. ಆಗ ನಿಜವಾಗಿ ತೋಳವು ಬಂದಿತು. ಆದರೆ ಹಳ್ಳಿಯವರು 'ಈ ಹುಡುಗನಿಗೆ ದಯೆಯು ತೋರಿಸಲ್ಪಡತಕ್ಕದ್ದಲ್ಲ' ಎಂದು ಸುಮ್ಮನೆ ಇದ್ದರು. ಹುಡುಗನು 'ತೋಳ! ತೋಳ!' ಎಂದು ಬಲು ಗಟ್ಟಿಯಾಗಿ ಕಿರಿಚಿಕೊಂಡನು. ಆದರೂ ಯಾರೂ ಅಲ್ಲಿಗೆ ಬರಲಿಲ್ಲ. ತೋಳವು ಕುರಿಗಳನ್ನೂ ಕುರಿಮರಿಗಳನ್ನೂ ಕೊಂದುಹಾಕಿತು.

## ೧೧

ಸ್ವಸ್ತಿ, ಪ್ರೇಮದ ತಮ್ಮನಾದ ರಂಗನಾಥನಿಗೆ ಶ್ರೀನಿವಾಸಶರ್ಮನ ಆಶೀರ್ವಾದಗಳು. ಈ ಕಾರ್ತಿಕ ಬಹುಳ ದ್ವಾದಶಿಯವರೆಗೆ ನಾವೆಲ್ಲರೂ ಕ್ಷೇಮ. ಅಲ್ಲಿ ನಿನ್ನ ಯೋಗಕ್ಷೇಮಗಳ ವಿಷಯದಲ್ಲಿ ಆಗಿಂದಾಗ್ಗೆ ಬರೆಯುತ್ತಾ ಬರುವದು. ನಿನಗೆ ವಿದ್ಯೆಯಲ್ಲಿರುವ ಪ್ರೀತಿಯನ್ನು ಕೇಳಿ ಬಹಳಸಂತೋಷಪಟ್ಟೆನು. ನಿನ್ನ ನಡತೆಯಿಂದ ಅಲ್ಲಿರುವ ಬೋಧಕರೂ ವಿದ್ಯಾರ್ಥಿಗಳೂ ನಿನ್ನಲ್ಲಿ ಪ್ರಸನ್ನರಾಗುವರೆಂದು

ನಂಬುತ್ತೇನೆ. ಹೀಗೆಯೇ ಚಿತ್ತವಿಟ್ಟು ಓದುವೆಯಾದರೆ ನಮ್ಮ ಕುಲಕ್ಕೆಲ್ಲ ಒಳ್ಳೆಯ ಹೆಸರು ದೊರೆಯುವದು. ಇದರಲ್ಲಿ ಯಾವ ಸಂಶಯವೂ ಇಲ್ಲ. ಜಗದೀಶ್ವರನು ನಿನ್ನನ್ನು ಕಾಪಾಡಲಿ. ಇಂತು ನಿನ್ನ ಪ್ರೇಮದ ಅಣ್ಣನು ಹಾರೈಸುತ್ತಾನೆ.[1]

## ೧೨

ಕಾಲದಲ್ಲಿ ಮೋಡಗಳು ಮಳೆಗರೆಯಲಿ. ಭೂಮಿಯಲ್ಲಿ ಬಹಳ ಸಸ್ಯಗಳು ಬೆಳೆಯಲಿ. ಈ ದೇಶದಲ್ಲಿ ತೊಂದರೆಯು ನಾಶವಾಗಲಿ. ಪುತ್ರರಿಲ್ಲದವರು ಪುತ್ರರುಳ್ಳವರಾಗಲಿ. ಬಡವರು ಹಣವಂತರಾಗಲಿ. ಜನರೆಲ್ಲರೂ ಬಹುಕಾಲ ಬದುಕಲಿ. ಎಲ್ಲರಿಗೂ ಎಲ್ಲೆಲ್ಲಿಯೂ ಸುಖವುಂಟಾಗಲಿ. ಸಂಸ್ಕೃತಭಾಷೆಯು ಎಲ್ಲರಿಂದಲೂ ಆದರಿಸಲ್ಪಟ್ಟದ್ದಾಗಲಿ.

1. 'ಇತ್ಯಾಶಾಸ್ತೇ..........॥' ಹೀಗೆ ವಾಕ್ಯವನ್ನು ಪ್ರಾರಂಭಿಸಿ.

# ನಾಮಪದದ ವಿಭಕ್ತಿಮಾಲೆ

## ಪ್ರತ್ಯಯಗಳು

| ವಿಭಕ್ತಿ | ಏಕವಚನ | ದ್ವಿವಚನ | ಬಹುವಚನ |
|---|---|---|---|
| ಪ್ರಥಮಾ | ಸ್-ಉ | ಓ-ಅರು, ಗಳು | ಅಸ್-ಅರು, ಗಳು |
| ಸಂ. ಪ್ರಥಮಾ | ಸ್-ಎ | ಔ-ಅರೆ, ಗಳೆ | ಅಸ್-ಅರೆ, ಗಳೆ |
| ದ್ವಿತೀಯಾ | ಅಮ್-ಅನ್ನು | ಓ-ಅರನ್ನು, ಗಳನ್ನು | ಅಸ್-ಅರನ್ನು, ಗಳನ್ನು |
| ತೃತೀಯಾ | ಆ- ಇಂದ | ಭ್ಯಾಮ್-ಅರಿಂದ, ಅಳಿಂದ | ಭಿಸ್-ಅರಿಂದ, ಗಳಿಂದ |
| ಚತುರ್ಥೀ | ಏ-ಗೆ, ಕ್ಕೆ | ಭ್ಯಾಮ್, ಅರಿಗೆ, ಗಳಿಗೆ | ಭ್ಯಸ್-ಅರಿಗೆ, ಗಳಿಗೆ |
| ಪಞ್ಚಮೀ | ಅಸ್-ಇಂದ | ಭ್ಯಾಮ್-ಅರಿಂದ, ಗಳಿಂದ | ಭ್ಯಸ್-ಅರಿಂದ, ಗಳಿಂದ |
| ಷಷ್ಠೀ | ಅಸ್-ಅ | ಓಸ್-ಅರ, ಗಳ | ಆಮ್-ಅರ. ಗಳ |
| ಸಪ್ತಮೀ | ಇ-ಅಲ್ಲಿ | ಓಸ್-ಅರಲ್ಲಿ, ಗಳಲ್ಲಿ | ಸು-ಅರಲ್ಲಿ, ಗಳಲ್ಲಿ |

**ವಿಶೇಷ :- ೧.** ದ್ವಿವಚನಕ್ಕೂ ಬಹುವಚನಕ್ಕೂ ಕನ್ನಡದಲ್ಲಿ ಒಂದೇ ರೂಪವಾದರೂ ಸಂಸ್ಕೃತದಲ್ಲಿ ಎರಡು ಪದಾರ್ಥಗಳನ್ನು ಕುರಿತು ಮಾತನಾಡುವಾಗ ದ್ವಿವಚನಗಳನ್ನೇ ಉಪಯೋಗಿಸಬೇಕು.

೨. ಪ್ರತ್ಯಯಗಳಿಗೆ ಮೇಲೆ ಕೊಟ್ಟಿರುವವಲ್ಲದೆ ಬೇರೆ ಅರ್ಥಗಳೂ ಬರುವದುಂಟು. ಉದಾಹರಣೆಗೆ : ಅವಿಪಾಲಂ ಪ್ರಾಹ-ಕುರುಬನನ್ನು ಕುರಿತು ಹೇಳುತ್ತಾನೆ ; ಗ್ರಾಮಂ ಗತಃ- ಊರಿಗೆ ಹೋದನು, ಮಹಿಷ್ಯಾ ಸಹ ಮಹಿಷಃ ಪ್ರಸ್ಥಿತಃ- ಎಮ್ಮೆಯೊಡನೆ ಕೋಣವು ಹೊರಟಿತು ; ಅರ್ಥಾಯ ಆಗತೋಽಸ್ಮಿ- ದುಡ್ಡಿಗೋಸ್ಕರ ಬಂದಿದ್ದೇನೆ. ನ ಜಾತು ಕಾಮಾತ್ ಧರ್ಮಂ ತ್ಯಜೇತ್ - ಎಂದಿಗೂ ಕಾಮಕ್ಕಾಗಿ ಧರ್ಮವನ್ನು ಬಿಡಬಾರದು. ದಶರಥಸ್ಯ ತಿಸ್ರೋ ಭಾರ್ಯಾ ಆಸನ್ - ದಶರಥನಿಗೆ ಮೂರು ಜನ ಹೆಂಡರಿದ್ದರು. ರಾಮಃ ಕಟೇ ಉಪವಿಶತಿ- ರಾಮನು ಚಾಪೆಯ ಮೇಲೆ ಕೂತಿದ್ದಾನೆ.

೩. ಮೇಲೆ ಹೇಳಿದ ಪ್ರತ್ಯಯಗಳು ಸೇರುವಾಗ ಶಬಗಳಲ್ಲಿ ಎಷ್ಟೋ ಹೆಚ್ಚು ಕಡಿಮೆಯಾಗುವವು. ಅವುಗಳ ನಿಯಮವನ್ನೆಲ್ಲ ನೆನಪಿಡುವದು ಕಷ್ಟ. ಆದ್ದರಿಂದ ಮೊದಲು ಬಾಲಕರು ಮುಖ್ಯವಾದ ಶಬ್ದರೂಪಗಳನ್ನು ಮಾದರಿಗಾಗಿ ಗಟ್ಟಿಮಾಡಿ ನೆನಪಿಡಬೇಕು.

# ಅಕಾರಾನ್ತಃ

## ೧. ಪುಲ್ಲಿಂಗಃ

ಪ್ರ. ವೃಕ್ಷಃ ಮರವು
ವೃಕ್ಷೌ-(ಎರಡು ಮರಗಳು)
ವೃಕ್ಷಾಃ-ಮರಗಳು
ಸಂ. ವೃಕ್ಷ-ಮರವೆ
ವೃಕ್ಷೌ- (ಎರಡು) ಮರಗಳೆ
ವೃಕ್ಷಾಃ-ಮರಗಳೆ
ದ್ವಿ. ವೃಕ್ಷಮ್-ಮರವನ್ನು
ವೃಕ್ಷೌ-(ಎರಡು) ಮರಗಳನ್ನು
ವೃಕ್ಷಾನ್-ಮರಗಳನ್ನು
ತೃ. ವೃಕ್ಷೇಣ-ಮರದಿಂದ
ವೃಕ್ಷಾಭ್ಯಾಮ್-(ಎರಡು) ಮರಗಳಿಂದ
ವೃಕ್ಷೈಃ-ಮರಗಳಿಂದ
ಚ. ವೃಕ್ಷಾಯ-ಮರಕ್ಕೆ
ವೃಕ್ಷಾಭ್ಯಾಮ್-(ಎರಡು) ಮರಗಳಿಗೆ
ವೃಕ್ಷೇಭ್ಯಃ-ಮರಗಳಿಗೆ
ಪಂ. ವೃಕ್ಷಾತ್-ಮರದಿಂದ
ವೃಕ್ಷಾಭ್ಯಾಮ್-(ಎರಡು ಮರಗಳಿಂದ)
ವೃಕ್ಷೇಭ್ಯಃ-ಮರಗಳಿಂದ
ಷ. ವೃಕ್ಷಸ್ಯ-ಮರದ
ವೃಕ್ಷಯೋಃ-(ಎರಡು)ಮರಗಳ
ವೃಕ್ಷಾಣಾಮ್-ಮರಗಳ
ಸ. ವೃಕ್ಷೇ-ಮರದಲ್ಲಿ
ವೃಕ್ಷಯೋಃ-(ಎರಡು) ಮರಗಳಲ್ಲಿ
ವೃಕ್ಷೇಷು-ಮರಗಳಲ್ಲಿ

## ೨. ನಪುಂಸಕಲಿಙ್ಗಃ

ಫಲಮ್-ಹಣ್ಣು
ಫಲೇ-(ಎರಡು) ಹಣ್ಣುಗಳು
ಫಲಾನಿ-ಹಣ್ಣುಗಳು
ಫಲ-ಹಣ್ಣೆ
ಫಲೇ-(ಎರಡು)ಹಣ್ಣುಗಳೆ
ಫಲಾನಿ-ಹಣ್ಣುಗಳೆ
ಫಲಮ್-ಹಣ್ಣನ್ನು
ಫಲೇ- (ಎರಡು) ಹಣ್ಣುಗಳನ್ನು
ಫಲಾನಿ- ಹಣ್ಣುಗಳನ್ನು
ಫಲೇನ- ಹಣ್ಣಿನಿಂದ
ಫಲಾಭ್ಯಾಮ್-(ಎರಡು) ಹಣ್ಣುಗಳಿಂದ
ಫಲೈಃ- ಹಣ್ಣುಗಳಿಂದ
ಫಲಾಯ-ಹಣ್ಣಿಗೆ
ಫಲಾಭ್ಯಾಮ್-(ಎರಡು) ಹಣ್ಣುಗಳಿಗೆ
ಫಲೇಭ್ಯಃ- ಹಣ್ಣುಗಳಿಗೆ
ಫಲಾತ್-ಹಣ್ಣಿನಿಂದ
ಫಲಾಭ್ಯಾಮ್-(ಎರಡು)ಹಣ್ಣುಗಳಿಂದ
ಫಲೇಭ್ಯಃ- ಹಣ್ಣುಗಳಿಂವ
ಫಲಸ್ಯ-ಹಣ್ಣಿನ
ಫಲಯೋಃ-(ಎರಡು) ಹಣ್ಣುಗಳ
ಫಲಾನಾಮ್-ಹಣ್ಣುಗಳ
ಫಲೇ-ಹಣ್ಣಿನಲ್ಲಿ
ಫಲಯೋಃ- (ಎರಡು) ಹಣ್ಣುಗಳಲ್ಲಿ
ಫಲೇಷು-ಹಣ್ಣುಗಳಲ್ಲಿ

**ವಿಶೇಷ :-** ೧. ಗಂಡಸರ ಮತ್ತು ಗಂಡುಪ್ರಾಣಿಗಳ ಹೆಸರು ಸಾಮಾನ್ಯವಾಗಿ ಪುಲ್ಲಿಂಗ; ಹೆಂಗಸರ ಮತ್ತು ಹೆಣ್ಣುಪ್ರಾಣಿಗಳ ಹೆಸರು ಸ್ತ್ರೀಲಿಂಗ. ನಿರ್ಜೀವವಸ್ತುಗಳ ಹೆಸರು ಮೂರರಲ್ಲಿ ಯಾವದಾದರೊಂದು ಲಿಂಗವಾಗಿರುವದು. ಕನ್ನಡದಲ್ಲಿ ಶಬ್ದವು ಯಾವ ಲಿಂಗವಾಗಿದ್ದರೂ ಸಂಸ್ಕೃತದಲ್ಲಿರುವ ಅದೇ ಅರ್ಥದ ಶಬ್ದದ ಲಿಂಗವನ್ನು ನಿಘಂಟು ಏನೆಂದಲೇ ಕಂಡುಹಿಡಿದುಕೊಳ್ಳಬೇಕು.

೨. ಅಕಾರಾಂತಶಬ್ದಗಳು ಪುಲ್ಲಿಂಗವಾದರೆ ವೃಕ್ಷಶಬ್ದದಂತೆ. ನಪುಂಸಕವಾದರೆ ಫಲಶಬ್ದದಂತೆ ರೂಪಗಳನ್ನು ಹೊಂದುತ್ತವೆ. ಉದಾಹರಣೆಗೆ : ಬಾಲಃ, ಮಹಿಷಃ, ರಾಮಃ, ಹಸ್ತಃ, ಅಣಕಃ, ಕಟಃ, ಕುಠಾರಃ, ಕವಚಃ- ಈ ಮಾತುಗಳೆಲ್ಲ ಪುಲ್ಲಿಂಗ ; ಇವಕ್ಕೆ ವೃಕ್ಷಶಬ್ದದಂತೆ ರೂಪವಾಗುವದು ; ಪಾತ್ರಮ್, ಗುಡಮ್, ಖೇಲನಮ್, ಧನಮ್, ಅಪತ್ಯಮ್, ಮಿತ್ರಮ್, ಧನಮ್, ಅಜ್ಞಮ್-ಈ ಮಾತುಗಳೆಲ್ಲ ಫಲಶಬ್ದದಂತೆ ನಡೆಯುತ್ತವೆ.

೩. ನಪುಂಸಕಲಿಂಗದಲ್ಲಿ ಪ್ರಥಮಾ-ದ್ವಿತೀಯಾವಿಭಕ್ತಿಗಳ ರೂಪದಲ್ಲಿ ಭೇದವಿಲ್ಲ. ತೃತೀಯಾವಿಭಕ್ತಿಯಿಂದ ಮುಂದಕ್ಕೆ ಅಕಾರಾಂತ ನಪುಂಸಕಕ್ಕೂ ಅಕಾರಾಂತ ಪುಲ್ಲಿಂಗಕ್ಕೂ ರೂಪದಲ್ಲಿ ಭೇದವಿಲ್ಲ.

೪. ವಿಶೇಷಣಗಳು ವಿಶೇಷ್ಯದ ಲಿಂಗವಾಗಿರುವವು. ಆದ್ದರಿಂದ ಅಕಾರಾಂತವಾದ ವಿಶೇಷಣಗಳನ್ನು ಪುಲ್ಲಿಂಗದಲ್ಲಿ ವೃಕ್ಷಶಬ್ದದಂತೆಯೂ ನಪುಸಂಕದಲ್ಲಿ ಫಲಶಬ್ದದಂತೆಯೂ ರೂಪಿಸಿಕೊಳ್ಳಬೇಕು. ಉದಾಹರಣೆಗೆ : ಜ್ಯೇಷ್ಠಃ ಪುತ್ರಃ-ಹಿರಿಯ ಮಗನು. ಶೀತೇನ ಜಲೇನ- ತಣ್ಣನೆಯ ನೀರಿನಿಂದ, ವಿಶಾಲಂ ಗೃಹಮ್- ವಿಶಾಲವಾದ ಮನೆಯನ್ನು, ಸುಪಕ್ವಾನಿ ಫಲಾನಿ- ಚೆನ್ನಾಗಿ ಮಾಗಿದ ಹಣ್ಣುಗಳು, ತಾದೃಶೇ ಪಾತ್ರೇ- ಅಂಥ ಪಾತ್ರೆಯಲ್ಲಿ.

೫. ಸಂಸ್ಕೃತದ್ವಿವಚನವನ್ನು ಕನ್ನಡಿಸುವಾಗ 'ಎರಡು' ಎಂಬ ಶಬ್ದವನ್ನು ಇಟ್ಟರೆ ಕಂಸಗಳಲ್ಲಿ ತೋರಿಸಬೇಕು. ಇಡದಿದ್ದರೂ ಸಂದರ್ಭದಲ್ಲಿ ಎರಡೆಂದು ಗೊತ್ತಾಗುತ್ತದೆ. ಉದಾ : ನೇತ್ರೇ ರೂಪಂ ಪಶ್ಯತಃ- ಕಣ್ಣುಗಳು ರೂಪವನ್ನು ನೋಡುತ್ತವೆ. ಪಂಚಮೀ ವಿಭಕ್ತಿಯನ್ನು ತೃತೀಯಾವಿಭಕ್ತಿಯಂತೆಯೇ ಕನ್ನಡಿಸಬಹುದು. ಉದಾ : ವೃಕ್ಷಾತ್ ಫಲಂ ಪತತಿ- ಮರದಿಂದ ಹಣ್ಣು ಬೀಳುತ್ತದೆ. ಸಂಬೋಧನಾವಿಭಕ್ತಿಗಳನ್ನು ಹೇಳುವಾಗ ಹೇ, ಭೋಃ, ರೇ, ಅರೇ- ಎಂಬ ಅವ್ಯಯಗಳನ್ನು ಸೇರಿಸುವದುಂಟು. ಆದರೆ ಇವು ಬೇರೆ ಮಾತುಗಳೇ ಹೊರತು ಆಯಾ ಶಬ್ದಕ್ಕೆ ಸೇರಿದವುಗಳಲ್ಲ. ಉದಾ : ಹೇ ಮಿತ್ರ- ಎಲೈ ಗೆಳೆಯನೆ, ಭೋ ಬ್ರಾಹ್ಮಣ- ಎಲೈ ಬ್ರಾಹ್ಮಣನೆ, ರೇ ಸೇವಕ- ಎಲೋ ಆಳೆ, ಅರೇ ನೀಚ- ಎಲಾ ನೀಚನೆ.

ಸೂಚನೆ :- ಮುಂದೆ ಕೊಟ್ಟಿರುವ ಶಬ್ದಗಳಲ್ಲಿ ೧-ಪ್ರಥಮಾ, ೨-ದ್ವಿತೀಯಾ, ೩-ತೃತೀಯಾ, ೪-ಚತುರ್ಥೀ, ೫-ಪಂಚಮೀ, ೬-ಷಷ್ಠೀ, ೭-ಸಪ್ತಮೀ, ಸಂಖ್ಯೆಹಾಕದೆ ಬಿಟ್ಟಿರುವ ರೂಪಗಳು ಸಂಬೋಧನಾವಿಭಕ್ತಿಗೆ ಸೇರಿರುತ್ತವೆ.

## ೩. ಆಕಾರಾನ್ತಃ ಸ್ತ್ರೀಲಿಙ್ಗೋ ವಿದ್ಯಾಶಬ್ದಃ (ವಿದ್ಯೆ)

೧. ವಿದ್ಯಾ, ವಿದ್ಯೇ, ವಿದ್ಯಾಃ । ವಿದ್ಯೇ, ವಿದ್ಯೇ, ವಿದ್ಯಾಃ । ೨. ವಿದ್ಯಾಮ್, ವಿದ್ಯೇ, ವಿದ್ಯಾಃ । ೩. ವಿದ್ಯಯಾ, ವಿದ್ಯಾಭ್ಯಾಮ್, ವಿದ್ಯಾಭಿಃ । ೪. ವಿದ್ಯಾಯೈ, ವಿದ್ಯಾಭ್ಯಾಮ್, ವಿದ್ಯಾಭ್ಯಃ । ೫. ವಿದ್ಯಾಯಾಃ, ವಿದ್ಯಾಭ್ಯಾಮ್, ವಿದ್ಯಾಭ್ಯಃ । ೬. ವಿದ್ಯಾಯಾಃ, ವಿದ್ಯಯೋಃ, ವಿದ್ಯಾನಾಮ್ । ೭. ವಿದ್ಯಾಯಾಮ್, ವಿದ್ಯಯೋಃ, ವಿದ್ಯಾಸು ॥

## ೪. ಈಕಾರಾನ್ತಃ ಸ್ತ್ರೀಲಿಙ್ಗೋ ನದೀಶಬ್ದಃ (ನದಿ, ಹೊಳೆ)

೧ ನದೀ, ನದ್ಯೌ, ನದ್ಯಃ । ನದಿ, ನದ್ಯೌ, ನದ್ಯಃ । ೨ ನದೀಮ್, ನದ್ಯೌ, ನದೀಃ। ೩ ನದ್ಯಾ, ನದೀಭ್ಯಾಮ್, ನದೀಭಿಃ । ೪. ನದ್ಯೈ, ನದೀಭ್ಯಾಮ್, ನದೀಭ್ಯಃ । ೫ ನದ್ಯಾಃ, ನದೀಭ್ಯಾಮ್, ನದೀಭ್ಯಃ। ೬ ನದ್ಯಾಃ ನದ್ಯೋಃ ನದೀನಾಮ್ । ೭ ನದ್ಯಾಮ್, ನದ್ಯೋಃ, ನದೀಷು॥

**ವಿಶೇಷ :-** ೧. ಸಂಸ್ಕೃತದಲ್ಲಿ ಆಕಾರಾನ್ತಶಬ್ದಗಳೂ ಈಕಾರಾನ್ತಶಬ್ದಗಳೂ ಬಹುಮಟ್ಟಿಗೆ ಸ್ತ್ರೀಲಿಂಗವಾಗಿರುತ್ತವೆ. ಇವುಗಳನ್ನು ಕ್ರಮವಾಗಿ 'ವಿದ್ಯಾ', 'ನದೀ' -ಶಬ್ದಗಳಂತೆ ನಡೆಯಿಸಬೇಕು.

ಉದಾ : ಭಾರ್ಯಾ, ಶ್ರದ್ಧಾ, ಭಾಷಾ, ಶಾಲಾ, ಗ್ರೀವಾ, ತ್ಯಾಗಿತಾ, ಪ್ರಭಾ- ಇವು ವಿದ್ಯಾಶಬ್ದದಂತೆಯೂ ಭಾರತೀ, ಲೇಖಿನೀ, ಮಷೀ, ಸೂಚೀ, ವಾಪೀ, ಶರ್ವರೀ, ಪುರೀ, ಆಸನ್ದೀ, ಲಕ್ಷ್ಮೀ- ಇವು ನದೀಶಬ್ದದಂತೆಯೂ ನಡೆಯುವವು- ಲಕ್ಷ್ಮೀಶಬ್ದವು ಮಾತ್ರ ಸಂಬೋಧನೆಯ ಏಕವಚನದಲ್ಲಿ 'ಲಕ್ಷ್ಮೀಃ' ಎಂದಾಗುತ್ತದೆ.

೨. ಅಕಾರಾನ್ತವಿಶೇಷಣಗಳು ಸ್ತ್ರೀಲಿಂಗದಲ್ಲಿ ಸಾಮಾನ್ಯವಾಗಿ ಆಕಾರಾನ್ತವಾಗುತ್ತವೆ. ಆಗ ಅವುಗಳನ್ನೂ 'ವಿದ್ಯಾ'ಶಬ್ದದಂತೆಯೇ ನಡೆಯಿಸಬೇಕು. ಉದಾ: ಸ್ಥೂಲಾ, ಜ್ಯೇಷ್ಠಾ, ಉತ್ತಮಾ... ಭೋಗಕರೀ, ಸುಖಕರೀ- ಎಂಬಂತೆ ಈಕಾರಾನ್ತವಾದರೆ ನದೀಶಬ್ದದಂತೆ ನಡೆಯಿಸಬೇಕು.

## ೫- ಇಕಾರಾನ್ತಃ ಪುಲ್ಲಿಙ್ಗಃ ಸನ್ಧಿಶಬ್ದಃ (ಸೇರುವಿಕೆ)

೧ ಸನ್ಧಿಃ, ಸನ್ಧೀ, ಸನ್ಧಯಃ । ಸನ್ಧೇ, ಸನ್ಧೀ, ಸನ್ಧಯಃ । ೨ ಸನ್ಧಿಮ್, ಸನ್ಧೀ, ಸನ್ಧೀನ್ । ೩ ಸನ್ಧಿನಾ, ಸನ್ಧಿಭ್ಯಾಮ್, ಸನ್ಧಿಭಿಃ । ೪ ಸನ್ಧಯೇ, ಸನ್ಧಿಭ್ಯಾಮ್, ಸನ್ಧಿಭ್ಯಃ ।

೫ ಸನ್ಧೇಃ, ಸನ್ಧಿಭ್ಯಾಮ್, ಸನ್ಧಿಭ್ಯಃ । ೬ ಸನ್ಧೇಃ ಸನ್ಧ್ಯೋಃ, ಸನ್ಧೀನಾಮ್ । ೭. ಸನ್ಧೌ, ಸನ್ಧ್ಯೋಃ, ಸನ್ಧಿಷು ॥

## ೬. ಇಕಾರಾನ್ತಃ ಸ್ತ್ರೀಲಿಙ್ಗೋ ಭೂಮಿಶಬ್ದಃ (ಭೂಮಿ, ನೆಲ)

೧ ಭೂಮಿಃ, ಭೂಮೀ, ಭೂಮಯಃ । ಭೂಮೇ, ಭೂಮೀ, ಭೂಮಯಃ । ೨ ಭೂಮಿಮ್, ಭೂಮೀ, ಭೂಮೀಃ । ೩ ಭೂಮ್ಯಾ ಭೂಮಿಭ್ಯಾಮ್, ಭೂಮಿಭಿಃ । ೪ ಭೂಮ್ಯೈ- ಭೂಮಯೇ, ಭೂಮಿಭ್ಯಾಮ್, ಭೂಮಿಭ್ಯಃ । ೫ ಭೂಮ್ಯಾಃ- ಭೂಮೇಃ, ಭೂಮಿಭ್ಯಾಮ್ ಭೂಮಿಭ್ಯಃ । ೬ ಭೂಮ್ಯಾಃ- ಭೂಮೇಃ ಭೂಮ್ಯೋಃ ಭೂಮೀನಾಮ್ । ೭ ಭೂಮ್ಯಾಮ್ - ಭೂಮೌ, ಭೂಮ್ಯೋಃ, ಭೂಮಿಷು ॥

**ವಿಶೇಷ :** ೧. ಇಕಾರಾನ್ತಶಬ್ದವು ಪುಲ್ಲಿಂಗವಾಗಿಯಾಗಲಿ ಸ್ತ್ರೀಲಿಂಗವಾಗಿಯಾಗಲಿ ಇರಬಹುದು. ಪುಲ್ಲಿಂಗಶಬ್ದಗಳು ಸನ್ಧಿಶಬ್ದದಂತೆಯೂ ಸ್ತ್ರೀಲಿಂಗಶಬ್ದಗಳು ಭೂಮಿಶಬ್ದದಂತೆಯೂ ನಡೆಯುವವು. ಉದಾ : ವ್ರೀಹಿಃ, ಪಾಣಿಃ, ಕುಣಿಃ, ಮಹರ್ಷಿಃ, ಪಿಧಿಃ, ಮುನಿಃ, ಭೂಪತಿಃ- ಇವು ಸನ್ಧಿಶಬ್ದದಂತೆಯೂ ; ಲಿಪಿಃ, ವಿತರ್ದಿಃ, ರಾತ್ರಿಃ, ಪ್ರೀತಿಃ, ಖಾನಿಃ, ಅಶನಿಃ, ವೃತ್ತಿಃ- ಇವು ಭೂಮಿಶಬ್ದದಂತೆಯೂ ನಡೆಯುತ್ತವೆ. ಚತುರ್ಥೀ, ಪಂಚಮೀ, ಷಷ್ಠೀ, ಸಪ್ತಮೀ- ಈ ವಿಭಕ್ತಿಗಳ ಏಕವಚನದಲ್ಲಿ ಸ್ತ್ರೀಲಿಂಗಕ್ಕೆ ಎರಡೆರಡೂ ರೂಪಗಳಿರುವವು.

೨. ಇಕಾರಾನ್ತವಾದ ವಿಶೇಷಣಗಳನ್ನು ಪುಲ್ಲಿಂಗದಲ್ಲಿ 'ಸನ್ಧಿ' ಶಬ್ದದಂತೆಯೂ ಸ್ತ್ರೀಲಿಂಗದಲ್ಲಿ 'ಭೂಮಿ' ಶಬ್ದದಂತೆಯೂ ನಡೆಸಬೇಕು.

## ೭. ಉಕಾರಾನ್ತಃ ಪುಲ್ಲಿಙ್ಗೋ ಗುರುಶಬ್ದಃ (ಗುರು)

೧. ಗುರುಃ, ಗುರೂ, ಗುರವಃ, । ಗುರೋ, ಗುರೂ, ಗುರವಃ । ೨ ಗುರುಮ್, ಗುರೂ, ಗುರೂನ್ । ೩ ಗುರುಣಾ, ಗುರುಭ್ಯಾಮ್, ಗುರುಭಿಃ। ೪ ಗುರವೇ, ಗುರುಭ್ಯಾಮ್, ಗುರುಭ್ಯಃ । ೫ ಗುರೋಃ ಗುರುಭ್ಯಾಮ್, ಗುರುಭ್ಯಃ । ೬ ಗುರೋಃ, ಗುರ್ವೋಃ, ಗುರೂಣಾಮ್ । ಗುರೌ, ಗುರ್ವೋಃ, ಗುರುಷು ॥

## ೮. ಉಕಾರಾನ್ತಃ ಸ್ತ್ರೀಲಿಙ್ಗೋ ಧೇನುಶಬ್ದಃ

೧ ಧೇನುಃ ಧೇನೂ, ಧೇನವಃ, । ಧೇನೋ, ಧೇನೂ, ಧೇನವಃ, । ೨ ಧೇನುಮ್, ಧೇನೂ, ಧೇನೂಃ । ೩ ಧೇನ್ವಾ, ಧೇನುಭ್ಯಾಮ್, ಧೇನುಭಿಃ । ೪ ಧೇನ್ವೈಃ-ಧೇನವೇ, ಧೇನುಭ್ಯಾಮ್, ಧೇನುಭ್ಯಃ । ೫ ಧೇನ್ವಾಃ- ಧೇನೋಃ, ಧೇನುಭ್ಯಾಮ್, ಧೇನುಭ್ಯಃ । ೬ ಧೇನ್ವಾಃ, ಧೇನೋಃ, ಧೇನ್ವೋಃ, ಧೇನೂನಾಮ್। ೭ ಧೇನ್ವಾಮ್ - ಧೇನೌ, ಧೇನ್ವೋಃ, ಧೇನುಷು ॥

**ವಿಶೇಷ** : ೧. ಉಕಾರಾನ್ತಪುಲ್ಲಿಂಗಶಬ್ದಗಳು ಗುರುಶಬ್ದದಂತೆಯೂ ಸ್ತ್ರೀಲಿಂಗ ಶಬ್ದಗಳು ಧೇನುಶಬ್ದದಂತೆಯೂ ನಡೆಯುವವು. ಉದಾ : ಬನ್ಧುಃ, ಊರುಃ, ತನ್ತುಃ, ಹೇತುಃ, ಪಶುಃ, ವಾಯುಃ, ಬಾಹುಃ- ಇವೆಲ್ಲ ಗುರುಶಬ್ದದಂತೆ ನಡೆಯುತ್ತವೆ ; ದಯಾಲುಃ ಪಙ್ಗುಃ - ಮುಂತಾದ ವಿಶೇಷಣಗಳು ಪುಲ್ಲಿಂಗವಾದರೆ ಗುರುಶಬ್ದದಂತೆಯೂ ಸ್ತ್ರೀಲಿಂಗ ವಾದರೆ ಧೇನುಶಬ್ದದಂತೆಯೂ ನಡೆಯುವವು.

೨. ಉಕಾರಾನ್ತವಿಶೇಷಣಗಳು ಸ್ತ್ರೀಲಿಂಗದಲ್ಲಿ ಈಕಾರಾನ್ತವಾಗುವದುಂಟು. ಆಗ ಅವು ನದೀಶಬ್ದದಂತೆ ನಡೆಯುವವು.

ಉದಾ : ಋಜ್ವೀ, ಮೃದ್ವೀ, ಲಘ್ವೀ- ಇತ್ಯಾದಿ.

## ೯. ಋಕಾರಾನ್ತಃ ಪುಲ್ಲಿಙ್ಗಃ ಪಿತೃಶಬ್ದಃ (ತಂದೆ)

೧ ಪಿತಾ, ಪಿತರೌ, ಪಿತರಃ । ಪಿತಃ, ಪಿತರೌ, ಪಿತರಃ, । ೨ ಪಿತರಮ್, ಪಿತರೌ, ಪಿತೄನ್ । ೩ ಪಿತ್ರಾ, ಪಿತೃಭ್ಯಾಮ್, ಪಿತೃಭಿಃ । ೪ ಪಿತ್ರೇ, ಪಿತೃಭ್ಯಾಮ್, ಪಿತೃಭ್ಯಃ । ೫ ಪಿತುಃ, ಪಿತೃಭ್ಯಾಮ್, ಪಿತೃಭ್ಯಃ । ೬ ಪಿತುಃ, ಪಿತ್ರೋಃ ಪಿತೄಣಾಮ್ । ೭ ಪಿತರಿ, ಪಿತ್ರೋಃ, ಪಿತೃಷು ॥

**ವಿಶೇಷ** : ಭ್ರಾತೃ, ಮಾತೃ, ದುಹಿತೃ- ಈ ಶಬ್ದಗಳೂ ಪಿತೃಶಬ್ದದಂತೆಯೇ ನಡೆಯುವವು. ಮಾತೃ, ದುಹಿತೃ- ಇವುಗಳು ಸ್ತ್ರೀಲಿಂಗವಾದ್ದರಿಂದ ದ್ವಿತೀಯಾಬಹುವಚನ ದಲ್ಲಿ ಮಾತೄಃ, ದುಹಿತೄಃ- ಎಂದಾಗುವವು.

## ೧೦. ಋಕಾರಾನ್ತಃ ಪುಲ್ಲಿಂಗಃ ಕರ್ತೃಶಬ್ದಃ (ಮಾಡುವವ)

೧. ಕರ್ತಾ, ಕರ್ತಾರೌ, ಕರ್ತಾರಃ । ಕರ್ತಃ, ಕರ್ತಾರೌ, ಕರ್ತಾರಃ । ೨. ಕರ್ತಾರಮ್, ಕರ್ತಾರೌ, ಕರ್ತೄನ್ ॥

**ವಿಶೇಷ** : ೧. ಮಿಕ್ಕ ರೂಪಗಳು ಪಿತೃಶಬ್ದದಂತೆ. ೨. ಬಂಧುವಾಚಕವಲ್ಲದ ಋಕಾರಾನ್ತನಾಮಗಳನ್ನು ಹೀಗೆ ನಡೆಯಿಸಬೇಕು. ಸ್ವಸೃಶಬ್ದವು ಬಂಧುವಾಚಕ ವಾದರೂ ಹೀಗೆಯೇ ನಡೆಯುವದು. ಅದರ ದ್ವಿತೀಯಾಬಹುವಚನದಲ್ಲಿ ಸ್ವಸೄಃ ಎಂದಾಗುವದು. ೩. ಋಕಾರಾನ್ತವಾದ 'ಸ್ಫುಟವಕ್ತೃ' ಮುಂತಾದ ವಿಶೇಷಣಗಳನ್ನು ಹೀಗೆಯೇ ನಡೆಯಿಸಬೇಕು ; ಇವುಗಳು ಸ್ತ್ರೀ ಲಿಂಗದಲ್ಲಿ 'ಸ್ಫುಟವಕ್ತ್ರೀ' ಎಂದು ಮುಂತಾಗಿ ಈಕಾರಾನ್ತವಾಗುವದರಿಂದ ನದೀಶಬ್ದದಂತೆ ರೂಪವನ್ನು ಪಡೆಯುವವು.

## ೧೧. ಓಕಾರಾನ್ತಃ ಪುಲ್ಲಿಙ್ಗೋ ಗೋಶಬ್ದಃ (ಎತ್ತು)

೧ ಗೌಃ, ಗಾವೌ, ಗಾವಃ । ಗೌಃ ಗಾವೌ, ಗಾವಃ । ೨ ಗಾಮ್, ಗಾವೌ, ಗಾಃ । ೩ ಗವಾ, ಗೋಭ್ಯಾಮ್, ಗೋಭಿಃ । ೪ ಗವೇ, ಗೋಭ್ಯಾಮ್, ಗೋಭ್ಯಃ ।

೫ ಗೋಃ, ಗೋಭ್ಯಾಮ್, ಗೋಭ್ಯಃ । ೬ ಗೋಃ, ಗವೋಃ, ಗವಾಮ್ । ೭ ಗವಿ, ಗವೋಃ, ಗೋಷು ॥

**ವಿಶೇಷ** : ೧. ಈ ಶಬ್ದವು ಎತ್ತು ಎಂಬರ್ಥದಲ್ಲಿ ಪುಲ್ಲಿಂಗ, ಹಸು ಎಂಬರ್ಥದಲ್ಲಿ ಸ್ತ್ರೀಲಿಂಗ. ಎರಡಕ್ಕೂ ಒಂದೇ ಬಗೆಯ ರೂಪ.

## ೧೨. ನಕಾರಾನ್ತಃ ಪುಲ್ಲಿಙ್ಗೋ ಗೀತಿನ್‌ಶಬ್ದಃ

## (ರಾಗವಾಗಿ ಓದುವ ಸ್ವಭಾವದವ)

೧ ಗೀತೀ, ಗೀತಿನೌ, ಗೀತಿನಃ । ಗೀತಿನ್, ಗೀತಿನೌ, ಗೀತಿನಃ । ೨ ಗೀತಿನಮ್, ಗೀತಿನೌ, ಗೀತಿನಃ । ೩. ಗೀತಿನಾ, ಗೀತಿಭ್ಯಾಮ್, ಗೀತಿಭಿಃ । ೪ ಗೀತಿನೇ, ಗೀತಿಭ್ಯಾಮ್, ಗೀತಿಭ್ಯಃ । ೫ ಗೀತನಃ, ಗೀತಿಭ್ಯಾಮ್, ಗೀತಿಭ್ಯಃ । ೬ ಗೀತಿನಃ, ಗೀತಿನೋಃ ಗೀತಿನಾಮ್ । ೭ ಗೀತಿನಿ, ಗೀತಿನೋಃ, ಗೀತಿಷು ॥

**ವಿಶೇಷ** : ೧ ಇನ್ ಎಂಬುದು ಕೊನೆಯಲ್ಲಿರುವ ಪುಲ್ಲಿಂಗನಾಮಗಳೂ ವಿಶೇಷಣಗಳೂ ಈ ಶಬ್ದದಂತೆ ನಡೆಯುವವು. ಆದ್ದರಿಂದ ಗುಣೀ, ಸ್ವಾಮೀ, ಕುಶಲೀ, ಶೀಘ್ರೀ, ದೂರಗಾಮೀ, ಶಿಲಾಭಕ್ಷೀ- ಮುಂತಾದವುಗಳನ್ನು ಇದರಂತೆ ನಡೆಯಿಸಬೇಕು.

೨. ಅನ್ ಎಂಬುದು ಕೊನೆಯಲ್ಲಿರುವ ಶಬ್ದಗಳಿಗೆ ಪ್ರಥಮಾ ದ್ವಿತೀಯಾ ದ್ವಿವಚನರೂಪಗಳಲ್ಲಿ ಅಕಾರವು ದೀರ್ಘವಾಗುತ್ತದೆ. ಮಿಕ್ಕ ರೂಪಗಳು ಇನ್ ಅಂತದ ಶಬ್ದದಂತೆ. ಉದಾ : ೧ ಆತ್ಮಾ, ಆತ್ಮಾನೌ, ಆತ್ಮಾನಃ । ಆತ್ಮನ್, ಆತ್ಮಾನೌ, ಆತ್ಮಾನಃ। ೨ ಆತ್ಮಾನಮ್, ಆತ್ಮಾನೌ, ಆತ್ಮನಃ । ೩ ಆತ್ಮನಾ- ಇತ್ಯಾದಿ.

## ೧೩. ನಕಾರಾನ್ತಃ ಪುಲ್ಲಿಙ್ಗೋ ರಾಜನ್‌ಶಬ್ದಃ (ಅರಸು)

೧ ರಾಜಾ, ರಾಜಾನೌ, ರಾಜಾನಃ । ರಾಜನ್, ರಾಜಾನೌ, ರಾಜಾನಃ । ೨ ರಾಜಾನಮ್, ರಾಜಾನೌ, ರಾಜ್ಞಃ । ೩ ರಾಜ್ಞಾ, ರಾಜಭ್ಯಾಮ್, ರಾಜಭಿಃ । ರಾಜ್ಞೇ, ರಾಜಭ್ಯಾಮ್, ರಾಜಭ್ಯಃ । ೫. ರಾಜ್ಞಃ, ರಾಜಭ್ಯಾಮ್, ರಾಜಭ್ಯಃ, । ರಾಜ್ಞಃ, ರಾಜ್ಞೋಃ, ರಾಜ್ಞಾಮ್ । ೭ ರಾಜ್ಞಿ-ರಾಜನಿ, ರಾಜ್ಞೋಃ, ರಾಜಸು ॥

**ವಿಶೇಷ** :- ೧ ಅನ್ ಅಂತವಾಗಿರುವ ಶಬ್ದಗಳಲ್ಲಿ ಅನ್ ಎಂಬುದರ ಹಿಂದೆ ಸಂಯುಕ್ತಾಕ್ಷರವಿಲ್ಲದಿದ್ದರೆ ರಾಜನ್‌ಶಬ್ದದಂತೆ ರೂಪವಾಗುವವು.

೨. ನಕಾರಾನ್ತಶಬ್ದಗಳು ಬಹುಮಟ್ಟಿಗೆ ಸ್ತ್ರೀಲಿಂಗದಲ್ಲಿ ಈಕಾರಾನ್ತವಾಗುವದರಿಂದ ಅವುಗಳನ್ನು ನದೀಶಬ್ದದಂತೆ ನಡೆಯಿಸಬೇಕು. ಉದಾ : ನಾಮ್ನೀ, ಗುಣಿನೀ...

## ೧೪. ತಕಾರಾನ್ತಃ ಪುಲ್ಲಿಙ್ಗೋ ದಯಾವಚ್ಛಬ್ದಃ (ದಯೆಯುಳ್ಳವ)

೧. ದಯಾವಾನ್, ದಯಾವನ್ತೌ, ದಯಾವನ್ತಃ । ದಯಾವಾನ್, ದಯಾವನ್ತೌ, ದಯಾವನ್ತಃ । ೨ ದಯಾವನ್ತಮ್, ದಯಾವನ್ತೌ, ದಯಾವತಃ । ೩ ದಯಾವತಾ, ದಯಾವದ್ಭ್ಯಾಮ್, ದಯಾವದ್ಭಿಃ । ೪ ದಯಾವತೇ, ದಯಾವದ್ಭ್ಯಾಮ್, ದಯಾವದ್ಭ್ಯಃ । ೫ ದಯಾವತಃ, ದಯಾವದ್ಭ್ಯಾಮ್, ದಯಾವದ್ಭ್ಯಃ। ೬ ದಯಾವತಃ, ದಯಾವತೋಃ, ದಯಾವತಾಮ್ । ೭ ದಯಾವತಿ, ದಯಾವತೋಃ, ದಯಾವತ್ಸು ॥

**ವಿಶೇಷ :** ೧ ವತ್, ಮತ್ - ಎಂಬಿವು ಕೊನೆಯಲ್ಲಿರುವ ತಕಾರಾನ್ತ ಶಬ್ದಗಳು ಹೀಗೆ ನಡೆಯುತ್ತವೆ. ಉದಾ : ಭಗವಾನ್, ಭಕ್ತಿಮಾನ್.

೨. ಅತ್ ಎಂಬುದು ಕೊನೆಯಲ್ಲಿದ್ದರೂ ಹೀಗೆಯೇ. ಆದರೆ ಪ್ರಥಮೈಕವಚನಕ್ಕೆ ದೀರ್ಘವಿಲ್ಲ. ಉದಾ : ಗಚ್ಛನ್, ಗಚ್ಛನ್ತೌ, ಗಚ್ಛನ್ತಃ । ಇತ್ಯಾದಿ. ದದತ್ ಮುಂತಾದ ಕೆಲವು ಶಬ್ದಗಳಿಗೆ ಮಾತ್ರ. ೧ ದದತ್, ದದತೌ, ದದತಃ । ದದತ್, ದದತೌ, ದದತಃ । ೨ ದದತಮ್, ದದತೌ, ದದತಃ । ಎಂಬಂತೆ ವಿಶೇಷರೂಪಗಳಿರುವವು ; ಇವಕ್ಕೂ ತೃತೀಯೆಯಿಂದ ಮುಂದಕ್ಕೆ ದಯಾವತ್ ಶಬ್ದದಂತೆ.

೩. ಮಹತ್ ಎಂಬುದನ್ನೂ ಮಹತಾ, ಮಹದ್ಭ್ಯಾಮ್, ಮಹದ್ಭಿಃ । ಎಂದು ಮುಂತಾಗಿ ತೃತೀಯಾವಿಭಕ್ತಿಯಿಂದ ಹೀಗೆಯೇ ನಡೆಯಿಸಬೇಕು. ವಿಶೇಷರೂಪಗಳು : ೧ ಮತ್ತು ಸಂಬೋಧನ : ಮಹಾನ್, ಮಹಾನ್ತೌ, ಮಹಾನ್ತಃ । ೨ ಮಹಾನ್ತಮ್, ಮಹಾನ್ತೌ, ಮಹತಃ ॥

## ೧೫. ಉಕಾರಾನ್ತೋ ನಪುಂಸಕಲಿಙ್ಗೋ ವಸ್ತುಶಬ್ದಃ (ವಸ್ತು)

೧ ವಸ್ತು, ವಸ್ತುನೀ, ವಸ್ತೂನಿ । ವಸ್ತೋ, ವಸ್ತು, ವಸ್ತುನೀ ವಸ್ತೂನಿ । ೨ ವಸ್ತು, ವಸ್ತುನೀ, ವಸ್ತೂನಿ । ೩ ವಸ್ತುನಾ, ವಸ್ತುಭ್ಯಾಮ್, ವಸ್ತುಭಿಃ । ೪ ವಸ್ತುನೇ, ವಸ್ತುಭ್ಯಾಮ್, ವಸ್ತುಭ್ಯಃ । ೫ ವಸ್ತುನಃ, ವಸ್ತುಭ್ಯಾಮ್, ವಸ್ತುಭ್ಯಃ । ೬ ವಸ್ತುನಃ, ವಸ್ತುನೋಃ, ವಸ್ತೂನಾಮ್ । ೭ ವಸ್ತುನಿ, ವಸ್ತುನೋಃ ವಸ್ತುಷು ॥

**ವಿಶೇಷ :** ೧. ಉಕಾರಾನ್ತ ನಪುಂಸಕಗಳನ್ನೆಲ್ಲ ಹೀಗೆ ನಡೆಯಿಸಬೇಕು. ಉಕಾರಾನ್ತ ಪುಲ್ಲಿಂಗಕ್ಕೂ ಇದಕ್ಕೂ ಸಂಬಂಧವಿಲ್ಲವೆಂಬುದನ್ನು ಹೋಲಿಸಿದರೆ ತಿಳಿಯಬಹುದು.

೨. ಇಕಾರಾನ್ತ, ಋಕಾರಾನ್ತ ನಪುಂಸಕಶಬ್ದಗಳು ಈ ಪುಸ್ತಕದಲ್ಲಿ ಪ್ರಯೋಗವಾಗಿಲ್ಲ.

# ಸರ್ವನಾಮಗಳ ರೂಪಾವಳಿ

## ೧೬. ಅಕಾರಾನ್ತಃ ಪುಲ್ಲಿಙ್ಗಃ ಸರ್ವಶಬ್ದಃ (ಎಲ್ಲವನು)

೧. ಸರ್ವಃ,ಸರ್ವೌ, ಸರ್ವೇ । ೨ ಸರ್ವಮ್, ಸರ್ವೌ,ಸರ್ವಾನ್ । ೩ ಸರ್ವೇಣ, ಸರ್ವಾಭ್ಯಾಮ್, ಸರ್ವೈಃ । ೪ ಸರ್ವಸ್ಮೈ, ಸರ್ವಾಭ್ಯಾಮ್, ಸರ್ವೇಭ್ಯಃ । ೫ ಸರ್ವಸ್ಮಾತ್, ಸರ್ವಾಭ್ಯಾಮ್, ಸರ್ವೇಭ್ಯಃ । ೬ ಸರ್ವಸ್ಯ, ಸರ್ವಯೋಃ, ಸರ್ವೇಷಾಮ್ । ೭ ಸರ್ವಸ್ಮಿನ್, ಸರ್ವಯೋಃ, ಸರ್ವೇಷು ॥

**ವಿಶೇಷ :** ೧. ಸರ್ವನಾಮಗಳಿಗೆ ಸಾಮಾನ್ಯವಾಗಿ ಸಂಬೋಧನಾವಿಭಕ್ತಿ ಇಲ್ಲ. ೨. ಅನ್ಯ, ಇತರ, ಕತರ- ಈ ಶಬ್ದಗಳು ಸರ್ವಶಬ್ದದಂತೆ. ೩. ನಪುಂಸಕದಲ್ಲಿ ಪ್ರಥಮಾ ದ್ವಿತೀಯಾ ವಿಭಕ್ತಿಗಳಲ್ಲಿ ವಿಶೇಷರೂಪಗಳು ; ಸರ್ವಮ್ ಸರ್ವೇ, ಸರ್ವಾಣಿ. ಮಿಕ್ಕ ರೂಪಗಳೆಲ್ಲ ಪುಲ್ಲಿಂಗದಂತೆ.

## ೧೭. ಆಕಾರಾನ್ತಃ ಸ್ತ್ರೀಲಿಙ್ಗಃ ಸರ್ವಶಬ್ದಃ (ಎಲ್ಲವಳು)

೧ ಸರ್ವಾ, ಸರ್ವೇ, ಸರ್ವಾಃ । ೨ ಸರ್ವಾಮ್, ಸರ್ವೇ, ಸರ್ವಾಃ । ೩ ಸರ್ವಯಾ, ಸರ್ವಾಭ್ಯಾಮ್, ಸರ್ವಾಭಿಃ । ೪ ಸರ್ವಸ್ಯೈ, ಸರ್ವಾಭ್ಯಾಮ್, ಸರ್ವಾಭ್ಯಃ । ೫ ಸರ್ವಸ್ಯಾಃ, ಸರ್ವಾಭ್ಯಾಮ್, ಸರ್ವಾಭ್ಯಃ । ೬ ಸರ್ವಸ್ಯಾಃ, ಸರ್ವಯೋಃ, ಸರ್ವಾಸಾಮ್ । ೭ ಸರ್ವಸ್ಯಾಮ್, ಸರ್ವಯೋಃ, ಸರ್ವಾಸು ॥

**ವಿಶೇಷ :-** ೧. ಸರ್ವಶಬ್ದಕ್ಕೆ ಪ್ರತಿಯೊಂದು, ಎಲ್ಲ- ಎಂಬ ಎರಡು ಅರ್ಥಗಳಿರುವವು. ಸಂದರ್ಭವನ್ನು ನೋಡಿ ಕನ್ನಡಿಸಬೇಕು. ಉದಾ : ನ ಹಿ ಸರ್ವಃ ಸರ್ವಂ ಜಾನಾತಿ- ಪ್ರತಿಯೊಬ್ಬನೂ ಪ್ರತಿಯೊಂದನ್ನೂ ತಿಳಿದಿರುವದಿಲ್ಲವಷ್ಟೆ ; ಸರ್ವೇಽಪಿ ಚನ್ದನವೃಕ್ಷಾಃ- ಎಲ್ಲವೂ ಗಂಧದ ಮರಗಳು.

೨. ಸರ್ವನಾಮಗಳನ್ನು ವಿಶೇಷಣವಾಗಿಯೂ, ಸ್ವತಂತ್ರವಾಗಿಯೂ ಉಪಯೋಗಿಸಬಹುದು. ವಿಶೇಷಣವಾದಾಗ ವಿಶೇಷ್ಯಗಳ ಲಿಙ್ಗವಿಭಕ್ತಿ ವಚನಗಳೇ ಇವಕ್ಕೂ ಬರುವವು.

## ೧೮. ಮಕಾರಾನ್ತಃ ಪುಲ್ಲಿಙ್ಗಃ ಕಿಮ್ ಶಬ್ದಃ (ಯಾವನು?)

೧ ಕಃ ಕೌ, ಕೇ । ೨ ಕಮ್, ಕೌ, ಕಾನ್ । ೩ ಕೇನ, ಕಾಭ್ಯಾಮ್, ಕೈಃ । ೪ ಕಸ್ಮೈ, ಕಾಭ್ಯಾಮ್, ಕೇಭ್ಯಃ । ೫ ಕಸ್ಮಾತ್, ಕಾಭ್ಯಾಮ್, ಕೇಭ್ಯಃ । ೬ ಕಸ್ಯ, ಕಯೋಃ, ಕೇಷಾಮ್। ೭ ಕಸ್ಮಿನ್, ಕಯೋಃ, ಕೇಷು ॥

**ವಿಶೇಷ :-** ೧ ಕಿಮ್, ಕೇ, ಕಾನಿ - ಎಂದು ನಪುಂಸಕದ ೧, ಮತ್ತು ೨ನೆಯ ವಿಭಕ್ತಿರೂಪಗಳು. ಮಿಕ್ಕವು ಪುಲ್ಲಿಂಗದಂತೆ.

೨ ತದ್ ಶಬ್ದವನ್ನು ಪುಲ್ಲಿಂಗದಲ್ಲಿ ಸಃ, ತೌ, ತೇ । ೨ ತಮ್, ತೌ, ತಾನ್, ೩ ತೇನ, ತಾಭ್ಯಾಮ್, ತೈಃ- ಎಂದು ಮುಂತಾಗಿ ಕಿಮ್ ಶಬ್ದವನ್ನನುಸರಿಸಿ ನಡೆಯಿಸಬೇಕು.

## ೧೯. ಮಕಾರಾನ್ತಃ ಸ್ತ್ರೀಲಿಙ್ಗಃ ಕಿಮ್ ಶಬ್ದಃ (ಯಾವಳು ?)

೧ ಕಾ, ಕೇ, ಕಾಃ । ೨ ಕಾಮ್, ಕೇ, ಕಾಃ । ಇತ್ಯಾದಿ ॥

**ವಿಶೇಷ :** ಇದನ್ನು ಸರ್ವಾಶಬ್ದದಂತೆ ಸುಲಭವಾಗಿ ನಡೆಯಿಸಬಹುದು. ಇದರಂತೆ ತದ್‌ಶಬ್ದಃ ಸಾ, ತೇ, ತಾಃ । ತಾಮ್, ತೇ, ತಾಃ । ಇತ್ಯಾದಿ.

## ೨೦. ದಕಾರಾನ್ತಃ ಪುಲ್ಲಿಙ್ಗಃ 'ಅಸ್ಮದ್ ಶಬ್ದಃ' (ನಾನು)

೧ ಅಹಮ್, ಆವಾಮ್, ವಯಮ್ । ೨ ಮಾಮ್-ಮಾ, ಆವಾಮ್, - ನೌ, ಅಸ್ಮಾನ್- ನಃ । ೩ ಮಯಾ, ಅವಾಭ್ಯಾಮ್, ಅಸ್ಮಾಭಿಃ । ೪ ಮಹ್ಯಮ್- ಮೇ, ಅವಾಭ್ಯಾಮ್-ನೌ, ಅಸ್ಮಭ್ಯಮ್,-ನಃ । ೫ ಮತ್, ಅವಾಭ್ಯಾಮ್, ಅಸ್ಮತ್, । ೬ ಮಮ-ಮೇ, ಅವಯೋಃ-ನೌ ಅಸ್ಮಾಕಮ್-ನಃ । ೭ ಮಯಿ, ಅವಯೋಃ ಅಸ್ಮಾಸು ॥

## ೨೧. ದಕಾರಾನ್ತಃ ಪುಲ್ಲಿಙ್ಗಃ 'ಯುಷ್ಮದ್' ಶಬ್ದಃ (ನೀನು)

೧ ತ್ವಮ್, ಯುವಾಮ್, ಯೂಯಮ್ । ೨ ತ್ವಾಮ್-ತ್ವಾ, ಯುವಾಮ್-ವಾಮ್, ಯುಷ್ಮಾನ್-ವಃ । ೩ ತ್ವಯಾ, ಯುವಾಭ್ಯಾಮ್, ಯುಷ್ಮಾಭಿಃ। ೪. ತುಭ್ಯಮ್- ತೇ, ಯುವಾಭ್ಯಾಮ್-ವಾಮ್, ಯುಷ್ಮಭ್ಯಮ್-ವಃ । ೫. ತ್ವತ್, ಯುವಾಭ್ಯಾಮ್, ಯುಷ್ಮತ್ । ೬. ತವ-ತೇ, ಯುವಯೋಃ-ವಾಮ್, ಯುಷ್ಮಾಕಮ್- ವಃ । ೭. ತ್ವಯಿ, ಯುವಯೋಃ, ಯುಷ್ಮಾಸು ॥

**ವಿಶೇಷ :-** ಅಸ್ಮದ್, ಯುಷ್ಮದ್- ಈ ಶಬ್ದಗಳಿಗೆ ಮೂರು ಲಿಂಗದಲ್ಲಿಯೂ ಒಂದೇ ವಿಧವಾದ ರೂಪ.

## ೨೨. ಮಕಾರಾನ್ತಃ ಪುಲ್ಲಿಙ್ಗಃ ಇದಮ್ ಶಬ್ದಃ (ಇವನು)

೧ ಅಯಮ್, ಇಮೌ, ಇಮೇ । ೨ ಇಮಮ್ - ಏನಮ್, ಇಮೌ-ಏನೌ, ಇಮಾನ್-ಏನಾನ್, । ೩ ಅನೇನ-ಏನೇನ, ಆಭ್ಯಾಮ್, ಏಭಿಃ । ೪ ಅಸ್ಮೈ, ಆಭ್ಯಾಮ್, ಏಭ್ಯಃ । ೫ ಅಸ್ಮಾತ್, ಆಭ್ಯಾಮ್, ಏಭ್ಯಃ । ೬ ಅಸ್ಯ, ಅನಯೋಃ-ಏನಯೋಃ, ಏಷಾಮ್ । ೭ ಅಸ್ಮಿನ್, ಅನಯೋಃ-ಏನಯೋಃ, ಏಷು ॥

## ೨೩. ಮಕಾರಾನ್ತಃ ಸ್ತ್ರೀಲಿಙ್ಗಃ ಇದಮ್ ಶಬ್ದಃ (ಇವಳು)

೧ ಇಯಮ್, ಇಮೇ, ಇಮಾಃ । ೨ ಇಮಾಮ್ - ಏನಾಮ್, ಇಮೇ-ಏನೇ, ಇಮಾಃ-ಏನಾಃ । ೩ ಅನಯಾ-ಏನಯಾ, ಆಭ್ಯಾಮ್, ಅಭಿಃ । ೪ ಅಸ್ಯೈ, ಆಭ್ಯಾಮ್, ಅಭ್ಯಃ । ೫ ಅಸ್ಯಾಃ, ಆಭ್ಯಾಮ್, ಅಭ್ಯಃ । ೬ ಅಸ್ಯಾಃ, ಅನಯೋಃ- ಏನಯೋಃ, ಆಸಾಮ್ । ೭ ಅಸ್ಯಾಮ್, ಅನಯೋಃ - ಏನಯೋಃ ಆಸು ॥

**ವಿಶೇಷ :** ಇದಮ್ ಶಬ್ದಕ್ಕೆ ನಪುಂಸಕದಲ್ಲಿ ೧ ಮತ್ತು ೨ ಇದಮ್, ಇಮೇ, ಇಮಾನಿ । ಮಿಕ್ಕ ರೂಪಗಳು ಪುಲ್ಲಿಂಗದಂತೆ.

## ೨೪. ದಕಾರಾನ್ತಃ ಪುಲ್ಲಿಙ್ಗಃ ಏತಚ್ಛಬ್ದಃ (ಇವನು)

೧ ಏಷಃ, ಏತೌ, ಏತೇ । ೨ ಏತಮ್ - ಏನಮ್, ಏತೌ - ಏನೌ, ಏತಾನ್-ಏನಾನ್ । ೩ ಏತೇನ-ಏನೇನ, ಏತಾಭ್ಯಾಮ್, ಏತೈಃ । ೪ ಏತಸ್ಮೈ, ಏತಾಭ್ಯಾಮ್, ಏತೇಭ್ಯಃ । ೫ ಏತಸ್ಮಾತ್, ಏತಾಭ್ಯಾಮ್, ಏತೇಭ್ಯಃ । ೬ ಏತಸ್ಯ, ಏತಯೋಃ, ಏನಯೋಃ, ಏತೇಷಾಮ್. ೭ ಏತಸ್ಮಿನ್ ಏತಯೋಃ - ಏನಯೋಃ, ಏತೇಷು ॥

**ವಿಶೇಷ :** ೧ ಇದಮ್ ಶಬ್ದವೂ ಏತದ್ ಶಬ್ದವೂ ದ್ವಿತೀಯಾವಿಭಕ್ತಿ, ತೃತೀಯೈಕ ವಚನ, ಷಷ್ಠೀ ಸಪ್ತಮೀ ದ್ವಿವಚನ - ಇವುಗಳಲ್ಲಿ 'ಏನ' ಎಂಬ ಮತ್ತೊಂದು ರೂಪವನ್ನು ಪಡೆಯುವವಷ್ಟೆ; ಒಂದು ಸಲ ಈ ಶಬ್ದಗಳನ್ನುಪಯೋಗಿಸಿ ಏನಾದರೂ ಹೇಳಿದಮೇಲೆ ಮತ್ತೆ ಅದರ ವಿಷಯದಲ್ಲಿಯೇ ಮತ್ತೊಂದು ವಿಷಯವನ್ನು ಹೇಳಬೇಕಾದಾಗ ಈ ಎರಡನೆಯ ರೂಪವನ್ನುಪಯೋಗಿಸುವರು. ಉದಾ : ೧. ವಿಶ್ವಾಮಿತ್ರಃ ತಯೋರ್ಧನುರ್ವಿದ್ಯಾಂ ಅಶಿಕ್ಷಯತ್, ಏನಯೋರ್ಧನುರ್ದರ್ಶಯ ॥

೨. ಸ್ತ್ರೀಲಿಂಗದಲ್ಲಿ : ೧ ಏಷಾ, ಏತೇ, ಏತಾಃ । ೨ ಏತಾಮ್-ಏನಾಮ್, ಏತೇ-ಏನೇ, ಏತಾಃ-ಏನಾಃ । ಏತಯಾ-ಏನಯಾ ಇತ್ಯಾದಿ ॥ ನಪುಂಸಕದಲ್ಲಿ : ೧ ಏತತ್, ಏತೇ, ಏತಾನಿ । ಏತತ್-ಏನತ್, ಏತೇ, ಏನೇ, ಏತಾನಿ-ಏನಾನಿ । ಏತೇನ-ಏನೇನ ಇತ್ಯಾದಿ ಸರ್ವಶಬ್ದದಂತೆ. ಸ್ತ್ರೀಲಿಂಗದಲ್ಲಿಯೂ ನಪುಂಸಕಲಿಂಗದಲ್ಲಿಯೂ ಷಷ್ಠೀ-ಸಪ್ತಮೀ ದ್ವಿವಚನದಲ್ಲಿ ಪುಲ್ಲಿಂಗದಂತೆ ಏತಯೋಃ - ಏನಯೋಃ ಎಂದು ವಿಶೇಷ. ಈ ಶಬ್ದಗಳಲ್ಲಿಯೂ ಎರಡನೆಯ ರೂಪವಿರುವದೆಂಬುದನ್ನು ಮರೆಯ ಬಾರದು. ಉದಾ : ಅನೇನ ನಾಸ್ತಿ ಕಿಮಪಿ ಪ್ರಯೋಜನಮ್, ಏನತ್ ದೂರಮ್ ಅಪನಯ । ಅನಯಾ ಬಾಲೋ ಹತಃ, ಏನಾಂ ರಾಜಾ ದಣ್ಡಯತಿ ॥

## ೨೫. ಸಕಾರಾನ್ತಃ ಪುಲ್ಲಿಙ್ಗಃ ಅದಸ್ ಶಬ್ದಃ (ಅವನು, ಇವನು)

೧ ಅಸೌ, ಅಮೂ, ಅಮೀ । ೨ ಅಮುಮ್, ಅಮೂ, ಅಮೂನ್ । ೩ ಅಮುನಾ, ಅಮೂಭ್ಯಾಮ್ ಅಮೀಭಿಃ । ೪ ಅಮುಷ್ಮೈ, ಅಮೂಭ್ಯಾಮ್, ಅಮೀಭ್ಯಃ। ೫ ಅಮುಷ್ಮಾತ್, ಅಮೂಭ್ಯಾಮ್, ಅಮೀಭ್ಯಃ । ೬. `ಅಮುಷ್ಯ ಅಮುಯೋಃ ಅಮೀಷಾಮ್ । ೭ ಅಮುಷ್ಮಿನ್, ಅಮುಯೋಃ, ಅಮೀಷು ॥

**ವಿಶೇಷ :-** ನಪುಂಸಕಲಿಂಗದಲ್ಲಿ ೧ ಮತ್ತು ೨ ಅದಃ, ಅಮೂ, ಅಮೂನಿ । ಉಳಿದದ್ದು ಪುಲ್ಲಿಂಗದಂತೆ.

## ೨೬. ಸಕಾರಾನ್ತಃ ಸ್ತ್ರೀಲಿಙ್ಗಃ ಅದಸ್ ಶಬ್ದಃ (ಅವಳು, ಇವಳು)

೧ ಅಸೌ, ಅಮೂ, ಅಮೂಃ । ೨ಅಮೂಮ್, ಅಮೂ, ಅಮೂಃ । ೩ ಅಮುಯಾ, ಅಮೂಭ್ಯಾಮ್, ಅಮೂಭಿಃ । ೪ ಅಮುಷ್ಯೈ, ಅಮೂಭ್ಯಾಮ್, ಅಮೂಭ್ಯಃ । ೫ ಅಮುಷ್ಯಾಃ, ಅಮೂಭ್ಯಾಮ್, ಅಮೂಭ್ಯಃ । ೬ ಅಮುಷ್ಯಾಃ, ಅಮುಯೋಃ, ಅಮೂಷಾಮ್ । ೭ ಅಮುಷ್ಯಾಮ್, ಅಮುಯೋಃ, ಅಮೂಷು ॥

## ಸರ್ವನಾಮಗಳ ಪ್ರಯೋಗ

**ವಿಶೇಷ :-** ೧. ಸರ್ವ, ತದ್, ಏತದ್, ಇದಮ್, ಅದಸ್, ಕಿಮ್- ಈ ಶಬ್ದಗಳನ್ನು ಯಾವ ಶಬ್ದಕ್ಕೆ ಹೊಂದಿಸಿ ಉಪಯೋಗಿಸುತ್ತೇವೋ ಅದರಂತೆ ಅವುಗಳ ಲಿಂಗವಿರುವದು. ಉದಾ : ಸರ್ವೇ, ವೃಕ್ಷಾಃ, ಸರ್ವಾ ಲೇಖಿನ್ಯಃ, ಸರ್ವಾಣಿ ಫಲಾನಿ ; ಕಾ ಪಾಠಶಾಲಾ ? ಸಾ ಬಾಲಿಕಾ, ಏತಾನಿ ಫಲಕಾನಿ, ಇದಂ ಭ್ರಮರಕಮ್, ಇಯಂ ಮಹಿಷೀ, ಅಯಂ ಕನ್ದುಕಃ, ಅಮೂಯಷ್ಟಯಃ, ಅಮೀ ಛಾತ್ರಾಃ, ಕಿಮಿದಮ್ ? ಅದಃ ಪತ್ರಮ್ - ಇತ್ಯಾದಿ. ಆಯಾ ಸಂದರ್ಭದಲ್ಲಿ ಕನ್ನಡಭಾಷೆಯ ಮರ್ಯಾದೆಗೆ ತಕ್ಕಂತೆ ಇವುಗಳನ್ನು ಕನ್ನಡಿಸಬೇಕು.

೨. ''ಇದಮಸ್ತು ಸನ್ನಿಕೃಷ್ಟಂ ಸಮೀಪತರವರ್ತಿ ಚೈತದೋ ರೂಪಮ್ । ಅದಸಸ್ತು ವಿಪ್ರಕೃಷ್ಟಂ ತದಿತಿ ಪರೋಕ್ಷೇ ವಿಜಾನೀಯಾತ್ ।'' ಹತ್ತಿರವಿರುವದನ್ನು ತೋರಿಸುವದಕ್ಕೆ ಇದಮ್- ಶಬ್ದವನ್ನೂ ಇನ್ನೂ ಹತ್ತಿರವಿರುವದನ್ನು ತೋರಿಸುವದಕ್ಕೆ ಏತದ್- ಶಬ್ದವನ್ನೂ ದೂರವಿರುವದನ್ನು ತೋರಿಸುವದಕ್ಕೆ ಅದಸ್-ಶಬ್ದವನ್ನೂ ಪರೋಕ್ಷವಾಗಿರುವದನ್ನು ತಿಳಿಯಿಸುವದಕ್ಕೆ ತದ್-ಶಬ್ದವನ್ನು ಉಪಯೋಗಿಸಬೇಕು.

೩. ಅದಸ್-ಶಬ್ದವನ್ನು ತೋರಿಸುವದಕ್ಕೆ ಉಪಯೋಗಿಸುವಾಗ ಅದು ಎಂಬ ಶಬ್ದದಿಂದಲೂ ಮಿಕ್ಕ ಕಡೆಗಳಲ್ಲಿ ಇದು ಎಂಬ ಶಬ್ದದಿಂದಲೂ ಕನ್ನಡಿಸಬೇಕು.

# ಸಂಖ್ಯಾವಾಚಕಗಳ ವಿಭಕ್ತಿಮಾಲೆ

## ಪುಲ್ಲಿಂಗ

| ೧ | ೨ | ೩ | ೪ | ೫ | ೬ | ೭ |
|---|---|---|---|---|---|---|
| ಏಕಃ | ಏಕಮ್ | ಏಕೇನ | ಏಕಸ್ಮೈ | ಏಕಸ್ಮಾತ್ | ಏಕಸ್ಯ | ಏಕಸ್ಮಿನ್ |
| ದ್ವೌ | ದ್ವೌ | ದ್ವಾಭ್ಯಾಮ್ | ದ್ವಾಭ್ಯಾಮ್ | ದ್ವಾಭ್ಯಾಮ್ | ದ್ವಯೋಃ | ದ್ವಯೋಃ |
| ತ್ರಯಃ | ತ್ರೀನ್ | ತ್ರಿಭಿಃ | ತ್ರಿಭ್ಯಃ | ತ್ರಿಭ್ಯಃ | ತ್ರಯಾಣಾಮ್ | ತ್ರಿಷು |
| ಚತ್ವಾರಃ | ಚತುರಃ | ಚತುರ್ಭಿಃ | ಚತುರ್ಭ್ಯಃ | ಚತುರ್ಭ್ಯಃ | ಚತುರ್ಣಾಮ್ | ಚತುರ್ಷು |

## ಸ್ತ್ರೀಲಿಂಗ

| | | | | | | |
|---|---|---|---|---|---|---|
| ಏಕಾ | ಏಕಾಮ್ | ಏಕಯಾ | ಏಕಸ್ಯೈ | ಏಕಸ್ಯಾಃ | ಏಕಸ್ಯಾಃ | ಏಕಸ್ಯಾಮ್ |
| ದ್ವೇ | ದ್ವೇ | ದ್ವಾಭ್ಯಾಮ್ | ದ್ವಾಭ್ಯಾಮ್ | ದ್ವಾಭ್ಯಾಮ್ | ದ್ವಯೋಃ | ದ್ವಯೋಃ |
| ತಿಸ್ರಃ | ತಿಸ್ರಃ | ತಿಸೃಭಿಃ | ತಿಸೃಭ್ಯಃ | ತಿಸೃಭ್ಯಃ | ತಿಸೃಣಾಮ್ | ತಿಸೃಷು |
| ಚತಸ್ರಃ | ಚತಸ್ರಃ | ಚತಸೃಭಿಃ | ಚತಸೃಭ್ಯಃ | ಚತಸೃಭ್ಯಃ | ಚತಸೃಣಾಮ್ | ಚತಸೃಷು |

## ನಪುಂಸಕಲಿಂಗ

೧ ಮತ್ತು ೨ ಏಕಮ್, ದ್ವೇ, ತ್ರೀಣಿ, ಚತ್ವಾರಿ ; ಮಿಕ್ಕದ್ದೆಲ್ಲ ಪುಲ್ಲಿಂಗದಂತೆ.

## ತ್ರಿಲಿಂಗ

| | | | | | | |
|---|---|---|---|---|---|---|
| ಪಞ್ಚ | ಪಞ್ಚ | ಪಞ್ಚಭಿಃ | ಪಞ್ಚಭ್ಯಃ | ಪಞ್ಚಭ್ಯಃ | ಪಞ್ಚಾನಾಮ್ | ಪಞ್ಚಸು |
| ಷಟ್ | ಷಟ್ | ಷಡ್ಭಿಃ | ಷಡ್ಭ್ಯಃ | ಷಡ್ಭ್ಯಃ | ಷಣ್ಣಾಮ್ | ಷಟ್ಸು |
| ಅಷ್ಟ<br>ಅಷ್ಟೌ ) | ಅಷ್ಟ<br>ಅಷ್ಟೌ ) | ಅಷ್ಟಭಿಃ<br>ಅಷ್ಟಾಭಿಃ ) | ಅಷ್ಟಭ್ಯಃ<br>ಅಷ್ಟಾಭ್ಯಃ ) | ಅಷ್ಟಭ್ಯಃ<br>ಅಷ್ಟಾಭ್ಯಃ ) | ಅಷ್ಟಾನಾಮ್ | ಅಷ್ಟಸು<br>ಅಷ್ಟಾಸು ) |

ವಿಶೇಷ :- ನವ, ದಶ- ಇವುಗಳನ್ನು ಪಞ್ಚ ಎಂಬುದರಂತೆ ನಡೆಸಬೇಕು.

# ಕ್ರಿಯಾಪದದ ರೂಪಾವಳಿ

## ವರ್ತಮಾನಕಾಲ

| | |
|---|---|
| ೧ ಪಠತಿ - ಓದುತ್ತಾನೆ | ವರ್ತತೇ - ಇರುತ್ತಾನೆ |
| ಪಠತಃ - (ಇಬ್ಬರು) ಓದುತ್ತಾರೆ | ವರ್ತೇತೇ-(ಇಬ್ಬರು) ಇರುತ್ತಾರೆ |
| ಪಠನ್ತಿ - ಓದುತ್ತಾರೆ | ವರ್ತನ್ತೇ-ಇರುತ್ತಾರೆ |
| ೨ ಪಠಸಿ - ಓದುತ್ತೀಯೆ | ವರ್ತಸೇ-ಇರುತ್ತೀಯೆ |
| ಪಠಥಃ -(ಇಬ್ಬರು) ಓದುತ್ತೀರಿ | ವರ್ತೇಥೇ-(ಇಬ್ಬರು) ಇದ್ದೀರಿ |
| ಪಠಥ-ಓದುತ್ತೀರಿ | ವರ್ತಧ್ವೇ-ಇರುತ್ತೀರಿ |
| ೩ ಪಠಾಮಿ-ಓದುತ್ತೇನೆ | ವರ್ತೇ-ಇರುತ್ತೇನೆ |
| ಪಠಾವಃ -(ಇಬ್ಬರು) ಓದುತ್ತೇವೆ | ವರ್ತಾವಹೇ - (ಇಬ್ಬರು) ಇರುತ್ತೇವೆ |
| ಪಠಾಮಃ - ಓದುತ್ತೇವೆ | ವರ್ತಾಮಹೇ - ಇರುತ್ತೇವೆ. |

**ವಿಶೇಷ :** ೧. ಕ್ರಿಯಾಪದಗಳಿಗೆ ಲಿಂಗವಿಲ್ಲ. ಸಂದರ್ಭಾನುಸಾರ ಆಯಾ ಲಿಂಗದಲ್ಲಿ ಕನ್ನಡಿಸಿಕೊಳ್ಳಬೇಕಾಗುವದು. ಉದಾ : ಬಾಲಕಃ ಪಠತಿ-ಹುಡುಗನು ಓದುತ್ತಾನೆ. ಬಾಲಿಕಾ ಪಠತಿ - ಹುಡುಗಿ ಓದುತ್ತಾಳೆ. ಪರ್ಣಂ ಪತತಿ- ಎಲೆ ಬೀಳುತ್ತದೆ.

೨. ಕೆಲವು ಕ್ರಿಯಾಪದಗಳಿಗೆ ಪರಸ್ಮೈಪದಪ್ರತ್ಯಯಗಳೇ ಹತ್ತಿರುವವು. ಇನ್ನು ಕೆಲವಕ್ಕೆ ಆತ್ಮನೇಪದಪ್ರತ್ಯಯಗಳೇ ಹತ್ತಿರುತ್ತವೆ. ಇವುಗಳನ್ನು ಮುಂದೆ ಶಬ್ದಕೋಶದಲ್ಲಿ ವಿಂಗಡಿಸಿ ಬರೆದಿರುತ್ತದೆ. ಕರ್ಮಣಿಪ್ರಯೋಗದಲ್ಲಿ ಆತ್ಮನೇ ಪದವೇ ಇರುವದು. ಉದಾ : ಪಠ್ಯತೇ- ಓದಲ್ಪಡುತ್ತದೆ.

೩. ಪ್ರಥಮ, ಮಧ್ಯಮ, ಉತ್ತಮಪುರುಷಗಳನ್ನು ೧, ೨, ೩, ಈ ಸಂಖ್ಯೆಗಳಿಂದ ಕ್ರಮವಾಗಿ ತೋರಿಸಿರುತ್ತದೆ. ಒಂದೊಂದು ಪುರುಷದ ಏಕವಚನ, ದ್ವಿವಚನ, ಬಹುವಚನಗಳನ್ನು ಕ್ರಮವಾಗಿ ಬರೆದಿರುತ್ತದೆ. ಇದರಂತೆ ಮುಂದೆಯೂ ತಿಳಿದುಕೊಳ್ಳಬೇಕು.

೪. ಈ ವರ್ತಮಾನಪ್ರತ್ಯಯವನ್ನು ಕನ್ನಡಿಸುವಾಗ ಕೆಲವುವೇಳೆ ಬೇರೆ ರೂಪಗಳನ್ನು ಉಪಯೋಗಿಸಬೇಕಾಗುವದು. ಉದಾ : ರಾಮ ಉಪವಿಶತಿ- ರಾಮನು ಕೂತುಕೊಂಡಿದ್ದಾನೆ. ಇದಾನೀಮ್ ಅಶ್ವೋ ಧಾವತಿ - ಈಗ ಕುದುರೆ ಓಡುತ್ತಿದೆ. ಸಹೈವ ಗಚ್ಛಾಮಃ - ಜೊತೆಯಲ್ಲಿಯೇ ಹೋಗೋಣ.

## ಭವಿಷ್ಯತ್ಕಾಲ

| | | |
|---|---|---|
| ೧ | ಲೇಖಿಷ್ಯತಿ - ಬರೆಯುವನು | ಯತಿಷ್ಯತೇ - ಯತ್ನಮಾಡುವನು |
| | ಲೇಖಿಷ್ಯತಃ - (ಇಬ್ಬರು) ಬರೆಯುವರು | ಯತಿಷ್ಯೇತೇ- (ಇಬ್ಬರು) ಯತ್ನಿಸುವರು |
| | ಲೇಖಿಷ್ಯನ್ತಿ - ಬರೆಯುವರು | ಯತಿಷ್ಯನ್ತೇ - ಯತ್ನಿಸುವರು |
| ೨ | ಲೇಖಿಷ್ಯಸಿ - ಬರೆಯುವೆ | ಯತಿಷ್ಯಸೇ - ಯತ್ನಿಸುವೆ |
| | ಲೇಖಿಷ್ಯಥಃ (ಇಬ್ಬರು) ಬರೆಯುವಿರಿ | ಯತಿಷ್ಯೇಥೇ (ಇಬ್ಬರು) ಯತ್ನಿಸುವಿರಿ |
| | ಲೇಖಿಷ್ಯಥ - ಬರೆಯುವಿರಿ | ಯತಿಷ್ಯಧ್ವೇ- ಯತ್ನಿಸುವಿರಿ |
| ೩ | ಲೇಖಿಷ್ಯಾಮಿ - ಬರೆಯುವೆನು | ಯತಿಷ್ಯೇ-ಯತ್ನಿಸುವೆನು |
| | ಲೇಖಿಷ್ಯಾವಃ (ಇಬ್ಬರು) ಬರೆಯುವೆವು | ಯತಿಷ್ಯಾವಹೇ - (ಇಬ್ಬರು) ಯತ್ನಿಸುವೆವು |
| | ಲೇಖಿಷ್ಯಾಮಃ - ಬರೆಯುವೆವು | ಯತಿಷ್ಯಾಮಹೇ - ಯತ್ನಿಸುವೆವು |

ವಿಶೇಷ : ೧. ಭವಿಷ್ಯತ್ಕಾಲದ ಕ್ರಿಯಾಪದಗಳನ್ನು ವರ್ತಮಾನಕ್ರಿಯೆಗಳಂತೆಯೇ ಅರ್ಥಕ್ಕನುಸಾರವಾಗಿ ಬೇರೆಬೇರೆ ರೂಪದ ಮಾತುಗಳಿಂದ ಕನ್ನಡಿಸಬೇಕಾಗುವದು. ಉದಾ : ಕಿಂ ಪೃಥುಕಾನ್ ದಾಸ್ಯಾಮಿ, ಕಿಂ ವಾ ಲಾಜಾನ್ ದಾಸ್ಯಾಮಿ?- ಅವಲಕ್ಕಿಯನ್ನು ಕೊಡಲೊ, ಅಥವಾ ಅರಳನ್ನು ಕೊಡಲೊ, ? ಶ್ವೋ ಗಮಿಷ್ಯಾಮಃ - ನಾಳೆ ಹೋಗೋಣ.

## ಭೂತಕಾಲ

| | | |
|---|---|---|
| | ಅಯಚ್ಛತ್-ಕೊಟ್ಟನು | ಅಜಾಯತ-ಹುಟ್ಟಿದನು |
| | ಅಯಚ್ಛತಾಮ್ -(ಇಬ್ಬರು) ಕೊಟ್ಟರು | ಅಜಾಯೇತಾಮ್ -(ಇಬ್ಬರು) ಹುಟ್ಟಿದರು |
| | ಅಯಚ್ಛನ್-ಕೊಟ್ಟರು | ಅಜಾಯನ್ತ- ಹುಟ್ಟಿದರು |
| ೨. | ಅಯಚ್ಛಃ - ಕೊಟ್ಟೆ | ಅಜಾಯಥಾಃ - ಹುಟ್ಟಿದೆ |
| | ಅಯಚ್ಛತಮ್ -(ಇಬ್ಬರು) ಕೊಟ್ಟಿರಿ | ಅಜಾಯೇಥಾಮ್-(ಇಬ್ಬರು) ಹುಟ್ಟಿದಿರಿ |
| | ಅಯಚ್ಛತ-ಕೊಟ್ಟಿರಿ | ಅಜಾಯಧ್ವಮ್-ಹುಟ್ಟಿದಿರಿ |
| ೩. | ಅಯಚ್ಛಮ್-ಕೊಟ್ಟೆನು | ಅಜಾಯೇ-ಹುಟ್ಟಿದೆನು |
| | ಅಯಚ್ಛಾವ-(ಇಬ್ಬರು)ಕೊಟ್ಟೆವು | ಅಜಾಯಾವಹಿ - (ಇಬ್ಬರು) ಹುಟ್ಟಿದೆವು |
| | ಅಯಚ್ಛಾಮ-ಕೊಟ್ಟೆವು | ಅಜಾಯಾಮಹಿ - ಹುಟ್ಟಿದೆವು |

ವಿಶೇಷ :-೧. ಈ ರೂಪಕ್ಕೆ ಅನದ್ಯತನಭೂತ (ಇಂದಿನದಲ್ಲದ)ವೆಂದು ಹೆಸರು ; ಈಗ ನಡೆದ ಕ್ರಿಯೆಯನ್ನು ತಿಳಿಸುವದಕ್ಕೆ ಬೇರೆ ರೂಪಗಳನ್ನುಪಯೋಗಿಸುವರು. ಅನದ್ಯತನಭೂತದಲ್ಲಿರುವ 'ಅ' ಎಂಬುದಕ್ಕೆ ಅಧರ್ಮಃ, ಅಬ್ರಾಹ್ಮಣಃ-ಮುಂತಾದವುಗಳಂತೆ 'ಇಲ್ಲ, ಅಲ್ಲ' ಎಂಬ ನಿಷೇಧದ ಅರ್ಥವನ್ನು ಮಾಡಕೂಡದು.

ಭೂತಕಾಲದ ಅರ್ಥವನ್ನು ತಿಳಿಯುವದಕ್ಕೆ ಸಂಸ್ಕೃತದಲ್ಲಿ ಅನೇಕ ಮಾರ್ಗಗಳುಂಟು. ಉದಾ : ಶೋಭನಮ್ ಆಪತಿತಮ್ - ಒಳ್ಳೆಯದು ಆಯಿತು ; ಪ್ರವಹತಿ ಸ್ಮ- ಹರಿಯುತ್ತಿತ್ತು.

## ಆಜ್ಞಾರ್ಥ

| | |
|---|---|
| ೧ ಗಚ್ಛತು, ಗಚ್ಛತಾತ್ } ಹೋಗಲಿ | ಯತತಾಮ್ - ಯತ್ನಿಸಲಿ |
| ಗಚ್ಛತಾಮ್ - (ಇಬ್ಬರು) ಹೋಗಲಿ | ಯತೇತಾಮ್ - (ಇಬ್ಬರು) ಯತ್ನಿಸಲಿ |
| ಗಚ್ಛನ್ತು - ಹೋಗಲಿ | ಯತನ್ತಾಮ್ - ಯತ್ನಿಸಲಿ |
| ೨ ಗಚ್ಛ, ಗಚ್ಛತಾತ್ } ಹೋಗು | ಯತಸ್ವ - ಯತ್ನಿಸು. |
| ಗಚ್ಛತಮ್-(ಇಬ್ಬರು) ಹೋಗಿರಿ | ಯತೇಥಾಮ್ -(ಇಬ್ಬರು) ಯತ್ನಿಸಿರಿ. |
| ಗಚ್ಛತ-ಹೋಗಿರಿ | ಯತಧ್ವಮ್ - ಯತ್ನಿಸಿರಿ. |
| ೩ ಗಚ್ಛಾನಿ - ಹೋಗಲಿ, ಹೋಗೋಣ | ಯತೈ-ಯತ್ನಿಸಲಿ, ಯತ್ನಿಸೋಣ. |
| ಗಚ್ಛಾವ - (ಇಬ್ಬರು) ಹೋಗೋಣ | ಯತಾವಹೈ-(ಇಬ್ಬರು) ಯತ್ನಿಸೋಣ. |
| ಗಚ್ಛಾಮ- ಹೋಗೋಣ | ಯತಾಮಹೈ-ಯತ್ನಿಸೋಣ. |

**ವಿಶೇಷ :-** ೧. ಈ ರೂಪಗಳನ್ನು ಅಪ್ಪಣೆ, ಬೇಡುವದು, ಹಾರೈಕೆ, ಗೌರವಕ್ಕಾಗಿ ಕೇಳುವದು, ಬುದ್ಧಿವಾದ-ಮುಂತಾದ ಅರ್ಥಗಳಲ್ಲಿ ಉಪಯೋಗಿಸುತ್ತಾರೆ. ಉದಾ : ರೇ ಮಾರ್ಜನ್ಯಾ ವಿತರ್ದಿಂ ಶೋಧಯ-ಎಲೊ, ಜಗಲಿಯನ್ನು ಪೊರಕೆಯಿಂದ ಗುಡಿಸು. ಆರ್ಯ, ಕಿಂ ಕರವಾಣಿ ?- ಅಯ್ಯ, ಏನುಮಾಡಲಿ ? ಸರ್ವೋ ಭದ್ರಾಣಿ ಪಶ್ಯತು - ಪ್ರತಿಯೊಬ್ಬನೂ ಸುಖಗಳನ್ನು ಕಾಣಲಿ. ಗರ್ವಂ ಮಾ ವಹ-ಗರ್ವವನ್ನು ಹೊಂದಬೇಡ.

೨. ಕರ್ಮಣಿಪ್ರಯೋಗದಲ್ಲಿ ಪ್ರಥಮಪುರುಷೈಕವಚನವನ್ನು ಗೌರವಕ್ಕಾಗಿ ಉಪಯೋಗಿಸುವದುಂಟು. ಉದಾ : ಭಗವನ್, ಶ್ರೂಯತಾಮ್- ಪೂಜ್ಯನೆ, ಕೇಳಲ್ಪಡಲಿ (ಕೇಳಬೇಕು) ; ಅಕರ್ಮಕಕ್ರಿಯೆಯನ್ನು ಹೀಗೆಯೇ ಗೌರವಕ್ಕೆ ಉಪಯೋಗಿಸುವರು. ಅದಕ್ಕೆ ಭಾವೇಪ್ರಯೋಗವೆಂದು ಹೆಸರು. ಉದಾ : ಅತ್ರೋಪವಿಶ್ಯತಾಮ್-ಇಲ್ಲಿ ಕೂತುಕೊಳ್ಳೋಣಾಗಲಿ.

---------

# ಕೆಲವು ಮುಖ್ಯಸಂಧಿಗಳು

ಸಂಸ್ಕೃತದಲ್ಲಿ ಪದಗಳು ಒಂದಕ್ಕೊಂದು ಸೇರುವಾಗ ಬೇರೆಬೇರೆ ಸಂಧಿ ಕಾರ್ಯಗಳಾಗುವವು. ಈ ಪುಸ್ತಕದಲ್ಲಿ ಬಂದಿರುವ ಸಂಧಿಗಳನ್ನೆಲ್ಲ ಟಿಪ್ಪಣಿಯಲ್ಲಿ ಬಿಡಿಸಿ ತೋರಿಸಿರುತ್ತದೆ. ಮುಖ್ಯವಾದ ಕೆಲವು ಸಂಧಿಗಳನ್ನು ವಿಂಗಡಿಸಿ ಈ ಕೆಳಗೆ ಕೊಡುತ್ತೇವೆ. ವಿದ್ಯಾರ್ಥಿಗಳು ಇಲ್ಲಿ ಕೊಟ್ಟಿರುವಂಥ ಬೇರೆ ಕೆಲವು ಉದಾಹರಣೆಗಳನ್ನು ಓದುವ ಪಾಠದಿಂದ ಹೇಳುವದನ್ನು ಕಲಿಯಬೇಕು.

ಸಂಧಿಗಳನ್ನು ತಿಳಿಯುವದಕ್ಕೆ ವರ್ಣಗಳನ್ನು ಹೀಗೆ ವಿಂಗಡಿಸಿಕೊಂಡಿರಬೇಕು.

ಸ್ವರಗಳು : ಅ, ಇ, ಉ, ಋ, ಇವು ಹ್ರಸ್ವ; ಆ, ಈ, ಊ, ೠ- ಇವು ದೀರ್ಘ.

ವ್ಯಂಜನಗಳು : ಕಖ, ಚಛ, ಟಠ, ತಥ, ಪಫ, ಶಷಸ - ಇವು ಕರ್ಕಶ : ಗಘ, ಜಝ, ಡಢ, ದಧ, ಬಭ, ಯ ರ ಲ ವ, ಹ, ಙ, ಞ, ಣ, ನ, ಮ - ಇವು ಮೃದು ; ಇವುಗಳಲ್ಲಿ ಕೊನೆಯ ಐದು ಅನುನಾಸಿಕ.

## ವಿಸರ್ಗ

(೧) ವಿಸರ್ಗದ ಹಿಂದೆ ಅಕಾರವಿದ್ದು ಮುಂದುಗಡೆ ಅಕಾರವು ಅಥವಾ ಮೃದುವ್ಯಂಜನವಿದ್ದರೆ :-

ಕಃ ಅಯಮ್ - ಕೋऽಯಮ್, ಏಕಃ ಗುಣೀ, ಏಕೋ ಗುಣೀ, ತತಃ ಘಟಃ- ತತೋ ಘಟಃ, ಯಃ ಜಾನಾತಿ - ಯೋ ಜಾನಾತಿ, ಈಶ್ವರಃ ದಯಾಲುಃ - ಈಶ್ವರೋ ದಯಾಲುಃ, ನಿತ್ಯಃ ಧರ್ಮಃ - ನಿತ್ಯೋ ಧರ್ಮಃ, ಜೀವಃ ನಿತ್ಯಃ - ಜೀವೋ ನಿತ್ಯಃ,. ಹೃಷ್ಟಃ ಬಭೂವ-ಹೃಷ್ಟೋ ಬಭೂವ, ಬಧಿರಃ ಭವತಿ - ಬಧಿರೋ ಭವತಿ, ತತಃ ಮೇ - ತತೋ ಮೇ, ವೃದ್ಧಃ ಯಾತಿ-ವೃದ್ಧೋ ಯಾತಿ, ಜನಕಃ ರಾಮಾಯ, ಜನಕೋ ರಾಮಾಯ, ರಾವಣಃ ಲಜ್ಜಾಕಮ್- ರಾವಣೋ ಲಜ್ಜಾಕಮ್, ತಮಃ ಹನ್ತಿ - ತಮೋ ಹನ್ತಿ ॥

(೨) ವಿಸರ್ಗದ ಹಿಂದೆ ಅಕಾರವಿದ್ದು ಮುಂದೆ ಅಕಾರದ ಹೊರತು ಬೇರೆ ಯಾವದಾದರೂ ಸ್ವರವಿದ್ದರೆ, ಅಥವಾ ವಿಸರ್ಗದ ಹಿಂದೆ ಆಕಾರವಿದ್ದು ಮುಂದೆ ಸ್ವರವಾಗಲಿ ಮೃದುವ್ಯಂಜನವಾಗಲಿ ಇದ್ದರೆ :-

ಉಷ್ಣಕಿರಣಃ ಇತಿ - ಉಷ್ಣಕಿರಣ ಇತಿ - ಯತಃ ಈಶ್ವರಃ - ಯತ ಈಶ್ವರಃ, ಚನ್ದ್ರಃ ಉದೇತಿ - ಚಂದ್ರ ಉದೇತಿ, ಇತಃ ಊರ್ಧ್ವಮ್ - ಇತ ಊರ್ಧ್ವಮ್, ವಿಶ್ವಾಮಿತ್ರಃ ಋಷಿಃ- ವಿಶ್ವಾಮಿತ್ರ ಋಷಿಃ ಇತಃ ಏಹಿ - ಇತ ಏಹಿ, ಪುತ್ರಃ ಐಶ್ವರ್ಯಮ್ - ಪುತ್ರ ಐಶ್ವರ್ಯಮ್, ಸೂದಃ ಓದನಮ್- ಸೂದ ಓದನಮ್, ಚನ್ದ್ರಃ ಔಷಧಮ್ - ಚನ್ದ್ರ ಔಷಧಮ್.

ಗವಾಕ್ಷಾಃ ಅಪಿ - ಗವಾಕ್ಷಾ ಅಪಿ, ಭಾರ್ಯಾಃ ಆಸನ್ - ಭಾರ್ಯಾ ಆಸನ್, ಬಾಲಾಃ ಇಚ್ಛನ್ತಿ - ಬಾಲಾ ಇಚ್ಛನ್ತಿ, ಛಾತ್ರಾಃ ಉತ್ತಿಷ್ಠನ್ತಿ, ಛಾತ್ರಾ ಉತ್ತಿಷ್ಠನ್ತಿ, ತಸ್ಯಾಃ ಊರುಃ - ತಸ್ಯಾ

ಊರುಃ, ಆಗತಾಃ ಋಷಯಃ- ಆಗತಾ ಋಷಯಃ, ಆಗತಾಃ ಏವ- ಆಗತಾ ಏವ, ಲಕ್ಷ್ಮ್ಯಾಃ ಐಶ್ವರ್ಯಮ್ - ಲಕ್ಷ್ಮ್ಯಾ ಐಶ್ವರ್ಯಮ್, ನದ್ಯಾಃ ಓಘಃ - ನದ್ಯಾ ಓಘಃ, ಪಟಾಃ ಔರ್ಣಾಃ- ಪಟಾ ಔರ್ಣಾಃ, ಮೇಘಾಃ ಗರ್ಜನ್ತಿ - ಮೇಘಾ ಗರ್ಜನ್ತಿ, ಮೇಘಾಃ, ಜಲೇನ-ಮೇಘಾ ಜಲೇನ, ಜನಾಃ ದರಿದ್ರಾಃ - ಜನಾ ದರಿದ್ರಾಃ, ಬಾಲಕಾಃ ಧಾವನ್ತಿ ಬಾಲಕಾ ಧಾವನ್ತಿ, ತಣ್ಡುಲಾಃ ನ - ತಣ್ಡುಲಾ ನ, ಭಾಗಾಃ ಭವನ್ತಿ, ಭಾಗಾ ಭವನ್ತಿ, ಪಙ್ಕಿಲಾಃ ಮಾರ್ಗಾಃ - ಪಙ್ಕಿಲಾ ಮಾರ್ಗಾಃ, ಪುತ್ರಾಃ ಯಾನ್ತಿ - ಪುತ್ರಾ ಯಾನ್ತಿ, ಸೇವಕಾಃ ರಕ್ಷನ್ತಿ - ಸೇವಕಾ ರಕ್ಷನ್ತಿ ಸೀತಾಯಾಃ ಲಕ್ಷಣಮ್ - ಸೀತಾಯಾ ಲಕ್ಷಣಂ, ನಿರ್ಮಿತಾಃ ವರ್ತನ್ತೇ - ನಿರ್ಮಿತಾ ವರ್ತನ್ತೇ ||

(೩) ವಿಸರ್ಗದ ಹಿಂದೆ ಅ-ಆಕಾರಗಳ ಹೊರತು ಬೇರೆ ಯಾವದಾದರೂ ಸ್ವರವಿದ್ದು ಮುಂದೆ ಸ್ವರವಾಗಲಿ ಮೃದುವ್ಯಂಜನವಾಗಲಿ ಬಂದರೆ :-

ವೃತ್ತಿಃ ಅಪಿ- ವೃತ್ತಿರಪಿ, ಪ್ರೀತಿಃ ಆಸೀತ್- ಪ್ರೀತಿರಾಸೀತ್, ಪಿತುಃ ಆದೇಶಃ- ಪಿತುರಾದೇಶಃ, ಚತುರ್ಭಿಃ ಈದೃಶೈಃ- ಚತುರ್ಭಿರೀದೃಶೈಃ, ಛಾತ್ರೈಃ ಅಪಿ - ಛಾತ್ರೈರಪಿ, ದೈತ್ಯಯೋಃ ಅನುಚರಃ- ದೈತ್ಯಯೋರನುಚರಃ ತಯೋಃ ಏಕಃ-ತಯೋರೇಕಃ.

(೪) ವಿಸರ್ಗದ ಮುಂದೆ ಚಛ, ಟಠ, ತಥಗಳು ಬಂದರೆ :-

ವಶ್ಯಃ ಚ - ವಶ್ಯಶ್ಚ, ಏಕಃ ಛಾತ್ರಃ - ಏಕಶ್ಛಾತ್ರಃ, ಹರೇಃ ಟೀಕಾ - ಹರೇಷ್ಟೀಕಾ, ಶ್ರುತಃ ಠಕಾರಃ - ಶ್ರುತಷ್ಠಕಾರಃ, ತಯೋಃ ತು - ತಯೋಸ್ತು, ಮಧೋಃ ಥೂತ್ಕಾರಃ ಮಧೋಸ್ಥೂತ್ಕಾರಃ ||

(೫) ವಿಸರ್ಗದ ಮುಂದೆ ಶ, ಷ, ಸಗಳು ಬಂದರೆ :-

ಅಶ್ವಃ ಶೀಘ್ರಮ್ - ಅಶ್ವಃ ಶೀಘ್ರಮ್ (ಅಥವಾ) ಅಶ್ವಶ್ಶೀಘ್ರಮ್, ಲೇಖಿನ್ಯಃ ಷಟ್- ಲೇಖಿನ್ಯಃ ಷಟ್ (ಅಥವಾ) ಲೇಖಿನ್ಯಷ್ಷಟ್, ಬಹಿಃ ಸಞ್ಚರತಿ - ಬಹಿಃ ಸಞ್ಚರತಿ (ಅಥವಾ) ಬಹಿಸ್ಸಞ್ಚರತಿ.

(೬) ಸಃ, ಏಷಃ- ಇವುಗಳ ಮುಂದೆ ಸ್ವರ ಅಥವಾ ವ್ಯಂಜನವು ಬಂದರೆ :- (ಯಾವಾಗಲೂ ವಿಸರ್ಗವು ಲೋಪ) ಸಃ ಏಕಾದಶವರ್ಷಃ - ಸ ಏಕಾದಶವರ್ಷಃ, ಸಃ ಆತ್ಮಾನಮ್ - ಸ ಆತ್ಮಾನಮ್

ಸಃ ಕಿಮಿತಿ - ಸ ಕಿಮಿತಿ, ಸಃ ಖಲು- ಸ ಖಲು, ಸಃ ಗಚ್ಛತಿ - ಸ ಗಚ್ಛತಿ, ಸಃ ಘಣ್ಟಾಮ್ - ಸ ಘಣ್ಟಾಮ್, ಸಃ ಚ- ಸ ಚ, ಸಃ ತು - ಸ ತು, ಸಃ ಸ್ವರ್ಗಮ್ - ಸ ಸ್ವರ್ಗಮ್, ಸಃ ಲಕ್ಷ್ಮಣಃ - ಸ ಲಕ್ಷ್ಮಣಃ ಸಃ ವಸೂನಿ-ಸ ವಸೂನಿ, ಸಃ ಹಿ- ಸ ಹಿ, ಏಷಃ ಗಚ್ಛತಿ - ಏಷ ಗಚ್ಛತಿ ಇತ್ಯಾದಿ.

## ಮಕಾರ

ಮಕಾರದ ಮುಂದೆ ಸ್ವರ ಬಂದರೆ :-

ಕಿಮ್ ಏವಮ್. - ಕಿಮೇವಮ್, ತಮ್ ಏವ - ತಮೇವ, ಅಯೋಧ್ಯಾಮ್ ಅಭ್ಯಾಗಚ್ಛತ್ - ಅಯೋಧ್ಯಾಮಭ್ಯಾಗಚ್ಛತ್, ತಾಮ್ ಆಹ್ವಯ-ತಾಮಾಹ್ವಯ.

ಶ ಷ ಸ ರ ಹಗಳು ಬಂದರೆ :-

ದ್ರಷ್ಟುಮ್ ಶಕ್ಯತೇ - ದ್ರಷ್ಟುಂ ಶಕ್ಯತೇ, ಇಯಮ್ ಸಂಸ್ಕೃತವಾಣೀ- ಇಯಂ ಸಂಸ್ಕೃತವಾಣೀ, ಏವಮ್ ಷಟ್- ಏವಂ ಷಟ್, ತಮ್ ರಾಜಾ, ತಂ ರಾಜಾ, ಇಯಮ್ ಹಸತಿ - ಇಯಂ ಹಸತಿ.

ಮಿಕ್ಕ ವ್ಯಂಜನಗಳು ಬಂದರೆ :-

ಅಹಮ್ ಕರೋಮಿ - ಅಹಂ ಕರೋಮಿ ಅಥವಾ ಅಹಙ್ಕರೋಮಿ. ಹೀಗೆ ಎರಡು ರೂಪಗಳಾಗಬಹುದು ; ಆದರೆ ರೂಢಿಯಲ್ಲಿ ಅದನ್ನು ಅನುಸ್ವಾರವಾಗಿಯೇ ಬರೆಯುವರು. ಉದಾ : ಅಹಂ ದಶವರ್ಷಃ ಪಠಿತುಂ ಲೇಖಿತುಂ ಸಂಭಾಷಿತುಂ ಚ, ಕಾವ್ಯಂ ಮಧುರಮ್, ಸುತಂ ಭರತಮೇವ, ಇತ್ಯಾದಿ.

## ಸ್ವರಗಳು

(೧) ಒಂದೇ ಬಗೆಯ ಸ್ವರಗಳು ಸೇರಿದರೆ :-

ನ ಅಸ್ತಿ - ನಾಸ್ತಿ, ಪೇಟಿಕಾ ಅಸ್ತಿ - ಪೇಟಿಕಾಸ್ತಿ, ತಸ್ಯ ಆಸನಮ್ - ತಸ್ಯಾಸನಮ್, ಯದಾ ಆಸೀತ್ - ಯದಾಸೀತ್ ; ಅತಿ ಇವ- ಅತೀವ, ಗೌರೀ ಇಯಮ್ - ಗೌರೀಯಮ್, ಅಸ್ತಿ ಈಶ್ವರಃ - ಅಸ್ತೀಶ್ವರಃ ; ಬಹು ಉಪಕರೋತಿ - ಬಹೂಪಕರೋತಿ.

(೨) ಅ-ಆಕಾರಗಳಿಗೆ ಇ ಈ, ಉಊ, ಋೠ, ಏಐ, ಓಔ ಗಳು ಮುಂದೆ ಬಂದರೆ

ಅತ್ರ ಇತಿ - ಅತ್ರೇತಿ, ಮಾತಾ ಇವ - ಮಾತೇವ, ಅತ್ರ ಈದೃಶಮ್ - ಅತ್ರೇದೃಶಮ್, ಯಥಾ ಈಶ್ವರಃ - ಯಥೇಶ್ವರಃ, ತೇನ ಉಕ್ತಮ್ - ತೇನೋಕ್ತಮ್, ತವ ಊರೂ, ತವೋರೂ, ಯಥಾ ಉಕ್ತಮ್ - ಯಥೋಕ್ತಮ್, ತಥಾ ಋಷಿಃ- ತಥರ್ಷಿಃ, ಮಾತಾ ಏವ - ಮಾತೈವ, ತವ ಏವ - ತವೈವ, ತವ ಐಶ್ವರ್ಯಮ್ - ತವೈಶ್ವರ್ಯಮ್, ಮಮ ಔಷಧಮ್ - ಮಮೌಷಧಮ್.

(೩) ಇಈ, ಉಊ, ಋೠ ಗಳಿಗೆ ಬೇರೆ ಜಾತಿಯ ಸ್ವರಗಳು ಮುಂದೆ ಬಂದರೆ :-

ಇತಿ ಅತ್ರ - ಇತ್ಯತ್ರ, ಪ್ರತಿ ಆಹ - ಪ್ರತ್ಯಾಹ, ಇತಿ ಏವ - ಇತ್ಯೇವ, ಇತಿ ಉಕ್ತಮ್- ಇತ್ಯುಕ್ತಮ್, ರಾಕ್ಷಸೀ ಅಪಿ - ರಾಕ್ಷಸ್ಯಪಿ, ಸರ್ವೇಷು ಅಪಿ- ಸರ್ವೇಷ್ವಪಿ, ವಸ್ತು ಅಸ್ತಿ - ವಸ್ತ್ವಸ್ತಿ, ವಸ್ತು ಇಹ - ವಸ್ತ್ವಿಹ, ವಸ್ತು ಏವ - ವಸ್ತ್ವೇವ, ಕರ್ತೃ ಅಸ್ತಿ - ಕರ್ತ್ರಸ್ತಿ.

# ಶಬ್ದಕೋಶ

ಇಲ್ಲಿ ಶಬ್ದಗಳನ್ನು ಅರ್ಥಾನುಸಾರ ವಿಂಗಡಿಸಿ ಕೊಟ್ಟಿರುತ್ತದೆ. ವಿದ್ಯಾರ್ಥಿಗಳು ತಾವೇ ರೂಪಾವಳಿಯ ಸಹಾಯದಿಂದ ರೂಪಗಳನ್ನು ಏರ್ಪಡಿಸಿಕೊಳ್ಳುವದಕ್ಕೆ ಆಗ ಬಹುದಾದ ಮಾತುಗಳಿಗೆ ಲಿಂಗವನ್ನೂ ಗುರುತುಮಾಡಿರುತ್ತದೆ. ಪು-ಪುಲ್ಲಿಂಗ, ಸ್ತ್ರೀ-ಸ್ತ್ರೀಲಿಂಗ, ನ-ನಪುಂಸಕಲಿಂಗ. ★ಈ ಗುರುತಿರುವ ಮಾತುಗಳನ್ನು ಬಹುವಚನದಲ್ಲಿ ಉಪಯೋಗಿಸುವದು ರೂಢಿಯಲ್ಲಿದೆ- ಎಂದು ತಿಳಿಯಬೇಕು.

## ನಾಮಪದಗಳು

೧

ಭೂಮಿಃ ಸ್ತ್ರೀ, ಭೂಮಿ, ನೆಲ
ಜಲಮ್ ನ. ನೀರು
ವಹ್ನಿಃ ಪು. ಬೆಂಕಿ
ವಾಯುಃ ಪು. ಗಾಳಿ
ಆಕಾಶಮ್ ನ. ಆಕಾಶ

೨

ಶರೀರಮ್ ನ. ಶರೀರ
ಗಾತ್ರಮ್ ನ. ''
ಪ್ರಾಣಃ★ ಪು. ಉಸಿರು, ಪ್ರಾಣ
ಅಙ್ಗಾನಿ ನ. ಅವಯವಗಳು
ಶಿರಃಕಮ್ಪನಮ್ ನ. ತಲೆ ಅಲ್ಲಾಡಿಸುವಿಕೆ
ಶಿರಃ ನ. ತಲೆ
ಕಬನ್ಧಃ ಪು. ಮುಂಡ
ನೇತ್ರಮ್ ನ. ಕಣ್ಣು
ಚಕ್ಷುಷೀ ನ. ಕಣ್ಣುಗಳು
ಶ್ರೋತ್ರಮ್ ನ. ಕಿವಿ
ನಾಸಿಕಾ ಸ್ತ್ರೀ. ಮೂಗು
ವಕ್ತ್ರಮ್ ನ. ಬಾಯಿ
ದನ್ತಃ ಪು. ಹಲ್ಲು
ಜಿಹ್ವಾ ಸ್ತ್ರೀ. ನಾಲಗೆ
ಮುಖಮ್ ನ. ಬಾಯಿ, ಮುಖ

೩

ಸಂಧಿಃ ಪು. ಕೂಡಿರುವ ಸ್ಥಳ
ಗ್ರೀವಾ ಸ್ತ್ರೀ. ಕತ್ತು
ವಕ್ಷಃ - ನ. ಎದೆ
ಉದರಮ್ ನ. ಹೊಟ್ಟೆ
ಪಾರ್ಶ್ವಃ ಪು. ಪಕ್ಕೆ
ಪೃಷ್ಠಮ್ ನ. ಬೆನ್ನು
ಪಾಣಿಃ ಪು. ಕೈ
ಪಾದಃ ಪು. ಕಾಲು
ಸ್ಕನ್ಧಃ ಪು. ಹೆಗಲು
ಭುಜಃ ಪು. ತೋಳು
ಪ್ರಗಣ್ಡಃ ಪು. ರಟ್ಟೆ
ಪ್ರಕೋಷ್ಠಃ ಪು. ಮೊಳಕೈ
ಹಸ್ತಃ ಪು. ಕೈ
ಮುಷ್ಟಿಃ ಪು. ಹಿಡಿ

೪

ಕಟಿಃ ಸ್ತ್ರೀ. ಸೊಂಟ
ಊರುಃ ಪು. ತೊಡೆ
ಜಙ್ಘಾ ಸ್ತ್ರೀ. ಮೊಳಕಾಲು
ಪದಮ್ ನ. ಹೆಜ್ಜೆ

೫

ಧೌತವಸ್ತ್ರಾಣಿ ನ. ಒಗೆದ ಬಟ್ಟೆಗಳು
ಸ್ನಾನಶಾಟೀ ಸ್ತ್ರೀ. ಸ್ನಾನದ ಪಂಚೆ
ವಸ್ತ್ರಮ್ ನ. ವಸ್ತ್ರ, ಬಟ್ಟೆ
ಕವಚಃ ಪು. ಅಂಗಿ
ಕಞ್ಚುಕಃ ಪು. ಜುಬ್ಬ, ಕುಪ್ಪಸ
ಶಿರಸ್ತ್ರಮ್ ನ. ತೋಪಿ
ಶಿರಸ್ತ್ರಾಣಮ್ ನ. ತೋಪಿ

ಉಷ್ಣೀಷಃ ಪು. ರುಮಾಲು
ಶಾಟೀ ಸ್ತ್ರೀ. ಪಂಚೆ
ಚೇಲಮ್ ನ. ಶಲ್ಯ
ಕವಚಕೋಶಃ ಪು. ಅಂಗಿಯ ಜೇಬು
ಕೌಶೇಯಮ್ ನ. ರೇಷ್ಮೆಯ ಬಟ್ಟೆ
ಕಾರ್ಪಾಸಿಕಮ್ ನ. ಹತ್ತಿಯ ಬಟ್ಟೆ
ಆಚ್ಛಾದನಮ್ ನ. ಹೊದಿಕೆ, ಬಟ್ಟೆ

೬

ಗೃಹಮ್ ನ. ಮನೆ
ಉಪರಿಭಾಗ ಪು. ಮೇಲ್ಗಡೆ
ಅಧೋಭಾಗಃ ಪು. ಕೆಳಗಡೆ
ಪುರೋಭಾಗಃ ಪು. ಮುಂದುಗಡೆ
ಮಧ್ಯಬಾಗಃ ಪು. ನಡುಗಡೆ
ಪಶ್ಚಾದ್ಭಾಗಃ ಪು. ಹಿಂದುಗಡೆ
ಕೋಷ್ಠಃ ಪು. ಕೋಣೆ
ಮಹಾನಸಮ್ ನ. ಅಡಿಗೆಯ ಮನೆ
ಭೋಜನಾಗಾರಮ್ ನ. ಊಟದ ಮನೆ
ದೇವತಾಗಾರಮ್ ನ. ದೇವರ ಮನೆ
ಶಯ್ಯಾಗಾರಮ್ ನ. ಮಗಲುವ ಮನೆ
ಸ್ನಾನಗೃಹಮ್ ನ. ಸ್ನಾನದ ಮನೆ
ಕೋಷ್ಠಾಗಾರಮ್ ನ. ಉಗ್ರಾಣ
ಅಟ್ಟಃ ಪು. ಅಟ್ಟ

೭

ಸ್ಥಲಮ್ ನ. ನೆಲ
ಪಟಲಮ್ ನ. ಮಾಳಿಗೆ
ಕುಡ್ಯಮ್ ನ. ಗೋಡೆ
ದ್ವಾರಮ್ ನ. ಬಾಗಿಲು
ಕವಾಟಮ್ ನ. ಕದ
ಅರ್ಗಲಮ್ ನ. ಅಗುಳಿ
ಖಾನಿಃ ಸ್ತ್ರೀ. ಗೂಡು
ವಾತಾಯನಮ್ ನ. ಕಿಟಕಿ
ಗವಾಕ್ಷಃ ಪು. ಬೆಳಕಿನ ಖಿಂಡಿ
ವಿತರ್ದಿಃ ಸ್ತ್ರೀ. ಹೊರಜಗಲಿ
ಅಙ್ಗಣಮ್ ನ. ಅಂಗಳ
ಪ್ರಾಕಾರಃ ಪು. ಅಂಗಳದ ಗೋಡೆ
ನಿಷ್ಕುಟಃ ಪು. ಹಿತ್ತಲು
ವಾಪೀ ಸ್ತ್ರೀ. ಬಾವಿ
ಅರಘಟ್ಟಃ ಪು. ರಾಟೆ

೮

ಗೃಹೋಪಸ್ಕರಃ ಪು. ಮನೆಯ ಸಾಮಾನು
ಪಾತ್ರಮ್ ನ. ಪಾತ್ರೆ
ಪಿತ್ತಲಕುಮ್ಭಃ ಪು. ಹಿತ್ತಾಳೆಯ ಕೊಡ
ಮೃದ್ಘಟಃ ಪು. ಮಣ್ಣಿನ ಗಡಿಗೆ
ಮಣಿಕಃ ಪು. ಗುಡಾಣ, ಹಂಡೆ
ರಜ್ಜಕರಣ್ಡಕಮ್ ನ. ತವರದ ಡಬ್ಬಿ
ಸ್ಥಾಲೀ ಸ್ತ್ರೀ. ತಪ್ಪಲೆ
ಶರಾವಃ ಪು. ತವೆ, ಮುಚ್ಚಳ
ಗಲನ್ತೀ ಸ್ತ್ರೀ. ಜರಡಿ
ಧಮನೀ ಸ್ತ್ರೀ. ಊದುಗೊಳವಿ
ದರ್ವೀ ಸ್ತ್ರೀ. ಸೌಟು
ಪೇಟಿಕಾ ಸ್ತ್ರೀ. ಪೆಟ್ಟಿಗೆ
ಪಿಹಿತಪಾತ್ರಮ್ ನ. ಮುಚ್ಚಿದ ಪಾತ್ರೆ

೯

ಪಾಕಸಮ್ಭಾರಃ ಪು. ಅಡಿಗೆಯ ಸಾಮಗ್ರಿ
ತಣ್ಡುಲಃ* ಪು. ಅಕ್ಕಿ, ಅಕ್ಕಿಯ ಕಾಳು
ದಾಲೀ ಸ್ತ್ರೀ. ಬೇಳೆ
ಲವಣಮ್ ನ. ಉಪ್ಪು
ತಿನ್ತಿಡೀಕಮ್ ನ. ಹುಣಸೆ ಹಣ್ಣು
ರಕ್ತಮರೀಚಫಲಂ ನ. ಮೆಣಸಿನಕಾಯಿ
ಗುಡಮ್ ನ. ಬೆಲ್ಲ
ಸೂದಃ ಪು. ಅಡಿಗೆಯವನು
ಪಾಕಃ ಪು. ಅಡಿಗೆ

೧೦

ಚುಲ್ಲೀ ಸ್ತ್ರೀ. ಒಲೆ
ಪಕ್ಷಃ ಪು. ಒಲೆಯ ಕೋಡಲೆ
ಅಙ್ಗಾರಃ ಪು. ಕೆಂಡ
ವಿಸ್ಫುಲಿಙ್ಗಃ ಪು. ಕಿಡಿ
ಕ್ವಾಥಃ ಪು. ಕಷಾಯ, ಕಟ್ಟು

ಚಿಞ್ಚಾರಸಃ ಪು. ಹುಣಸೆಹುಳಿ
ಬೃಹನ್ಮರೀಚಚೂರ್ಣಮ್ ನ.
ಮೆಣಸಿನಕಾಯಿ ಪುಡಿ
ಮೇಥಿಕಾಚೂರ್ಣಮ್ ನ. ಮೆಂತ್ಯಪುಡಿ
ಮೇಥೀಚೂರ್ಣಮ್ ನ ,,
ಮಾಷಚೂರ್ಣಮ್ ನ. ಉದ್ದಿನಪುಡಿ
ಪ[illegible]ಪಾರಃ ಪು. ಪಲ್ಯದ ಪುಡಿ
ಮರೀಚಃ★ ಪು. ಮೆಣಸು
ಜೀರಕಃ★ ಪು. ಜೀರಿಗೆ
ಸರ್ಷಪಃ★ ಪು. ಸಾಸುವೆ
ಕುಸ್ತುಂಬರೀ★ ಸ್ತ್ರೀ. ಕೊತ್ತುಂಬರಿ
ತಿಲಃ★ ಪು. ಎಳ್ಳು
ಆರ್ದ್ರಕಮ್ ನ. ಹಸಿಯಶುಂಠಿ
ಶುಣ್ಠೀ ಸ್ತ್ರೀ, ಶುಂಠಿ
ಹಿಙ್ಗು ನ. ಇಂಗು
ಹರಿದ್ರಾ ಸ್ತ್ರೀ. ಅರಿಸಿನ
ಪಿಷ್ಟಮ್ ನ. ಹಿಟ್ಟು
ಚೂರ್ಣಮ್ ನ. ಹುಡಿ, ನುಚ್ಚು, ರವೆ
ಘೃತಮ್ ನ. ತುಪ್ಪ

## ೧೧

ಛತ್ರಮ್ ನ. ಕೊಡೆ
ಶಲಾಕಾಪಞ್ಜರಂ ನ. ಸಲಾಕೆಗಳ ಗೂಡು
ದಣ್ಡಃ ಪು. ಕೋಲು
ವ್ಯಜನಮ್ ನ. ಬೀಸಣಿಗೆ
ಆದರ್ಶಃ ಪು. ಕನ್ನಡಿ
ದರ್ಪಣಃ ಪು. ,,
ಆಸನ್ದೀ ಸ್ತ್ರೀ. ಕುರ್ಚಿ
ಮಣಿಃ ಪು. ರತ್ನ
ಊರ್ಮಿಕಾ ಸ್ತ್ರೀ. ಉಂಗುರ
ಶಯ್ಯಾ ಸ್ತ್ರೀ. ಹಾಸಿಗೆ
ಉಪಧಾನಮ್ ನ. ತಲೆದಿಂಬು
ಕಮ್ಬಲಃ ಪು. ಕಂಬಳಿ
ಜವನಿಕಾ ಸ್ತ್ರೀ. ಪರದೆ
ಪರ್ಯಙ್ಕಃ ಪು. ಮಂಚ

ಚಿತ್ರಮ್ ನ. ಚಿತ್ರಪಟ
ಪೇಟಿಕಾ ಸ್ತ್ರೀ. ಪೆಟ್ಟಿಗೆ
ಕಟಃ ಪು. ಚಾಪೆ
ಮಾರ್ಜನೀ ಸ್ತ್ರೀ. ಪೊರಕೆ
ಅವಕರಃ ಪು, ಕಸ
ಗೋಮಯಮ್ ನ. ದನದ ಸಗಣಿ

## ೧೨

ರಥ್ಯಾ ಸ್ತ್ರೀ. ರಸ್ತೆ
ಮಾರ್ಗಃ ಪು. ದಾರಿ
ದಿಕ್ - ದಿಕ್ಕು
ನರಃ - ಜನ
ಪಕ್ಷೀ ಪು. ಹಕ್ಕಿ
ಕ್ಷೇತ್ರಮ್ ನ. ಹೊಲ
ಸಸ್ಯಮ್ ನ. ಪೈರು
ಪವನಃ ಪು. ಗಾಳಿ
ಶುದ್ಧವಾಯುಃ ಪು. ಶುದ್ಧವಾದ ಗಾ
ಆತಪಃ ಪು. ಬಿಸಿಲು
ಘರ್ಮಃ ಪು. ಸೆಕೆ
ಶೀತಮ್ ನ. ಚಳಿ

## ೧೩

ಅನ್ತರಿಕ್ಷಮ್ ನ. ಅಂತರಿಕ್ಷ
ಮೇಘಃ ಪು. ಮೋಡ
ವರ್ಷಮ್ ನ. ಮಳೆ
ವೃಷ್ಟಿಃ ಸ್ತ್ರೀ. ಮಳೆ
ವೃಷ್ಟಿಧಾರಾ ಸ್ತ್ರೀ. ಮಳೆಯ ಧಾರೆ
ವಿದ್ಯುತ್ ಸ್ತ್ರೀ. - ಮಿಂಚು
ಅಶನಿಃ ಪು. ಗುಡುಗು
ಸೂರ್ಯಃ ಪು. ಸೂರ್ಯ
ದಿವಾಕರಃ ಪು. ಸೂರ್ಯ
ಉಷ್ಣಗೋಲಃ ಪು. ಬಿಸಿಯ ಗುಂಡು
ಬಿಮ್ಬಮ್ ನ. ಮಂಡಲ
ಚನ್ದ್ರಃ ಪು. ಚಂದ್ರ
ನಿಶಾಕರಃ ಪು. ಚಂದ್ರ
ಕಲಾ ಸ್ತ್ರೀ. ಕಲೆ

ವೃದ್ಧಿಃ ಸ್ತ್ರೀ. ಹೆಚ್ಚುವದು
ಕ್ಷಯಃ ಪು. ಸವೆಯುವದು
ಕಿರಣಃ ಪು. ಕಿರಣ
ಆಲೋಕಃ ಪು. ಬೆಳಕು
ಪ್ರಕಾಶಃ ಪು. ,,
ತೇಜಃ ನ. ,,
ಕೌಮುದೀ ಸ್ತ್ರೀ. ಬೆಳದಿಂಗಳು
ಹಿಮಮ್ ನ. ಮಂಜು
ತಮಃ - ನ. ಕತ್ತಲೆ
ಅನ್ಧಕಾರಃ - ಪು. ಕತ್ತಲೆ
ನಕ್ಷತ್ರಮ್ ನ. ನಕ್ಷತ್ರ
ತಾರಕಾ ಸ್ತ್ರೀ. ,,
ತಾರಾ ಸ್ತ್ರೀ, ,,

೧೪

ಕ್ಷುಧಾ ಸ್ತ್ರೀ. ಹಸಿವು
ಪಿಪಾಸಾ ಸ್ತ್ರೀ★ ಬಾಯಾರಿಕೆ
ಆಹಾರಾದಿಕಮ್ ನ. ಊಟ
ಭೋಜನಪತ್ರಮ್ ನ. ಊಟದೆಲೆ
ಆಹಾರಾದಿಕಮ್ ನ. ತಿಂಡಿ ಮುಂತಾದದ್ದು
ಖಾದನಮ್ ನ. ತಿನ್ನುವದು
ಪಾನಮ್ ನ. ಕುಡಿಯುವದು
ಖಾದ್ಯಮ್ ನ. ತಿಂಡಿ
ಮೋದಕಃ ಪು. ಕಡುಬು
ಶಷ್ಕುಲೀ ಸ್ತ್ರೀ. ಚಕ್ಕುಲಿ
ಕ್ಷೀರಮ್ ನ. ಹಾಲು
ಲಾಜಃ★ ಪು. ಅರಳು
ಪೃಥುಕಃ★ ಪು. ಅವಲಕ್ಕಿ
ಫಲಮ್ ಪು. ಹಣ್ಣು
ಪರ್ಪಟಕಃ ಪು. ಹಪ್ಪಳ

೧೫

ಪುರುಷಃ ಪು. ಗಂಡಸು
ಸ್ತ್ರಿಯಃ - ಹೆಂಗಸರು
ಹೆಂಗಸರು - ಸ್ತ್ರಿಯಃ

ವಿವಾಹವಿಧಿಃ ಪು. ಮದುವೆಯ ರೀತಿ
ಪತಿಃ ಪು. ಗಂಡ
ಭಾರ್ಯಾ ಸ್ತ್ರೀ. ಹೆಂಡತಿ
ಕಾನ್ತಾ ಸ್ತ್ರೀ. ಪ್ರಿಯಳು, ಹೆಂಡತಿ
ಅಪತ್ಯಮ್ ನ. ಮಗು
ಪುತ್ರಃ ಪು. ಮಗ
ಆತ್ಮಜಃ ಪು. ಮಗ
ಸುತಃ ಪು. ಮಗ
ದುಹಿತಾ ಸ್ತ್ರೀ. ಮಗಳು
ಸುತಾ ಸ್ತ್ರೀ ಮಗಳು
ಭ್ರಾತಾ ಪು. ಸಹೋದರ
ಸ್ವಸಾ ಸ್ತ್ರೀ. ಸಹೋದರಿ
ಭಗಿನೀ ಸ್ತ್ರೀ. ಸಹೋದರಿ
ಪಿತಾ ಪು. ತಂದೆ
ಮಾತಾ ಸ್ತ್ರೀ. ತಾಯಿ
ಸಪತ್ನೀ ಸ್ತ್ರೀ. ಸವತಿ
ಅಗ್ರಜಃ ಪು. ಅಣ್ಣ
ಅನುಜಃ ಪು. ತಮ್ಮ
ಮಿತ್ರಮ್ ನ. ಗೆಳೆಯ
ಸಖಾ - ಪು. ಸ್ನೇಹಿತ
ಸಖೀ- ಸ್ತ್ರೀ. ಜೊತೆಗಾತಿ
ಬನ್ಧುಃ ಪು. ನೆಂಟ, ಗೆಳೆಯ
ಬನ್ಧುಲಕ್ಷಣಮ್ ನ. ಸ್ನೇಹಿತನಗುರ್ತು
ಕುಲಗುರುಃ ಪು. ಪುರೋಹಿತ

೧೬

ದೀಪಃ ಪು. ದೀಪ
ಪ್ರದೀಪಃ ಪು. ದೊಡ್ಡ ದೀಪ
ತೈಲಮ್ ನ. ಎಣ್ಣೆ
ವರ್ತೀ ಸ್ತ್ರೀ. ಬತ್ತಿ
ವಾತಾಹತಿಃ ಸ್ತ್ರೀ. ಗಾಳಿಯ ಹೊಡೆತ
ಭಾಃ ಸ್ತ್ರೀ - ಬೆಳಕು
ಪ್ರಭಾ ಸ್ತ್ರೀ. ಬೆಳಕು
ನಿರ್ವಾಣಃ ಪು. ಆರಿಹೋದ
ಪ್ರಜ್ವಾಲನಮ್ ನ. ಹತ್ತಿಸುವದು

೧೭

ಆಪಣಃ ಪು. ಅಂಗಡಿ
ಧಾನ್ಯಮ್ ನ. ದಿನಸು
ದಾಲೀ ಸ್ತ್ರೀ. ಬೇಳೆ
ವ್ರೀಹಿ★ ಪು. ಬತ್ತ
ಮಾಷಃ'★ ಪು. ಉದ್ದು
ಮುದ್ಗಃ★ ಪು. ಹೆಸರು
ಚಣಕಃ★ ಪು. ಕಡಲೆ
ಕುಳಿತ್ಥಃ ಪು. ಹುರಳಿ
ಕುಲ್ಮಾಷಃ ಪು. ಅಲಸಂದಿ
ಆಢಕೀ ಸ್ತ್ರೀ. ತೊಗರಿ
ನಿಷ್ಪಾವಃ ಪು. ಅವರೆ
ಗುಡಮ್ ನ. ಬೆಲ್ಲ
ಶಾಕಮ್ ನ. ತರಕಾರಿ
ಪಿಷ್ಟಮ್ ನ. ಹಿಟ್ಟು
ಗೋಧೂಮಚೂರ್ಣಮ್ ನ. ಗೋಧಿರವೆ
ಮೂಲ್ಯಮ್ ನ. ಬೆಲೆ
ಅರ್ಘಃ ಪು. ಬೆಲೆ
ರೂಪಕಃ ಪು. ರೂಪಾಯಿ
ಆಣಕಃ ಪು. ಆಣೆ

೧೮

ವಿದ್ಯಾಶಾಲಾ ಸ್ತ್ರೀ. ಸ್ಕೂಲು
ವರ್ಗಃ ಪು. ತರಗತಿ
ಕಕ್ಷ್ಯಾ ಸ್ತ್ರೀ. ತರಗತಿ
ಗುರುಃ ಪು. ಹೇಳಿಕೊಡುವವ
ಅಧ್ಯಾಪಕಃ ಪು. ಉಪಾಧ್ಯಾಯ
ಛಾತ್ರಃ ಪು. ವಿದ್ಯಾರ್ಥಿ
ಸತೀರ್ಥ್ಯಃ ಪು. ಅದೇ ಗುರುವಿನಲ್ಲಿ ಓದುವವ
ಪ್ರಥಮವರ್ಗೀಯಃ ಪು. ಒಂದನೆಯ ತರಗತಿಯವ
ವಯಃ ನ. - ವಯಸ್ಸು
ನಾಮಧೇಯಮ್ ನ. ಹೆಸರು
ನಾಮಾನ್ತರಮ್ ನ. ಮತ್ತೊಂದು ಹೆಸರು
ಪೀಠಿಕಾ ಸ್ತ್ರೀ. ಬೆಂಚು
ಪಾದಪೀಠಮ್ ನ. ಸ್ಟೂಲು, ಕಾಲ್ಮಣೆ
ಆಸನ್ದೀ ಸ್ತ್ರೀ. ಕುರ್ಚಿ
ದಾರುಫಲಕಮ್ ನ. ಮರದ ಹಲಗೆ, ಬೋರ್ಡು
ಖಟಿಕಾ ಸ್ತ್ರೀ. ಬಳಪ, ಸೀಮೆಸುಣ್ಣ
ಶಿಲಾಫಲಕಂ ನ. ಕಲ್ಲುಹಲಗೆ, ಸ್ಲೇಟು
ಶಿಲಾಲೇಖಿನೀ ಸ್ತ್ರೀ. ಸ್ಲೇಟಿನ ಬಳಪ
ಮಷೀಲೇಖಿನೀ ಸ್ತ್ರೀ. ಲೇಖಣಿ
ಸೀಸಕಲೇಖಿನೀ ಸ್ತ್ರೀ. ಸೀಸದ ಕಡ್ಡಿ
ಪತ್ರಮ್ ನ. ಕಾಗದ
ಮಷೀ ಸ್ತ್ರೀ. ಮಸಿ
ಲಿಪಿಃ ಸ್ತ್ರೀ. ಬರವಣಿಗೆ
ಶೋಷಣಪತ್ರಮ್ ನ. ಒತ್ತುವ ಕಾಗದ
ಅಕ್ಷರಮ್ ನ. ಅಕ್ಷರ
ಲೇಖನಸಾಮಗ್ರೀ ಸ್ತ್ರೀ. ಬರೆಯುವ ಸಾಧನಗಳು

೧೯

ಪುಸ್ತಕಮ್ ನ. ಪುಸ್ತಕ
ಪೃಷ್ಠಮ್ ನ. ಪುಟ
ರಕ್ಷಾಪತ್ರಮ್ ನ. ರಟ್ಟಿನಕಾಗದ
ಛುರಿಕಾ ಸ್ತ್ರೀ. ಚಾಕು
ಕರ್ತರೀ ಸ್ತ್ರೀ. ಕತ್ತರಿ
ಸೂಚೀ ಸ್ತ್ರೀ. ಸೂಜಿ
ಸೀವನತನ್ತುಃ ಪು. ಹೊಲಿಯುವ ದಾರ

೨೦

ಲೇಖ್ಯಮ್ ನ. ಕಾಗದ
ಸ್ವವೃತ್ತಾನ್ತಃ ಪು. ತನ್ನ ವರ್ತಮಾನ
ಕುಶಲಮ್ ನ. ಕ್ಷೇಮ
ಕುಶಲೀ ಪು. ಕ್ಷೇಮವಾಗಿರುವವನು

೨೧

ಅಧ್ಯಯನಮ್ ನ. ಓದುವದು
ಭಾಷಾ ಸ್ತ್ರೀ. ಭಾಷೆ
ಗೀರ್ವಾಣಭಾರತೀ ಸ್ತ್ರೀ. ದೇವತೆಗಳ ಮಾತು, ಸಂಸ್ಕೃತ

ಕರ್ಣಾಟಕಭಾಷಾ ಸ್ತ್ರೀ, ಕನ್ನಡ ಮಾತು
ಕಾವ್ಯಮ್ ನ. ಕಾವ್ಯ
ಆಭಾಣಕಃ ಪು. ಗಾದೆ
ಸುಭಾಷಿತಮ್ ನ. ಸೂಕ್ತಿ
ಕಥಾ ಸ್ತ್ರೀ. ಕಥೆ
ಶ್ಲೋಕಃ ಪು. ಪದ್ಯ
ಸಂಹಿತಾ ಸ್ತ್ರೀ. ದೊಡ್ಡ ಗ್ರಂಥ
ಶಿಕ್ಷಣಭೃತಿಃ ಸ್ತ್ರೀ. ಹೇಳಿದ್ದಕ್ಕೆ ಫೀಜು
ವೇತನಮ್ ನ. ಸಂಬಳ
ವಿದ್ಯಾರ್ಥಿವೃತ್ತಿಃ ಸ್ತ್ರೀ. ವಿದ್ಯಾರ್ಥಿಗಳಿಗೆ ಸಹಾಯಧನ
ಪರಿಕರ್ಮಾಷ್ಟಕಂ ನ. ಎಂಟು ಬಗೆ ಲೆಕ್ಕ
ಸಂಖ್ಯಾವಾಚಕಃ ಪು. ಸಂಖ್ಯೆಯ ಹೆಸರು
ಯೋಗಃ ಪು. ಒಟ್ಟು
ಅನ್ತರಮ್ ನ. ವ್ಯತ್ಯಾಸ
(ಫಲಮ್, ಲಬ್ಧಮ್)ನ. ಲೆಕ್ಕಕ್ಕೆ ಬರುವ ಉತ್ತರ
ಶೇಷಃ ಪು. ಉಳಿದದ್ದು
ವರ್ಗಃ ಪು. ವರ್ಗ, ಅದನ್ನು ಅದರಿಂದಲೇ ಗುಣಿಸಿದ್ದು
ಅರ್ಧಮ್ ನ. ಅರ್ಧ
ವರ್ಗಮೂಲಮ್ ನ. ವರ್ಗದ ಮೂಲಸಂಖ್ಯೆ
ಘನಃ ಪು. ಅದನ್ನು ಅದರಿಂದಲೇ ಎರಡು ಸಲ ಗುಣಿಸಿದ್ದು
ಘನಮೂಲಮ್ ನ. ಘನದ ಮೂಲಸಂಖ್ಯೆ

**೨೨**

ಕ್ರೀಡಾಙ್ಗಣಮ್ ನ. ಆಟದ ಬಯಲು
ಗುಲಕಃ ಪು. ಗೋಲಿ
ಭ್ರಮರಕಮ್ ನ. ಬುಗುರಿ
ಕನ್ದುಕಃ ಪು. ಚಂಡು

**೨೩**

ಅಹೋರಾತ್ರಃ ಪು. ದಿವಸ
ದಿವಸಃ ಪು. ದಿವಸ
ಅಹಃ ನ. - ಹಗಲು
ನಿಶಾ ಸ್ತ್ರೀ. ರಾತ್ರಿ
ಶರ್ವರೀ ಸ್ತ್ರೀ. ''
ನಿಶೀಥಿನೀ ಸ್ತ್ರೀ. ''
ರಾತ್ರಿಃ ಸ್ತ್ರೀ. ''
ಪ್ರಾತಃಕಾಲಃ ಪು. ಬೆಳಗ್ಗೆ
ಪೂರ್ವಾಹ್ಣಃ ಪು. ಮಧ್ಯಾಹ್ನದ ಮುಂದು
ಮಧ್ಯಾಹ್ನಃ ಪು. ನಡುಹಗಲು
ಅಪರಾಹ್ಣಃ ಪು. ಮಧ್ಯಾಹ್ನದ ಮೇಲೆ
ಸಾಯಂಕಾಲಃ ಪು. ಸಂಜೆ
ನಿಶೀಥಃ ಪು. ಸರಿಹೊತ್ತು ರಾತ್ರೆ
ಅರ್ಧರಾತ್ರಮ್ ನ. ಅರ್ಧರಾತ್ರೆ, ಸರಿಹೊತ್ತು
ತಮಿಸ್ರಾ ಸ್ತ್ರೀ. ಕತ್ತಲಿರುವ ರಾತ್ರಿ
ಅರುಣೋದಯಃ ಪು. ಮೂಡಲು ಕೆಂಪೇರುವ ಹೊತ್ತು
ಸಪ್ತವಾದನಸಮಯಃ ಪು. ಏಳು ಹೊಡೆಯುವ ಹೊತ್ತು
ಘಂಟಾತ್ರಯಮ್★ ನ. ಮೂರು ಗಂಟೆಯ ಕಾಲ

**೨೪**

ಸಪ್ತಾಹಃ ಪು. ವಾರ
ಮಾಸಃ ಪು. ತಿಂಗಳು
ಪಕ್ಷಃ ಪು. ಅರೆ ತಿಂಗಳು
ವತ್ಸರಃ ಪು. ವರ್ಷ
ಘಣ್ಟಾ ಸ್ತ್ರೀ. ಗಂಟೆ
ಕ್ಷಣಃ ಪು. ಕ್ಷಣ

**೨೫**

ಭಾನುವಾಸರಃ ಪು. ಆದಿತ್ಯವಾರ
ಇನ್ದುವಾಸರಃ ಪು. ಸೋಮವಾರ
ಕುಜವಾಸರಃ ಪು. ಮಂಗಳವಾರ
ಸೌಮ್ಯವಾಸರಃ ಪು. ಬುಧವಾರ
ಗುರುವಾಸರಃ ಪು. ಬೃಹಸ್ಪತಿವಾರ
ಭಾರ್ಗವವಾಸರಃ ಪು. ಶುಕ್ರವಾರ
ಸ್ಥಿರವಾಸರಃ ಪು. ಶನಿವಾರ

ವಸನ್ತಃ ಪು. ವಸಂತಋತು, ಹೂವಿನ ಕಾಲ
ಗ್ರೀಷ್ಮಃ ಪು. ಬೇಸಗೆ
ವರ್ಷಾಃ★ ಪು. ಮಳೆಗಾಲ
ಶರತ್ ಸ್ತ್ರೀ. ಸಸ್ಯಗಳು ಪಕ್ವವಾಗುವ ಕಾಲ
ಹೇಮನ್ತಃ ಪು. ಚಳಿಗಾಲ
ಶಿಶಿರಃ ಚಳಿಗಾಲದ ಕೊನೆ, ಸುಗ್ಗಿಯ ಕಾಲ

೨೬

ಪ್ರಯಾಣಮ್ ನ. ಪ್ರಯಾಣ
ವಾಣಿಜ್ಯಮ್ ನ. ವ್ಯಾಪಾರ
ಪಾನ್ಥಃ ಪು. ದಾರಿಗ
ಮಹಾಪಥಃ ಪು. ದೊಡ್ಡ ರಸ್ತೆ
ಬಾಷ್ಪಶಕಟೀ ಸ್ತ್ರೀ. ಹೊಗೆಗಾಡಿ, ರೈಲು
ನದೀ ಸ್ತ್ರೀ. ನದಿ
ಓಘಃ ಪು. ಪ್ರವಾಹ
ಪರ್ವತಃ ಪು: ಪರ್ವತ
ವನಮ್ ನ. ಕಾಡು
ಕಾನ್ತಾರಃ ಪು. ಅರಣ್ಯ
ವೃಕ್ಷಃ ಪು. ಮರ
ಗುಲ್ಮಃ ಪು. ಗಿಡ
ತೃಣಾದಯಃ★ ಪು. ಹುಲ್ಲು ಮುಂತಾದವು
ಶಲಾಟುಃ ಪು. ಕಾಯಿ
ಫಲಮ್ ನ. ಹಣ್ಣು
ಘಾಸಃ ಪು. ಎಳೆಹುಲ್ಲು
ಶಾಖಾ ಸ್ತ್ರೀ. ಕೊಂಬೆ
ಪರ್ಣಮ್ ನ. ಎಲೆ
ಚನ್ದನಃ ಪು. ಗಂದದ ಮರ
ವನೋದ್ದೇಶಃ ಪು. ಕಾಡಿನ ಸ್ಥಳ
ಆಶ್ರಮಃ ಪು ಋಷಿಗಳಿರುವ ಸ್ಥಳ
ಪರ್ಣಶಾಲಾ ಸ್ತ್ರೀ. ಎಲೆಮನೆ
ಋಷಿಃ ಪು. ತಪಸ್ವಿ
ದೈತ್ಯಃ ಪು. ರಾಕ್ಷಸ
ತಕ್ಷಕಃ ಪು. ಬಡಗಿ
ಕುಠಾರಃ ಪು. ಕೊಡಲಿ

೨೭

ಅವಿಕುಲಮ್ ನ. ಕುರಿಯ ಮಂದೆ
ಪಶುಯೂಥಃ ನ. ಕುರಿಯ ಮಂದೆ
ಅವಿಪಾಲಃ ಪು. ಕುರುಬ
ಬರ್ಕರಃ ಪು. ಕುರಿಮರಿ
ಬಾಲಚ್ಛಾಗಃ ಪು. ಕುರಿಮರಿ
ವೃಕಃ ಪು. ತೋಳ
ಮಹಿಷಃ ಪು. ಕೋಣ
ಮಹಿಷೀ ಸ್ತ್ರೀ. ಎಮ್ಮೆ
ಅಶ್ವಃ ಪು. ಕುದುರೆ
ಗರ್ದಭಃ ಪು. ಕತ್ತೆ
ಕುಕ್ಕುರಃ ಪು. ನಾಯಿ
ಮಾರ್ಜಾರಃ ಪು. ಬೆಕ್ಕು
ಗೌಃ ಪು- ಸ್ತ್ರೀ. ಎತ್ತು, ಹಸು
ವೃಷಭಃ ಪು. ಎತ್ತು
ಮೇಷಃ ಪು. ಟಗರು
ಅಜಾ ಸ್ತ್ರೀ. ಆಡು
ಕುಕ್ಕುಟಃ ಪು. ಹುಂಜ
ಕುಕ್ಕುಟೀ ಸ್ತ್ರೀ. ಕೋಳಿ
ಪ್ರಾಣೀ. ಪು. ಪ್ರಾಣಿ
ಶೃಙ್ಗಮ್ ನ. ಕೋಡು
ಪುಚ್ಛಮ್ ನ. ಬಾಲ

೨೮

ಗ್ರಾಮಃ ಪು. ಹಳ್ಳಿ
ಪತ್ತನಮ್ ನ. ಪಟ್ಟಣ
ನಗರಮ್ ನ. ನಗರ
ಪ್ರಾನ್ತಃ ಪು, ಚಿಕ್ಕ ದೇಶ
ಸ್ವದೇಶಃ ಪು. ತನ್ನ ದೇಶ
ವಿದೇಶಃ ಪು. ಬೇರೆ ದೇಶ
ದಕ್ಷಿಣಾಪಥಃ ಪು. ದಕ್ಷಿಣ ದೇಶ
ಮಹೀಶೂರದೇಶಃ ಪು. ಮೈಸೂರು ದೇಶ
ಕೋಸಲದೇಶಃ ಪು. ಕೋಸಲದೇಶ
ಕರ್ಣಾಟಕಾಃ★ ಪು. ಕರ್ಣಾಟಕದೇಶ

ವಿದೇಹಾಃ* ಪು. ವಿದೇಹದೇಶ
ರಾಜಾ ಪು. ಅರಸು
ಅಧಿಪತಿಃ ಪು, ಒಡೆಯ
ಭೂಪತಿಃ ಪು. ಭೂಮಿಯನ್ನಾಳುವ ದೊರೆ
ಮಹೀಶಃ ಪು. ,,
ರಾಜಮಣಿಃ ಪು. ರಾಜಶ್ರೇಷ್ಠನು
ಪ್ರಜಾ* ಸ್ತ್ರೀ. ಪ್ರಜೆ
ಲೋಕಃ ಪು. ಜನ
ಜನಃ ಪು. ಜನ
ಸೇವಕಃ ಪು. ಆಳು
ಧನುರ್ವೇದಃ ಪು. ಬಿಲ್ಲುವಿದ್ಯೆ
ಧನುಃ - ಬಿಲ್ಲು
ಮೌರ್ವೀ ಸ್ತ್ರೀ. ಬಿಲ್ಲುಹುರಿ
ಬಾಣಃ ಪು. ಬಾಣ
ಅಸ್ತ್ರಮ್ ನ. ಆಯುಧ
ಚಮೂಃ ಸ್ತ್ರೀ. ಸೇನೆ
ಆದೇಶಃ ಪು. ಅಪ್ಪಣೆ
ಆಜ್ಞಾ ಸ್ತ್ರೀ. ,,
ಸ್ವಾಮೀ ಪು. ಒಡೆಯ, ಧಣಿ
ಗಜಸ್ಕನ್ಧಾರೋಹಣಮ್ ನ. ಆನೆಯ ಹೆಗಲೇರುವಿಕೆ
ಅಶ್ವಪೃಷ್ಠಾರೋಹಣಮ್ ನ. ಕುದುರೆಯ ಬೆನ್ನಿನ ಮೇಲೆ ಹತ್ತುವದು
ರಥಚರ್ಯಾ ಸ್ತ್ರೀ. ರಥವನ್ನು ನಡೆಯಿಸುವದು

### ೨೯

ಲೋಹಃ ಪು. ಲೋಹ
ಸುವರ್ಣಮ್ ನ. ಚಿನ್ನ
ಅಯಃ ನ. - ಕಬ್ಬಿಣ
ತೀಕ್ಷ್ಣಾಯಃ ನ. - ಉಕ್ಕು
ಪಿತ್ತಲಮ್ ನ. ಹಿತ್ತಾಳೆ
ರಜ್ಗಮ್ ನ. ತವರ
ಮೃತ್ ಸ್ತ್ರೀ. ಮಣ್ಣು
ಶಿಲಾ ಸ್ತ್ರೀ. ಕಲ್ಲು

### ೩೦

ಚಿಕಿತ್ಸಾಲಯಃ ಪು. ಆಸ್ಪತ್ರೆ
ವಿದ್ಯಾಶಾಲಾ ಸ್ತ್ರೀ. ಸ್ಕೂಲು, ಕಾಲೇಜ್
ವಾಚನಾಲಯಃ ಪು. ವರ್ತಮಾನಪತ್ರಿಕೆಗಳನ್ನು ಓದುವ ಸ್ಥಳ, ರೀ. ರೂಮು
ಸರಸ್ವತೀಮನ್ದಿರಮ್ ನ. ಪುಸ್ತಕಗಳಿರುವ ಸ್ಥಳ, ಲೈಬ್ರರಿ
ಲೇಖ್ಯಾಲಯಃ ಪು. ಅಂಚೆಮನೆ
ತಂತ್ರೀವಾರ್ತಾಲಯಃ ಪು. ತಂತೀವರ್ತಮಾನದ ಕಚೇರಿ, ಟೆಲಿಗ್ರಾಫ್ ಕಚೇರಿ
ರಕ್ಷಣಾಲಯಃ ಪು. ಪೋಲೀಸು ಠಾಣೆ
ನ್ಯಾಯಸ್ಥಾನಮ್ ನ. ಕೋರ್ಟು
ವ್ಯವಹಾರಃ ಪು. ವ್ಯಾಜ್ಯ

### ೩೧

ಶಬ್ದಃ ಪು. ಸದ್ದು
ರೂಪಮ್ ನ. ಬಣ್ಣ, ಆಕಾರ
ಗನ್ಧಃ ಪು. ವಾಸನೆ, ನಾತ
ದೃಷ್ಟಿಃ ಸ್ತ್ರೀ. ನೋಟ
ದರ್ಶನಮ್ ನ. ನೋಟ
ನಿದ್ರಾಸುಖಮ್ ನ. ನಿದ್ರೆಯ ಸುಖ
ಗೋಷ್ಠೀಸುಖಮ್ ನ. ಜತೆಯಲ್ಲಿರುವ ಸುಖ
ಶುಚಿತ್ವಮ್ ನ. ಶುದ್ಧವಾಗಿರುವದು
ಅರೋಗಿತಾ ಸ್ತ್ರೀ. ಆರೋಗ್ಯ
ಆಯಃ ಪು. ಆದಾಯ
ವ್ಯಯಃ ಪು. ವೆಚ್ಚ
ಹರ್ಷಸ್ಥಾನಮ್ ನ. ಸಂತೋಷಕ್ಕೆ ಕಾರಣ
ಭಯಸ್ಥಾನಮ್ ನ. ಹೆದರಿಕೆಗೆ ಕಾರಣ
ಧನಮ್ ನ. ಹಣ
ಭಾಗ್ಯಮ್ ನ. ಅದೃಷ್ಟ

### ೩೨

ಪ್ರೀತಿಃ ಸ್ತ್ರೀ. ಪ್ರೇಮ
ಸ್ನೇಹಃ ಪು. ,,

ಸುಹೃದ್ಗುಣ ಪು. ಸ್ನೇಹಿತನ ಗುಣ
ವಾತ್ಸಲ್ಯಮ್ ನ. ಕಿರಿಯವರಲ್ಲಿ ಪ್ರೇಮ
ಶ್ರದ್ಧಾ ಸ್ತ್ರೀ. ನಂಬಿಕೆ
ಭಕ್ತಿಃ ಸ್ತ್ರೀ. ಪೂಜ್ಯರಲ್ಲಿ ಪ್ರೇಮ
ವಿನಯಃ ಪು. ಒಳ್ಳೆಯ ನಡತೆ
ದಾಕ್ಷಿಣ್ಯಮ್ ನ. ಉದಾರಭಾವ
ತ್ಯಾಗಿತಾ ಸ್ತ್ರೀ. ''
ಅನುಕಮ್ಪಾ ಸ್ತ್ರೀ. ದಯೆ
ಶುಶ್ರೂಷಣಮ್ ನ. ಪೂಜ್ಯರ ಸೇವೆ
ಅನುರಕ್ತಿಃ ಸ್ತ್ರೀ. ಪ್ರೇಮ
ಸನ್ತೋಷಃ ಪು. ತೃಪ್ತಿ
ಶ್ರೇಯಃ ನ.- ಒಳ್ಳೆಯದು

**೩೩**

ವಿಘ್ನಃ ಪು. ಅಡ್ಡಿ
ಸೌಕರ್ಯಮ್ ನ. ಅನುಕೂಲ
ಗರ್ವಃ ಪು. ಅಹಂಕಾರ
ಅಭಿಮಾನಮ್ ನ. ''
ಭೀತಿಃ ಸ್ತ್ರೀ. ಹೆದರಿಕೆ
ಭಯಮ್ ನ. ''
ಆಯಾಸಃ ಪು. ಶ್ರಮ
ಶೌರ್ಯಮ್ ನ. ಪರಾಕ್ರಮ
ಚೌರ್ಯಮ್ ನ. ಕಳವು
ಸಂದೇಹಃ ಪು. ಸಂಶಯ
ಪ್ರಶ್ನಃ ಪು. ಕೇಳುವದು
ಕಾಮಃ ಪು. ಆಸೆ
ಲೋಭಃ ಪು. ಅತ್ಯಾಸೆ
ಗುಹ್ಯಮ್ ನ. ಗುಟ್ಟು
ವೃತ್ತಾನ್ತಃ ಪು. ಸಮಾಚಾರ
ವಿಜ್ಞಾಪನಮ್ ನ. ತಿಳಿಸುವದು
ಬದ್ಧಿವಿಕಾಸಃ ಪು. ಬುದ್ಧಿಯು ಹಿಗ್ಗುವುದು
ಅನ್ವೇಷಣಮ್ ನ. ಹುಡುಕುವದು

**೩೪**

ಆರೋಪಣಮ್ ನ. ಬಿಲ್ಲಿಗೆ ಹುರಿ ಕಟ್ಟುವದು
ತೋಲನಮ್ ನ. (ಧನುಸ್ಸನ್ನು ಎತ್ತುವದು)
ಕಾರ್ಯಮ್ ನ. ಕೆಲಸ
ಕೀರ್ತಿಃ ಸ್ತ್ರೀ. ಒಳ್ಳೆಯ ಹೆಸರು
ಪ್ರತಿಜ್ಞಾ ಸ್ತ್ರೀ. ಪ್ರತಿಜ್ಞೆ
ಪಾತ್ರತಾ ಸ್ತ್ರೀ. ಯೋಗ್ಯತೆ
ಪ್ರಭಾವಃ ಪು. ಬಲ
ಪರಿಮಾಣಮ್ ನ. ಗಾತ್ರ
ಸೌನ್ದರ್ಯಮ್ ನ. ನೋಟಕ್ಕೆ ಚೆನ್ನಾಗಿರುವದು

**೩೫**

ಧರ್ಮಃ ಪು. ಪುಣ್ಯ
ಅರ್ಥಃ ಪು. ಸಂಪತ್ತು
ಕಾಮಃ ಪು. ಬಯಸತಕ್ಕದ್ದು
ವಿಧಿಃ ಪು. ಶಾಸ್ತ್ರದಲ್ಲಿ ಹೇಳಿರುವ ಕ್ರಮ
ಯಜ್ಞಃ ಪು. ದೇವತೆಗಳಿಗೆ ಕೊಡುವ ಹೋಮ ಮುಂತಾದದ್ದು
ಯಾಗಕ್ರಿಯಾ ಪು. ಯಜ್ಞ
ಕುಲಗುರುಃ ಪು. ಕುಲಕ್ಕೆ ಪುರೋಹಿತ
ಈಶ್ವರಃ ಪು. ದೇವರು
ಪ್ರಾರ್ಥನಾ ಸ್ತ್ರೀ. ಬೇಡುವದು
ಜೀವಃ ಪು. ಜೀವನು
ರಮೇಶಃ ಪು. ಲಕ್ಷ್ಮಿಯ ಗಂಡ, ವಿಷ್ಣು
ದೇವತಾ ಸ್ತ್ರೀ. ದೇವತೆ
ಕಲ್ಪಲತಾ ಸ್ತ್ರೀ. ಕೇಳಿದ್ದನ್ನು ಕೊಡುವಬಳ್ಳಿ
ಭಾರತಫಲಮ್ ನ. ಭಾರತವನ್ನು ಓದಿದ ಫಲ
ಪರಬ್ರಹ್ಮ- ನ. ಎಲ್ಲಕ್ಕೂ ಹೆಚ್ಚಿನ ಬ್ರಹ್ಮ

ನಾಮವಿಶೇಷಗಳು

ಪ್ರಸನ್ನ - ನಿರ್ಮಲವಾದ
ಭಾಸುರ - ಹೊಳೆಯುವ
ಸೌಮ್ಯ-ಶಾಂತವಾದ
ಮನೋಹರ-ಮನಸ್ಸನ್ನೆಳೆಯುವ
ರಮಣೀಯ - ಸುಂದರವಾದ
ಮಧುರ - ಇಂಪಾದ, ಸಿಹಿಯಾದ
ದಿವ್ಯ - ಸ್ವರ್ಗದಲ್ಲಿ ಹುಟ್ಟಿದ
ಪ್ರಿಯ-ಪ್ರಿಯವಾದ
ಮುಖ್ಯ - ಮುಖ್ಯವಾದ
ಪ್ರಧಾನ - ,,
ಶುಕ್ಲ - ಬಿಳಿಯ
ಕೃಷ್ಣ - ಕರಿಯ
ಲೋಹಿತ - ಕೆಚ್ಚನೆಯ
ಹರಿತ - ಹಚ್ಚನೆಯ
ಕಪಿಶ - ಕಂದುಬಣ್ಣದ
ನೀಲ - ನೀಲಿಬಣ್ಣದ
ಶೀತ - ತಣ್ಣನೆಯ
ಉಷ್ಣ - ಬೆಚ್ಚನೆಯ
ಆರ್ದ್ರ - ಆರಿದ (ಹಸಿಯದಾದ)
ಶುಷ್ಕ - ಒಣಗಿದ
ಪಕ್ವ - ಬೆಂದ, ಮಾಗಿದ
ಪಙ್ಕಿಲ - ಕೆಸರಾದ
ಶ್ರಾವ್ಯ - ಇಂಪಾದ
ದೂರ - ದೂರವಾದ
ಸನ್ನಿಹಿತ-ಹತ್ತಿರವಿರುವ
ಪಣ್ಡಿತ - ತಿಳಿದ
ಮೂಢ - ತಿಳಿಯದ
ಪ್ರವೀಣ - ಜಾಣ, ಗಟ್ಟಿಗ
ಚತುರ - ,, ,,
ನಿಪುಣ - ,, ,,
ಕುಶಲ - ,, ,,
ಸುಶಿಕ್ಷಿತ - ,, ,,

ಧೂರ್ತ - ವಂಚಕ
ಜಾಗರೂಕ - ಎಚ್ಚರದಿಂದಿರುವ
ಸ್ಥೂಲ - ದಪ್ಪವಾದ
ಸೂಕ್ಷ್ಮ - ತೆಳುವಾದ, ಸಣ್ಣ
ಜ್ಯೇಷ್ಠ - ಎಲ್ಲಕ್ಕೂ ಹಿರಿಯ
ಕನಿಷ್ಠ - ,, ಕಿರಿಯ
ಮಧ್ಯಮ - ನಡುವಿನ
ತುಲ್ಯ - ಸಮನಾದ
ಸಜ್ಜ - ಸಿದ್ಧವಾದ
ಪ್ರಾಚೀನ - ಹಿಂದಿನ
ನ್ಯಾಯ್ಯ - ಯುಕ್ತವಾದ
ಪರ - ಹೆಚ್ಚಿನ
ಪರತರ - ಇನ್ನೂ ಹೆಚ್ಚಿನ
ಪರಮ - ಶ್ರೇಷ್ಠವಾದ
ಪರ್ಯಾಪ್ತ - ಸಾಕಾದ
ಪ್ರಭೂತ - ಬಹಳ, ಅನೇಕ
ಅಲ್ಪ - ಸ್ವಲ್ಪ
ಮಹಾನ್ - ದೊಡ್ಡ
ಅಧಿಕ - ಹೆಚ್ಚಾದ
ಬೃಹತ್ - ದೊಡ್ಡದು
ಪ್ರಕೃಷ್ಟ - ಹೆಚ್ಚಾದ
ದೀನ - ಬಡವ
ದರಿದ್ರ - ,,
ನಿತ್ಯ - ಯಾವಾಗಲೂ ಇರುವ
ಸುವೃತ್ತ - ಪೂರ ದುಂಡನೆಯ
ಚತುರಸ್ರ - ಚೌಕನೆಯ
ದೀರ್ಘ - ಉದ್ದನೆಯ
ತನುತರ - ಬಲು ಸಣ್ಣ
ಸಮಸ್ತ - ಎಲ್ಲಾ
ವಿವಿಧ - ಬಗೆಬಗೆಯ
ಅನ್ಧ - ಕುರುಡ
ಬಧಿರ - ಕಿವುಡ

ಮೂಕ - ಮೂಗ
ಕಾಣ - ಒಕ್ಕಣ್ಣ
ಕುಣಿ - ಮೋಟ
ಪಙ್ಗು - ಹೆಳವ
ವಿಗ್ರ - ಮೂಗಿಲ್ಲದ
ಬಲವಾನ್ - ಬಲವುಳ್ಳ
ಶಕ್ತ - ಗಟ್ಟಿಗ
ಅಶಕ್ತ - ಕೈಲಾಗದ
ಸುಕುಮಾರ - ಕೋಮಲವಾದ
ಅಮುಖ - ಮುಖವಿಲ್ಲದ
ಅಪದ - ಕಾಲಿಲ್ಲದ
ಪೂಜ್ಯ - ಪೂಜ್ಯನಾದ
ವಶ್ಯ - ಹೇಳಿದಂತೆ ಕೇಳುವ
ಶೋಭನ - ಒಳ್ಳೆಯ
ಭದ್ರ - ಒಳ್ಳೆ; (ಸಂಬೋಧನೆ) ಅಯ್ಯ, ಅಣ್ಣ
ಭಕ್ತಿಮಾನ್ - ಭಕ್ತಿಯುಳ್ಳ
ದಯಾವಾನ್ - ದಯೆಯುಳ್ಳ
ಶ್ರೀಮಾನ್ - ಸಂಪತ್ತುಳ್ಳ
ಪ್ರಿಯವಾದಿನ್ - ಒಳ್ಳೆಯ ಮಾತಾಡುವವ
ಧರ್ಮಾತ್ಮಾ - ಒಳ್ಳೆಯ ಸ್ವಭಾವದವನು
ದಯಾಲು - ದಯಾವಂತ
ಅಲ್ಪಕಣ್ಠ - ಸಣ್ಣಧ್ವನಿಯ
ಅನರ್ಥಜ್ಞ - ಅರ್ಥವನ್ನರಿಯದ
ತಾದೃಶ - ಅಂಥ
ಏತಾದೃಶ - ಇಂಥ
ಈದೃಶ - ಇಂಥ
ಭವಾದೃಶ - (ಗೌರವ) ನಿನ್ನಂಥ
ಮಾದೃಶ - ನನ್ನಂಥ
ತ್ವಾದೃಶ - ನಿನ್ನಂಥ
ಆಹ್ಲಾದಕರ - ಸಂತೋಷವನ್ನುಂಟುಮಾಡುವ
ಭೋಗಕರ - ಭೋಗವನ್ನುಂಟುಮಾಡುವ
ಸುಖಕರ - ಸುಖವನ್ನುಂಟುಮಾಡುವ
ದೂರಗಾಮಿ - ದೂರನಡೆಯುವ
ಶಿಲಾಭಕ್ಷೀ-ಕಲ್ಲುತಿನ್ನುವ
ಕುಠಾರಗ್ರಾಹೀ - ಕೊಡಲಿಯನ್ನು ತೆಗೆದುಕೊಂಡವ
ಗೀತೀ - ಗಾನಮಾಡುವ
ಶೀಘ್ರೀ - ವೇಗವುಳ್ಳ
ಸುಖೀ - ಸುಖವುಳ್ಳ
ಶಿರಃಕಂಪೀ - ತಲೆ ಅಲ್ಲಾಡಿಸುವ
ತತ್ರಸ್ಥ - ಅಲ್ಲಿರುವ
ಅಪವರಕಸ್ಥ - ಕೋಣೆಯಲ್ಲಿರುವ

---

**ವಿಶೇಷ** : ೧. ವಿಶೇಷಣಗಳು ವಿಶೇಷ್ಯದ ಲಿಂಗದಲ್ಲಿರಬೇಕು. ಉದಾ : ರಮಣೀಯೋ ದೇಶಃ - ಸುಂದರವಾದ ಸ್ಥಳ, ರಮಣೀಯಾ ಸ್ತ್ರೀ - ಸುಂದರಿಯಾದ ಹೆಂಗಸು, ರಮಣೀಯಂ ಗೃಹಮ್ - ಸುಂದರವಾದ ಮನೆ.

೨. ಅಕಾರಾನ್ತವಾದ ವಿಶೇಷಣಗಳು ಸ್ತ್ರೀಲಿಂಗದಲ್ಲಿ ಬಹುಮಟ್ಟಿಗೆ ಆಕಾರಾನ್ತವಾಗುತ್ತವೆ. ಉದಾ : ಪರಮಾ ಪ್ರೀತಿಃ - ಹೆಚ್ಚಿನ ಪ್ರೀತಿ, ಸ್ಥೂಲಾ ವರ್ತೀ- ದಪ್ಪವಾದ ಬತ್ತಿ. ಕೆಲವು ಈಕಾರಾನ್ತವಾಗುವವು. ಉದಾ : ಸುಕುಮಾರೀ- ಕೋಮಲವಾದ. ತಾದೃಶ ಮುಂತಾದ 'ದೃಶ' ಎಂಬುದು ಕೊನೆಯಲ್ಲಿರುವ ಮಾತುಗಳೂ ಆಹ್ಲಾದಕರ ಮುಂತಾದ 'ಕರ' ಎಂಬುದು ಕೊನೆಯಲ್ಲಿರುವ ಮಾತುಗಳೂ ಈಕಾರಾನ್ತವಾಗುವವು. ಉದಾ :- ತಾದೃಶೀ, ಏತಾದೃಶೀ, ಮಾದೃಶೀ ಇತ್ಯಾದಿ : ಆಹ್ಲಾದಕರೀ, ಭೋಗಕರೀ-ಇತ್ಯಾದಿ.

೩. ಉಕಾರಾನ್ತವಿಶೇಷಣಗಳಿಗೆ ಊಕಾರಾನ್ತವಾಗಿಯೂ ಸ್ತ್ರೀಲಿಂಗವಾಗುವದುಂಟು. ಉದಾ : ಗುರುಃ ಶಿಲಾ ಅಥವಾ ಗುರ್ವೀ ಶಿಲಾ - ಭಾರವಾದ ಕಲ್ಲು

೪. ತಕಾರಾನ್ತ ನಕಾರಾನ್ತ ಶಬ್ದಗಳು ಬಹುಮಟ್ಟಿಗೆ ಸ್ತ್ರೀಲಿಂಗದಲ್ಲಿ ಈಕಾರಾನ್ತವಾಗುವವು. ಉದಾ : ಬೃಹತೀ, ಮಹತೀ, ಭಕ್ತಿಮತೀ, ಶ್ರೀಮತೀ, ದಯಾವತೀ, ಪ್ರಿಯವಾದಿನೀ, ದೂರಗಾಮಿನೀ- ಇತ್ಯಾದಿ.

೫. ವಿಶೇಷಣಗಳು ವಿಶೇಷ್ಯದ ಲಿಂಗವಚನವಿಭಕ್ತಿಗಳಲ್ಲಿಯೇ ಇರುತ್ತವೆ ; ಸ್ವತಂತ್ರವಾಗಿ ಉಪಯೋಗವಾಗಿದ್ದ ಹೊರತು ಅವುಗಳ ವಿಭಕ್ತಿಗಳನ್ನು ಕನ್ನಡಿಸಬೇಕಾದ ದ್ದಿಲ್ಲ. ಉದಾ:- ಹರಿತಾನಿ ಪರ್ಣಾನಿ ಶೋಭನ್ತೇ-ಹಸುರಾದ ಎಲೆಗಳು ಚೆನ್ನಾಗಿ ಕಾಣುತ್ತವೆ. ಕಾನಿಚಿತ್ ಪರ್ಣಾನಿ ಹರಿತಾನಿ ಗೌರಾಣಿ ಚ ಭವನ್ತಿ - ಕೆಲವು ಎಲೆಗಳು ಹಸುರಾಗಿಯೂ ಹಳದಿಯಾಗಿಯೂ ಇರುತ್ತವೆ. ಇಮಾನಿ ಸರ್ವಾಣ್ಯಪಿ ಹರಿತಾನಿ - ಇವೆಲ್ಲ ಹಸುರಾದವು (ಹಸಿರು). ದೀನಾನಾಂ ತಾಮ್ರಪಾತ್ರಾಣಿ ನ ಸುಲಭಾನಿ - ಬಡವರಿಗೆ ತಾಮ್ರದ ಪಾತ್ರೆಗಳು ಸುಲಭವಾಗಿ ದೊರೆಯುವುದಿಲ್ಲ. ನ್ಯಾಯ್ಯೇನ ಮಾರ್ಗೇಣ ಚರ - ನ್ಯಾಯವಾದ ಮಾರ್ಗದಿಂದ ನಡೆ.

## ಕೃದನ್ತಗಳು

ಪ್ರಖ್ಯಾತ-ಪ್ರಸಿದ್ಧವಾದ
ಸಮಾಗತ- ಬಂದ
ಸ್ಥಿತ-ನಿಂತಿದ್ದ
ಉತ್ಥಿತ - ಎದ್ದುನಿಂತ
ನಿರ್ವಾಣ - ಆರಿಹೋದ
ಅಸ್ತಮಿತ - ಮುಳುಗಿದ
ಅವಹಿತ - ಮನಸ್ಸಿಟ್ಟ
ಸನ್ನಿಹಿತ - ಹತ್ತಿರ ಬಂದ
ಉಪಸ್ಥಿತ - ಎದುರಿಗಿರುವ
ಪ್ರಧೂಮಿತ - ಹೊಗೆಯಾದ
ಸಂವೃತ್ತ - ಆದ
ಕ್ಷೀಣ - ಸವೆದ
ಸಂಜಾತ - ಉಂಟಾದ
ಸಮಾಪತಿತ - ಆದ
ಹೃಷ್ಟ - ಸಂತೋಷಗೊಂಡ
ಪ್ರಭಾತ - ಬೆಳಗಾದ
ಆಗತ - ಬಂದ
ಪ್ರತ್ಯಾಗತ - ತಿರುಗಿ ಬಂದ
ಉಪವಿಷ್ಟ - ಕೂತ
ಯಾತ - ಹೋದ
ಸಮಾಯಾತ - ಬಂದ
ಸುಪ್ತ - ಮಲಗಿದ
ಪ್ರಬುದ್ಧ - ಎಚ್ಚತ್ತ
ಪ್ರಧಾವಿತ - ಓಡಿದ
ನಿಃಸೃತ - ಹೊರಹೊರಟ
ಪ್ರಸ್ಥಿತ - ಹೊರಟ
ಪ್ರವೃತ್ತ - ಪ್ರಾರಂಭಿಸಿದ
ಸಹಿತ - ಒಡನಿರುವ
ರಹಿತ- ಬಿಡಲ್ಪಟ್ಟ
ನಿಹತ - ಕೊಲ್ಲಲ್ಪಟ್ಟ
ಅಭಿಹತ-ಹೊಡೆಯಲ್ಪಟ್ಟ
ಪ್ರಾರಬ್ಧ-ಪ್ರಾರಂಭಿಸಲ್ಪಟ್ಟ
ವಿಯೋಜಿತ- ಬಿಡಿಸಲ್ಪಟ್ಟ
ಘೃತಸಂಸ್ಕೃತ-ತುಪ್ಪದಲ್ಲಿ ಕರಿಯಲ್ಪಟ್ಟ
ಉಪಲಿಪ್ತ - ಬಳಿಯಲ್ಪಟ್ಟ
ಮಾರ್ಜಿತ- ಗುಡಿಸಲ್ಪಟ್ಟ
ಪ್ರಕ್ಷಿಪ್ತ - ಹಾಕಲ್ಪಟ್ಟ
ಆನೀತ - ತರಲ್ಪಟ್ಟ
ವರ್ಜಿತ - ಬಿಡಲ್ಪಟ್ಟ
ಹೀನ - ಬಿಡಲ್ಪಟ್ಟ, ಇಲ್ಲದ
ರಕ್ಷಿತ - ಇಡಲ್ಪಟ್ಟ, ಕಾಪಾಡಲ್ಪಟ್ಟ
ಅಭಿಷಿಕ್ತ- ಸುರಿಯಲ್ಪಟ್ಟ

ಸಂಯುಕ್ತ - ಜೋಡಿಸಲ್ಪಟ್ಟ
ಶಿಕ್ಷಿತ - ಕಲಿಸಲ್ಪಟ್ಟ
ವಿನೀತ - ತಯಾರುಮಾಡಲ್ಪಟ್ಟ
ಲಿಖಿತ - ಬರೆಯಲ್ಪಟ್ಟ
ಗುಪ್ತ - ಬಚ್ಚಿಡಲ್ಪಟ್ಟ
ದತ್ತ - ಕೊಡಲ್ಪಟ್ಟ
ಉಕ್ತ - ಹೇಳಲ್ಪಟ್ಟ
ಪರಿವೃತ- ಸುತ್ತುವರೆಯಲ್ಪಟ್ಟ
ಪಠಿತ - ಓದಲ್ಪಟ್ಟ
ನಾದಿತ - ಬಾರಿಸಲ್ಪಟ್ಟ
ಗೃಹೀತ - ಹಿಡಿಯಲ್ಪಟ್ಟ
ಲಬ್ಧ- ಪಡೆಯಲ್ಪಟ್ಟ
ಸ್ಥಾಪಿತ - ಇಡಲ್ಪಟ್ಟ
ಪ್ರತಿಷ್ಠಾಪಿತ - ಭದ್ರವಾಗಿಡಲ್ಪಟ್ಟ
ನಿರ್ಮಿತ - ಮಾಡಲ್ಪಟ್ಟ
ಸಂಬದ್ಧ - ಕೂಡಿಸಲ್ಪಟ್ಟ
ವಿಸ್ತೃತ - ಅಗಲಿಸಲ್ಪಟ್ಟ
ಸಂಕುಚಿತ - ಮಡಿಸಲ್ಪಟ್ಟ
ಕೃತ - ಮಾಡಲ್ಪಟ್ಟ
ಸ್ವೀಕೃತ - ಸ್ವೀಕರಿಸಲ್ಪಟ್ಟ
ಧಾರಯನ್ - ಧರಿಸುವ
ಉಚ್ಚಾರಯನ್ - ಉಚ್ಚರಿಸುವ
ವ್ಯಞ್ಜಯನ್ - ತೋರಿಸುವ
ಪಶ್ಯನ್ - ನೋಡುವ
ಪಠಿತವ್ಯ - ಓದಲ್ಪಡತಕ್ಕ
ಕರ್ತವ್ಯ - ಮಾಡಲ್ಪಡತಕ್ಕ
ಭವಿತವ್ಯ - ಆಗಬೇಕಾದ
ಪ್ರೇಷಯಿತವ್ಯ - ಕಳುಹಿಸಲ್ಪಡತಕ್ಕ
ಲೇಖಿತವ್ಯ - ಬರೆಯಲ್ಪಡತಕ್ಕ
ದರ್ಶಯಿತವ್ಯ - ತೋರಿಸಲ್ಪಡತಕ್ಕ

**ವಿಶೇಷ :** ೧. ಇವುಗಳಿಗೆ ಮೂರು ಲಿಂಗಗಳಲ್ಲಿಯೂ ರೂಪಗಳಿರುವವು. ಉದಾ : ಆಗತಃ, ಆಗತಾ, ಆಗತಮ್.

೨. ಆಗತ, ಸ್ಥಿತ, ಉತ್ಥಿತ - ಮುಂತಾದವುಗಳು ಭೂತಕೃದಂತಗಳು ; ಅಕರ್ಮಕ ; ಕ್ರಿಯೆಯಾದರೆ ಕರ್ತರಿಪ್ರಯೋಗದಲ್ಲಿಯೂ ಸಕರ್ಮಕವಾದರೆ ಕರ್ಮಣಿ ಪ್ರಯೋಗದಲ್ಲಿಯೂ ಇವುಗಳನ್ನು ಕನ್ನಡಿಸಬೇಕು. ಉದಾ : ಗತ-ಹೋದ, ದತ್ತ - ಕೊಡಲ್ಪಟ್ಟ. ಇಂಥ ಸಕರ್ಮಕ್ಕೂ ಅಕರ್ಮಕ್ಕೂ ವಾನ್ ಎಂಬುದನ್ನು ಸೇರಿಸಿದರೆ ಕರ್ತರಿ ಪ್ರಯೋಗದ ಅರ್ಥವೇ ಆಗುವದು. ಉದಾ : ಗತವಾನ್ - ಹೋದ, ದತ್ತವಾನ್ - ಕೊಟ್ಟ. ಗತವಾನ್, ದತ್ತವಾನ್- ಮುಂತಾದ ಶಬ್ದಗಳನ್ನು 'ದಯಾವಾನ್' ಎಂಬ ಶಬ್ದದಂತೆ ನಡೆಯಿಸಬೇಕು. ಇವುಗಳಿಗೆ ಸ್ತ್ರೀಲಿಂಗದಲ್ಲಿ ಗತವತೀ, ದತ್ತವತೀ - ಎಂದು ಮುಂತಾಗಿಯೂ ನಪುಂಸಕದಲ್ಲಿ ಗತಮ್, ದತ್ತಮ್ - ಎಂದು ಮುಂತಾಗಿಯೂ ರೂಪಗಳಾಗುವವು.

೩. ಇಲ್ಲಿ ಕೊಟ್ಟಿರುವ ಎಲ್ಲಾ ಕೃದಂತಗಳನ್ನೂ ವಿಶೇಷಣವಾಗಿ ಉಪಯೋಗಿಸುವದಲ್ಲದೆ ಪೂರ್ಣಕ್ರಿಯಾಪದಗಳಂತೆ ವಿಧೇಯವಾಗಿಯೂ ಉಪಯೋಗಿಸಬಹುದು. ಉದಾ : (೧) ತಕ್ಷಕಃ ಪ್ರತ್ಯಾಗತಃ - ಬಡಗಿಯು ಹಿಂತಿರುಗಿ ಬಂದನು ; ಪ್ರತ್ಯಾಗತಂ ತಕ್ಷಕಂ ಸ್ತೇನಃ ಪಶ್ಯತಿ - ಹಿಂತಿರುಗಿ ಬಂದ ಬಡಗಿಯನ್ನು ಕಳ್ಳನು ನೋಡುತ್ತಾನೆ. (೨) ಬ್ರಾಹ್ಮಣಾ ಉಪವಿಷ್ಟಾಃ - ಬ್ರಾಹ್ಮಣರು ಕುಳಿತರು ; ಉಪವಿಷ್ಟಾನ್ ಬ್ರಾಹ್ಮಣಾನ್ ಗೃಹಸ್ವಾಮಿ ಪ್ರಾಹ- ಕೂತುಕೊಂಡ ಬ್ರಾಹ್ಮಣರನ್ನು ಕುರಿತು ಮನೆಯ ಯಜಮಾನನು ಹೇಳುತ್ತಾನೆ. (೩) ಛಾತ್ರಂ

ಸಮ್ಯಕ್ ಶಿಕ್ಷಿತವಾನ್ - ವಿದ್ಯಾರ್ಥಿಗೆ ಚೆನ್ನಾಗಿ ಕಲಿಸಿದನು ; ಶಿಕ್ಷಿತವನ್ತಂ ಗುರುಂ ನಮಸ್ಕರೋತಿ - ಕಲಿಸಿಕೊಟ್ಟ ಗುರುವಿಗೆ ನಮಸ್ಕರಿಸುತ್ತಾನೆ. (೪) ಇದಂ ಕರ್ತವ್ಯಮ್ - ಇದು ಮಾಡಲ್ಪಡತಕ್ಕದ್ದು, ಮಮ ಕರ್ತವ್ಯಂ ಕಾರ್ಯಂ ನ ವಿದ್ಯತೇ - ನನಗೆ ಮಾಡಬೇಕಾದ ಕೆಲಸವಿಲ್ಲ. ಇಲ್ಲಿ ಪ್ರತಿಯೊಂದು ಉದಾಹರಣೆಯಲ್ಲಿಯೂ ಮೊದಲನೆಯ ವಾಕ್ಯದಲ್ಲಿ ವಿಧೇಯವಾಗಿ ಉಪಯೋಗಿಸಿರುವ ಕೃದಂತವನ್ನೇ ಎರಡನೆಯದರಲ್ಲಿ ವಿಶೇಷಣವಾಗಿ ಉಪಯೋಗಿಸಿದೆ.

೪. ಈ ಕೃದಂತಗಳು ವಿಶೇಷಣಗಳಾದ್ದರಿಂದ ಯಾವಾಗಲೂ ತಮ್ಮ ವಿಶೇಷ್ಯಕ್ಕೆ ಅನುಗುಣವಾದ ಲಿಂಗವಿಭಕ್ತಿವಚನಗಳುಳ್ಳವಾಗಬೇಕು. ಉದಾ : (೧) ರಾಮ ಆಗತಃ, ರಾಮಲಕ್ಷ್ಮಣೌ ಆಗತೌ, ರಾಮಲಕ್ಷ್ಮಣಭರತಶತ್ರುಘ್ನಾ ಆಗತಾಃ (೨) ಸೀತಾ ಆಗತವತೀ, ಸೀತಾ ಊರ್ಮಿಳಾ ಚ ಆಗತವತ್ಯೌ, ಸೀತಾ ಊರ್ಮಿಳಾ ಮಾಣ್ಡವೀ ಚ ಆಗತವತ್ಯಃ (೩) ಆಗತಂ ಬ್ರಾಹ್ಮಣಂ ಪಶ್ಯ, ಆಗತೌ ಬ್ರಾಹ್ಮಣೌ ಪಶ್ಯ, ಆಗತಾನ್ ಬ್ರಾಹ್ಮಣಾನ್ ಪಶ್ಯ - ಇತ್ಯಾದಿ.

೫. ಧಾರಯನ್ - ಮುಂತಾದ ವರ್ತಮಾನಕೃದಂತಗಳನ್ನು ಕನ್ನಡಿಸುವಾಗ ಕೃದಂತಾವ್ಯಯಗಳನ್ನುಪಯೋಗಿಸಬೇಕಾಗುತ್ತದೆ. ಉದಾ : ತಿಷ್ಠನ್ ಪಠತಿ - ನಿಂತುಕೊಂಡು ಓದುತ್ತಾನೆ ; ಸಮ್ಯಗುಚ್ಚಾರಯನ್ ಪಠ - ಚೆನ್ನಾಗಿ ಉಚ್ಚರಿಸುತ್ತಾ ಓದು. ಇವುಗಳಿಗೆ 'ನಿಂತುಕೊಂಡವನಾಗಿ ಓದುತ್ತಾನೆ, ಚೆನ್ನಾಗಿ ಉಚ್ಚರಿಸುವವನಾಗಿ ಓದು' - ಎಂಬುದು ಅಕ್ಷರಾರ್ಥವು.

## ಸಂಖ್ಯಾವಾಚಕಗಳು

ಇಲ್ಲಿ ಕೆಲವು ಸಂಖ್ಯಾವಾಚಕಗಳನ್ನು ಕೊಡುತ್ತೇವೆ. ಇಲ್ಲಿ ಕೊಟ್ಟಿರುವ ಶಬ್ದಗಳೆಲ್ಲ ಏಕವಚನ, ಇವಕ್ಕೆ ಬಹುವಚನವಿಲ್ಲ.

| | | | | |
|---|---|---|---|---|
| ೧೦ | ದಶ | ದಶಮಃ | - | ಹತ್ತನೆಯ |
| ೨೦ | ವಿಂಶತಿಃ | ವಿಂಶಃ | - | ಇಪ್ಪತ್ತನೆಯ |
| ೩೦ | ತ್ರಿಂಶತಿಃ | ತ್ರಿಂಶಃ | - | ಮೂವತ್ತನೆಯ |
| ೪೦ | ಚತ್ವಾರಿಂಶತ್ | ಚತ್ವಾರಿಂಶಃ | - | ನಲವತ್ತನೆಯ |
| ೫೦ | ಪಞ್ಚಾಶತ್ | ಪಞ್ಚಾಶಃ | - | ಐವತ್ತನೆಯ |
| ೬೦ | ಷಷ್ಟಿಃ | ಷಷ್ಟಿತಮಃ | - | ಅರವತ್ತನೆಯ |
| ೭೦ | ಸಪ್ತತಿಃ | ಸಪ್ತತಿತಮಃ | - | ಎಪ್ಪತ್ತನೆಯ |
| ೮೦ | ಅಶೀತಿಃ | ಅಶೀತಿತಮಃ | - | ಎಂಬತ್ತನೆಯ |
| ೯೦ | ನವತಿಃ | ನವತಿತಮಃ | - | ತೊಂಬತ್ತನೆಯ |
| ೧೦೦ | ಶತಮ್ | ಶತತಮಃ | - | ನೂರನೆಯ |
| ೧೦೦೦ | ಸಹಸ್ರಮ್ | ಸಹಸ್ರತಮಃ | - | ಸಾಪಿರದ |

**ವಿಶೇಷ :-** ೧. ನಲವತ್ತೊಂದು ಮುಂತಾದ ಸಂಖ್ಯೆಗಳ ಹೆಸರನ್ನು 'ಏಕವಿಂಶತಿಃ' ಮುಂತಾದವುಗಳಂತೆ ಮಾಡಿಕೊಳ್ಳಬೇಕು. ಉದಾ :- ಏಕಚತ್ವಾರಿಂಶತ್, ದ್ವಾಚತ್ವಾರಿಂಶತ್, ತ್ರಯಶ್ಚತ್ವಾರಿಂಶತ್, ಪಞ್ಚಚತ್ವಾರಿಂಶತ್ ಇತ್ಯಾದಿ. ನಲವತ್ತೊಂಬತ್ತು ಐವತ್ತೊಂಬತ್ತು - ಮುಂತಾದವುಗಳನ್ನು ಏಕೋನತ್ರಿಂಶತ್ ಎಂಬಂತೆ ಮಾಡಿಕೊಳ್ಳಬಹುದು. ಉದಾ ೪೯=ಏಕೋನಪಞ್ಚಾಶತ್, ೫೯ ಏಕೋನಷಷ್ಟಿಃ - ಇತ್ಯಾದಿ. ೮೨ = ದ್ವ್ಯಶೀತಿಃ, ೮೩ = ತ್ರ್ಯಶೀತಿಃ

೨. ನೂರರ ಮೇಲಿನ ಸಂಖ್ಯೆಗಳನ್ನು ಎಷ್ಟು ಹೆಚ್ಚೋ ಆ ಸಂಖ್ಯೆಗೆ ಅಧಿಕ ಅಥವಾ ಉತ್ತರ ಎಂಬುದನ್ನು ಸೇರಿಸಿ ಏರ್ಪಡಿಸಬೇಕು. ಉದಾ :- ಚತ್ವಾರಿಂಶದಧಿಕಂ ಶತಮ್ ೧೪೦. ದ್ವಾಸಪ್ತತ್ಯಧಿಕಂ ತ್ರಿಶತಮ್ - ೩೭೨, ಸಪ್ತತ್ರಿಂಶದುತ್ತರಂ ಸಹಸ್ರಮ್ - ೧೦೩೭ ಇತ್ಯಾದಿ.

೩. ಅನೆಯ ಎಂಬ ಅರ್ಥವನ್ನು ಸೂಚಿಸುವ ಮಾತುಗಳು ಮೂರು ಲಿಂಗಗಳಲ್ಲಿಯೂ ನಡೆಯುವವು. ಪ್ರಥಮಃ, ಪ್ರಥಮಮ್, ಪ್ರಥಮಾ-ಇತ್ಯಾದಿ. ಪ್ರಥಮಾ, ದ್ವಿತೀಯಾ, ತೃತೀಯಾ, - ಈ ಶಬ್ದಗಳನ್ನು ಬಿಟ್ಟರೆ ಮಿಕ್ಕವುಗಳೆಲ್ಲ ಸ್ತ್ರೀಲಿಂಗದಲ್ಲಿ ಈಕಾರಾನ್ತವಾಗಿರುತ್ತವೆ. ಉದಾ : ಅಷ್ಟಮೀ ತಿಥಿಃ- ಎಂಟನೆಯ ತಿಥಿ. ಅಶೀತಿತಮೀ ನಗರೀ- ಎಂಬತ್ತನೆಯ ನಗರವು.

೪. ಏಕ, ದ್ವಿ, ತ್ರಿ, ಚತುರ್- ಶಬ್ದಗಳಿಗೆ ವಿಶೇಷ್ಯದ ಲಿಂಗವಿಭಕ್ತಿ ವಚನಗಳಿರಬೇಕು ; ಪಞ್ಚಶಬ್ದದಿಂದ ಅಷ್ಟಾದಶಶಬ್ದದವರೆಗೆ ವಿಶೇಷ್ಯದ ವಿಭಕ್ತಿಯಿರಬೇಕು. ಉದಾ :- ಏಕಂ ಪುಸ್ತಕಮ್, ದ್ವೌ ಪುರುಷೌ, ತಿಸೃಭಿರ್ಭಾರ್ಯಾಭಿಃ, ಚತುರೋ ಬಾಲಾನ್, ಸಪ್ತಭಿರ್ದಿನೈಃ, ಷೋಡಶಭಿಃ ಕಲಾಭಿಃ, ಏಕೋನವಿಂಶತಿಃ ಮುಂತಾದ ಶಬ್ದಗಳೂ ಎಣಿಸುವ ವಸ್ತುವಿನ ಹೆಸರಿನ ವಿಭಕ್ತಿಯಲ್ಲಿರುವವು ; ಆದರೆ ಇವು ಸ್ವತಂತ್ರವಾಗಿಯೂ ಉಪಯೋಗ ವಾಗುವವು. ಉದಾ :- ತ್ರಿಂಶತಾ ದಿವಸೈಃ - ಮೂವತ್ತು ದಿನಗಳಿಂದ ; ಶತೇನ ಸ್ತ್ರೀಭಿಃ - ನೂರು ಸ್ತ್ರೀಯರೊಡನೆ. ರೂಪಕಾಣಾಂ ಶತಮಸ್ತಿ - ರೂಪಾಯಿಗಳ ನೂರು ಇದೆ (ನೂರರ ಥೈಲಿ ಇದೆ.)

## ಕ್ರಿಯಾಪದಗಳು

ಪಠತಿ (ಪುಟ - ೬೭), ಗಚ್ಛತು (ಪುಟ - ೬೯) - ಎಂಬಂತೆ ರೂಪವನ್ನು ಪಡೆಯುವ ಮಾತುಗಳು. (ಇವುಗಳಿಗೆ ತಿ, ತಃ - ಮುಂತಾದ ಪ್ರತ್ಯಯಗಳನ್ನು ಸೇರಿಸಿಕೊಳ್ಳಬೇಕು).

| | |
|---|---|
| ಪಶ್ಯ-ನೋಡು | ಪ್ರಚ್ಛಾದಯ - '' |
| ಜಿಘ್ರ-ಮೂಸು | ಗಾಯ-ಹಾಡು |
| ಚರ್ವ-ಅಗಿ | ನೃತ್ಯ-ಕುಣಿ |
| ರಸಯ-ಸವಿ | ತಿಷ್ಠ-ನಿಲ್ಲು |
| ಧಾರಯ-ಹಿಡಿದುಕೊ, ಧರಿಸು | ಉತ್ತಿಷ್ಠ-ಏಳು |
| ಅವಲೋಕಯ-ನೋಡು | ಹಸ-ನಗು |
| ಆಚ್ಛಾದಯ-ಮುಚ್ಚು | ಭ್ರಮ-ತಿರುಗಾಡು |

ವಹ- ಹೊರು, (ನದಿ) ಹರಿ
ಕ್ರೀಡ- ಆಡು
ಗಚ್ಛ- ಹೋಗು
ಅನುಭವ- ಅನುಭವಿಸು
ಸ್ಪೃಶ- ಮುಟ್ಟು
ಪತ- ಬೀಳು
ಸಂಚರ- ಓಡಾಡು
ಪ್ರಸರ- ಹರಡು
ನಿವಸ- ವಾಸಮಾಡು
ವಿಶ- ಹೊಗು
ಅಭ್ಯಸ್ಯ- ಅಭ್ಯಾಸಮಾಡು
ಕೂಜ- (ಹಕ್ಕಿ) ಕೂಗು
ಗರ್ಜ - ಗರ್ಜಿಸು
ಲಸ - ಹೊಳೆ
ಪ್ರಸೀದ- ನಿರ್ಮಲವಾಗು
ಆಹ್ಲಾದಯ- ಸಂತೋಷಗೊಳಿಸು
ನಯ- ತೆಗೆದುಕೊಂಡು ಹೋಗು
ಆನಯ- ತೆಗೆದುಕೊಂಡು ಬಾ
ಅಧಿಗಚ್ಛ - ಪಡೆ
ಸಂಪ್ರಕೀರ್ತಯ - (ಗಟ್ಟಿಯಾಗಿ ಕರೆದು) ಕೂಗು
ಪರಿಗಣಯ - ಎಣಿಸು
ಪ್ರಭವ- ಶಕ್ತನಾಗಿರು
ತ್ವರಯ- ತ್ವರೆಮಾಡು
ಧಮ- (ಕೊಳವಿಯಿಂದ) ಊದು
ಉಜ್ಜ್ವಲ- ಉರಿ
ಸ್ಫುಟ- ಸಿಡಿ
ಕ್ಷಿಪ- ಹಾಕು
ಆಲೋಡಯ- ತೊಳಸು
ಕ್ವಥ- ಕುದಿ
ಸಮ್ಮಿಶ್ರಯ- ಕೂಡಿಸು
ತಾಪಯ- ಸುಡು
ಯಚ್ಛ- ಕೊಡು

ಸಮಾಗಚ್ಛ- ಬಾ
ಅಧ್ಯಾಪಯ- ಓದಿಸು
ಶಿಕ್ಷಯ- ಕಲಿಸು
ಲೇಖಯ- ಬರೆಯಿಸು
ಖೇಲ- ಆಡು
ಕಥಯ- ಹೇಳು
ಪೃಚ್ಛ- ಕೇಳು
ವಾಞ್ಛ- ಬಯಸು
ಸ್ನಿಹ್ಯ- ಪ್ರೀತಿಸು
ಪಠ- ಓದು
ಲಿಖ- ಬರೆ
ಸಮರ್ಪಯ- ಒಪ್ಪಿಸು
ಪರಿಪಾಲಯ- ಕಾಪಾಡು
ಜೀವ- ಬದುಕಿರು
ಪ್ರರೋಹ- ಬೆಳೆ
ಚಿರಯ- ತಡಮಾಡು
ಸಾಧಯ- ಸಾಧಿಸು
ಭವ- ಆಗು
ಪ್ರತಿಪಾಲಯ- ಕಾದಿರು
ಶೋಷಯ- ಒಣಗಿಸು
ಸಮುದ್ಘಾಟಯ- ತೆಗೆ
ಸರ- ಸರಿ, ಹೋಗು
ಉದ್ಧರ- ಎತ್ತು
ಶೋಧಯ- ಶುದ್ಧಿಮಾಡು
ಆಜ್ಞಾಪಯ- ಅಪ್ಪಣೆಮಾಡು
ವೀಜಯ- (ಬೀಸಣಿಗೆಯಿಂದ) ಬೀಸು
ಸಂವಾಹಯ- ಕಾಲನ್ನು ಒತ್ತು
ಪರಿವೇಷಯ- ಬಡಿಸು
ವಿಸ್ಮರ- ಮರೆ
ಪ್ರೇಷಯ- ಕಳುಹಿಸು
ವ್ಯವಕಲಯ - (ಸಂಖ್ಯೆಯನ್ನು) ಕಳೆ
ಗುಣಯ- ಗುಣಿಸು
ಭಾಜಯ- ಭಾಗಿಸು

ವಿಕ್ಷಿಪ-ಹಾಕು, ಎರಚು

ವಾಚಯ-ಓದು

ಉಪದಿಶ-ಹೇಳಿಕೊಡು

ಪ್ರಶಂಸ-ಹೊಗಳು

ಸಂತೋಲಯ - (ಬಿಲ್ಲನ್ನು) ಎತ್ತು

ಪೂರಯ-(ಬಾಣವನ್ನು) ಹೂಡು

ಆರೋಪಯ- (ಬಿಲ್ಲಿಗೆ) ಹೆದೆಯೇರಿಸು

## ಲೇಖಿಷ್ಯತಿ ಎಂಬಂತೆ ರೂಪವನ್ನು ಪಡೆಯುವ ಕ್ರಿಯಾಪದಗಳು

ಕರಿಷ್ಯತಿ-ಮಾಡುವನು

ಅನುಭವಿಷ್ಯತಿ-ಅನುಭವಿಸುವನು

ಆಗಮಿಷ್ಯಃ - ಬರುವನು

ದಾಸ್ಯಾಮಿ-ಕೊಡುವೆನು

ಜ್ಞಾಸ್ಯಥ-ತಿಳಿಯುವಿರಿ

ಪಠಿಷ್ಯಾಮಿ-ಓದುವೆನು

ಲೇಖಿಷ್ಯತಿ-ಬರೆಯುವನು

ಆಹ್ವಾಸ್ಯಾಮಿ-ಕರೆಯುವೆನು

ಆಯಾಸ್ಯಾಮಿ-ಬರುವೆನು

ನಿಯೋಕ್ಷ್ಯಾಮಃ - ಕೆಲಸಕ್ಕೆ ಇಡುವೆವು

## ಅಯಚ್ಛತ್ ಎಂಬಂತೆ ನಡೆಯುವ ಕ್ರಿಯಾಪದಗಳು

ಸಮಚರತ್-ಸಂಚರಿಸಿದನು

ನ್ಯವಸತ್-ವಾಸವಾಗಿದ್ದನು

ಪರ್ಯಪಾಲಯತ್-ಕಾಪಾಡುತ್ತಿದ್ದನು

ಅಪೃಚ್ಛತ್-ಕೇಳಿದನು

ಸಮರ್ಪಯತ್-ಒಪ್ಪಿಸಿದನು

ಪ್ರಾಭವತ್-ಶಕ್ತನಾದನು

ಅಪಶ್ಯತ್ - ನೋಡಿದನು

ಆಜ್ಞಾಪಯತ್-ಅಪ್ಪಣೆಮಾಡಿದನು

ಅಧ್ಯಾಪಯತ್ - ಓದಿಸಿದನು

ಉಪಾದಿಶತ್-ಹೇಳಿಕೊಟ್ಟನು

ಪ್ರಾಯಚ್ಛತ್-ಕೊಟ್ಟನು

ಅಭವತ್-ಆದನು

ಪ್ರಾಶಂಸತ್-ಹೊಗಳಿದನು

ಸಮತೋಲಯತ್-ಬಿಲ್ಲುಎತ್ತಿದನು

ಅಪೂರಯತ್-ಬಿಲ್ಲಿಗೆ ಹೂಡಿದನು

## ವರ್ತತೇ ಎಂಬಂತೆ ನಡೆಯುವ ಕ್ರಿಯೆಗಳು

ಲಭ್ಯತೇ-ಸಿಕ್ಕುತ್ತದೆ

ಭಾಷತೇ-ಮಾತಾಡುತ್ತಾನೆ

ನಿಷ್ಪಾದ್ಯತೇ-ಉಂಟಾಗುತ್ತದೆ

ವಿಲಮ್ಬತೇ-ತಡಮಾಡುತ್ತಾನೆ

ಅತಿವರ್ತತೇ-ಮೀರುತ್ತಾನೆ

ಉಚ್ಯತೇ-ಹೇಳಲ್ಪಡುತ್ತದೆ

ವರ್ತತೇ-ಇದೆ

ಲಮ್ಬತೇ-ಜೋತುಬಿದ್ದಿದೆ

ದೃಶ್ಯತೇ-ಕಾಣುತ್ತದೆ

ಪಾರ್ಯತೇ-ಶಕ್ತನಾಗಿದ್ದಾನೆ

ಬಹುಮನ್ಯತೇ-ಅಭಿಮಾನಪಡುತ್ತಾನೆ

ನೀಯತೇ-ಒಯ್ಯಲ್ಪಡುತ್ತದೆ

ಭೋಜಯತೇ-ಊಟಮಾಡಿಸುತ್ತಾನೆ

ವಿದ್ಯತೇ-ಇದೆ

ಅಪೇಕ್ಷತೇ-ಅಪೇಕ್ಷಿಸುತ್ತಾನೆ

ಸಂಭಾವ್ಯತೇ-ಊಹಿಸಲ್ಪಡುತ್ತದೆ

ಸಂಪದ್ಯತೇ-ಆಗುತ್ತದೆ

ದೀಯತೇ-ಕೊಡಲ್ಪಡುತ್ತದೆ

ಸಂಜಾಯತೇ-ಹುಟ್ಟುತ್ತದೆ, ಆಗುತ್ತದೆ

ವಿರಾಜತೇ-ಬೆಳಗುತ್ತದೆ

ಶೋಭತೇ-ಚೆನ್ನಾಗಿ ಕಾಣುತ್ತದೆ

ವಿಜಯತೇ-ಜಯಿಸುತ್ತಾನೆ

ಭಜತೇ-ಸೇವಿಸುತ್ತಾನೆ

ಪಚ್ಯತೇ-ಬೇಯಿಸಲ್ಪಡುತ್ತದೆ

ಪೂಜ್ಯತೇ-ಪೂಜಿಸಲ್ಪಡುತ್ತಾನೆ

ಪ್ರತೀಕ್ಷತೇ-ಕಾದುಕೊಂಡಿರುತ್ತಾನೆ

ಕಥ್ಯತೇ- ಹೇಳಲ್ಪಡುತ್ತದೆ
ಶಿಷ್ಯತೇ- ಉಳಿಯುತ್ತದೆ
ಉಪಚೀಯತೇ- ದಪ್ಪನಾಗುತ್ತದೆ
ಉತ್ಸಹತೇ- ಶಕ್ತನಾಗುತ್ತಾನೆ
ಸೇವ್ಯತೇ- ಸೇವಿಸಲ್ಪಡುತ್ತಾನೆ
ಲಭತೇ - ಪಡೆಯುತ್ತಾನೆ
ಆವ್ರಿಯತೇ- ಮುಚ್ಚಲ್ಪಡುತ್ತದೆ

ಸಂಪ್ಲವತೇ - ತೇಲುತ್ತದೆ
ಹೀಯತೇ- ಬಿಡಲ್ಪಡುತ್ತದೆ- ನಾಶವಾಗುತ್ತದೆ
ಕ್ಷೀಯತೇ- ಸವೆಯುತ್ತದೆ
ಭಜ್ಯತೇ- ಮುರಿಯಲ್ಪಡುತ್ತದೆ
ಉಪತಿಷ್ಠತೇ- ಹತ್ತಿರ ಬರುತ್ತಾನೆ
ಅಧಿಶ್ರಿಯತೇ- ಕಾಯಿಸಲ್ಪಡುತ್ತದೆ
ನಿಧೀಯತೇ- ಇಡಲ್ಪಡುತ್ತದೆ
ವಿಕತ್ಥತೇ- ಜಂಭಕೊಚ್ಚುತ್ತಾನೆ

## ಈ ಪುಸ್ತಕದಲ್ಲಿ ಬಂದಿರುವ ಇನ್ನೂ ಕೆಲವು ಕ್ರಿಯಾಪದಗಳು

ಉದೇತಿ - ಉದಯಿಸುತ್ತಾನೆ
ಭಾತಿ - ಹೊಳೆಯುತ್ತಾನೆ, ತೋರುತ್ತದೆ
ಆಖ್ಯಾತಿ- ಹೇಳುತ್ತಾನೆ
ಪ್ರತಿಹನ್ತಿ-(ಕಣ್ಣನ್ನು) ಕುಕ್ಕುತ್ತದೆ
ಅಸ್ತಿ-ಇದಾನೆ
ಸ್ತಃ(ಇಬ್ಬರು) ಇದಾರೆ
ಸನ್ತಿ - ಇದಾರೆ
ಅಸಿ - ಇದೀಯೆ
ಸ್ಥಃ -(ಇಬ್ಬರು) ಇದೀರಿ
ಸ್ಥ- ಇದೀರಿ
ಅಸ್ಮಿ- ಇದೇನೆ
ಸ್ವಃ (ಇಬ್ಬರು) ಇದೇವೆ
ಸ್ಮಃ- ಇದೇವೆ
ಕುರೋತಿ- ಮಾಡುತ್ತಾನೆ
ಕುರುತಃ(ಇಬ್ಬರು) ಮಾಡುತ್ತಾರೆ
ಕುರ್ವನ್ತಿ - ಮಾಡುತ್ತಾರೆ
ಕರೋಷಿ- ಮಾಡುತ್ತೀಯೆ
ಕುರುಥಃ(ಇಬ್ಬರು) ಮಾಡುತ್ತೀರಿ
ಕುರುಥ- ಮಾಡುತ್ತೀರಿ
ಕರೋಮಿ- ಮಾಡುತ್ತೇನೆ
ಕುರ್ವಃ -(ಇಬ್ಬರು) ಮಾಡುತ್ತೇವೆ
ಕುರ್ಮಃ - ಮಾಡುತ್ತೇವೆ
ಅಕುರ್ವನ್ - ಮಾಡಿದರು
ಅಜಾಯನ್ತ- ಉಂಟಾದರು

ಯಾತಿ- ಹೋಗುತ್ತಾನೆ
ಆಪ್ನೋತಿ- ಪಡೆಯುತ್ತಾನೆ
ತನೋತಿ- ವಿಸ್ತರಿಸುತ್ತದೆ
ವಿತನೋತಿ - ವಿಸ್ತರಿಸುತ್ತದೆ
ಆರಭೇತಾಮ್- ಇಬ್ಬರು ಆರಂಭಿಸಿದರು
ಪ್ರಾಪ್ನೋತ್ - ಪಡೆದನು
ಬಭೂವ- ಇದ್ದನು
ಅಬ್ರವೀತ್ - ಹೇಳಿದನು
ಸಮಧತ್ತ - ಸೇರಿಸಿದನು
ಅಗೃಹ್ಣನ್ - ಹಿಡಿದರು
ಪ್ರತಸ್ಥೇ- ಹೊರಟನು
ತ್ಯಜೇತ್- ಬಿಡಬೇಕು
ಭವೇಯಮ್ - ಆದೇನು
ಪಠೇತ್- ಓದಬೇಕು
ಆನೀಯತಾಮ್ - ತರಲ್ಪಡಲಿ
ಏಹಿ - ಬಾ
ಕರವಾಣಿ - (ನಾನು) ಮಾಡೋಣ
ಸಮಾಸ್ತೀರ್ಯತಾಮ್ - ಹಾಸಲ್ಪಡಲಿ
ಭುಙ್ಕ್ತೇ- ಊಟಮಾಡುತ್ತಾನೆ
ನಿಯುಙ್ಕ್ತೇ - ಕೆಲಸಕ್ಕಿಡುತ್ತಾನೆ
ಶಕ್ನೋತಿ - ಶಕ್ತನಾಗಿದ್ದಾನೆ
ಬಧ್ನನ್ತಿ - ಬಿಗಿಮಾಡುತ್ತಾರೆ
ಉಪಕರೋತಿ - ಸಹಾಯಮಾಡುತ್ತಾನೆ
ದದಾತಿ - ಕೊಡುತ್ತಾನೆ

## ಅವ್ಯಯಕೃದನ್ತಗಳು

ಸಂಕೋಚಯಿತುಮ್ - ಮಡಿಸುವದಕ್ಕೆ
ವಿಸ್ತಾರಯಿತುಮ್ - ಅಗಲಿಸುವದಕ್ಕೆ
ಪಠಿತುಮ್ - ಓದುವದಕ್ಕೆ
ಲೇಖಿತುಮ್ - ಬರೆಯುವದಕ್ಕೆ
ಸಂಭಾಷಿತುಮ್ - ಮಾತಾಡುವದಕ್ಕೆ
ಪಲಾಯಿತುಮ್ - ಓಡುವದಕ್ಕೆ
ಗನ್ತುಮ್ - ಹೋಗುವದಕ್ಕೆ
ಉನ್ನಮಯಿತುಮ್ - ಎತ್ತುವದಕ್ಕೆ
ಅವನಮಯಿತುಮ್ - ಬಗ್ಗಿಸುವದಕ್ಕೆ
ಪ್ರತಿಪೂಜ್ಯ - ಗೌರವಿಸು
ಆಹತ್ಯ - ಸೇರಿಸಿ
ಆಕೃಷ್ಯ - ಎಳೆದು
ಉಪಾಗತ್ಯ - ಹತ್ತಿರಕ್ಕೆ ಬಂದು
ಪ್ರಕ್ಷಾಲ್ಯ - ತೊಳೆದು
ಆದಾಯ - ತೆಗೆದುಕೊಂಡು
ಸಮ್ಮಿಶ್ರ್ಯ - ಕೂಡಿಸಿ
ಪ್ರಜ್ವಾಲ್ಯ - ಹತ್ತಿಸಿ
ಅಪನೀಯ - ತೆಗೆದುಹಾಕಿ
ಆನೀಯ - ತಂದ
ಪರಾವೃತ್ಯ - ಹಿಂತಿರುಗಿ
ಸಮ್ಮನ್ತ್ರ್ಯ - ಆಲೋಚಿಸಿ
ದ್ರಷ್ಟುಮ್ - ನೋಡುವದಕ್ಕೆ
ಶ್ರೋತುಮ್ - ಕೇಳುವದಕ್ಕೆ
ಅನ್ವೇಷ್ಟುಮ್ - ಹುಡುಕುವದಕ್ಕೆ
ಶಿಕ್ಷಿತುಮ್ - ಕಲಿಸುವದಕ್ಕೆ
ಘ್ರಾತುಮ್ - ಮೂಸುವದಕ್ಕೆ
ಶ್ವಸಿತುಮ್ - ಉಸಿರುಬಿಡುವದಕ್ಕೆ
ಆಸಿತುಮ್ - ಕೂರುವದಕ್ಕೆ
ನಾಶಯಿತುಮ್ - ನಾಶಮಾಡುವದಕ್ಕೆ
ಪ್ರಕಾಶಿತುಮ್ - ಬೆಳಗುವದಕ್ಕೆ
ನಿರೀಕ್ಷಿತುಮ್ - ನಿಟ್ಟಿಸುವದಕ್ಕೆ
ಚೋರಯಿತುಮ್ - ಕದಿಯುವದಕ್ಕೆ
ಸೋಢುಮ್ - ಸಹಿಸುವದಕ್ಕೆ
ದಾತುಮ್ - ಕೊಡುವದಕ್ಕೆ
ಆರೋಪ್ಯ - ಹೆದೆಯನ್ನೇರಿಸಿ
ಉತ್ಥಾಯ - ಎದ್ದುನಿಂತು
ಪ್ರಾಪ್ಯ - ಹೊಂದಿ
ತ್ಯಕ್ತ್ವಾ - ಬಿಟ್ಟು
ದೃಷ್ಟ್ವಾ - ನೋಡಿ
ಗತ್ವಾ - ಹೋಗಿ
ಹತ್ವಾ - ಕೊಂದು
ದತ್ವಾ - ಕೊಟ್ಟು
ಲಿಖಿತ್ವಾ - ಬರೆದು
ಶ್ರುತ್ವಾ - ಕೇಳಿ
ಕೃತ್ವಾ - ಮಾಡಿ
ಹಿತ್ವಾ - ಬಿಟ್ಟು

ವಿಶೇಷ : ಮೇಲಿನ ಶಬ್ದಗಳಿಗೆಲ್ಲ ಅ ಎಂಬುದನ್ನು ಮೊದಲಲ್ಲಿಟ್ಟರೆ ಅವು ನಿಷೇಧಾರ್ಥಕವಾಗುವವು. ಉದಾ : ದಾತುಮ್ - ಕೊಡುವದಕ್ಕೆ, ಅದಾತುಂ ಕೊಡದಿರುವದಕ್ಕೆ ; ಆರೋಪ್ಯ - ಹೆದೆಯನ್ನೇರಿಸಿ ಅನಾರೋಪ್ಯ - ಹೆದೆಯೇರಿಸದೆ ; ದತ್ವಾ - ಕೊಟ್ಟು, ಆದತ್ವಾ - ಕೊಡದೆ.

## ಕ್ರಿಯಾವಿಶೇಷಣಗಳು, ಅವ್ಯಯಗಳು, ನಿಪಾತಗಳು

ಈ ಪಟ್ಟಿಯಲ್ಲಿರುವ ಸಂಖ್ಯೆಗಳು ಆಯಾ ವಿಭಕ್ತಿಯ ಮಾತಿನ ಸಂಬಂಧವಿರುವಂತೆಯೇ ಆಯಾ ಅವ್ಯಯವನ್ನುಪಯೋಗಿಸಬೇಕೆಂದು ತಿಳಿಸುವವು.

೧

ಕಥಮ್ - ಹೇಗೆ
ಏವಮ್ - ಹೀಗೆ
ತಥಾ - ಹಾಗೆ
ಇವ* ಅಂತೆ
ಏವ* ಏ
ಉಚ್ಚೈಃ - ಗಟ್ಟಿಯಾಗಿ
ನೀಚೈಃ - ಮೆಲ್ಲಗೆ

ಪರಮ್-ಆದರೆ
ತು★ ಆದರೆ
ಪುನಃ★ ಆದರೆ
ತರ್ಹಿ-ಹಾಗಾದರೆ
ನಾಮ-ಎಂಬ
ವಿನಾ-(೨,೩,೫)-ಇಲ್ಲದೆ, ಬಿಟ್ಟು
ತೂಷ್ಣೀಮ್-ಸುಮ್ಮನೆ
ಸಮ್ಯಕ್-ಚೆನ್ನಾಗಿ
ಪೃಥಕ್-ಬೇರೆಯಾಗಿ
ದಿಷ್ಟ್ಯಾ-ಅದೃಷ್ಟದಿಂದ
ನಮಃ-(೪) ನಮಸ್ಕಾರ
ಸ್ವಸ್ತಿ-(೪) ಒಳ್ಳೆಯದು
ಸುಷ್ಠು-ಚೆನ್ನಾಗಿ
ಸಾರ್ಧಮ್-(೩) ಜತೆಯಲ್ಲಿ, ಒಡನೆ
ಸಹ-(೩) ಒಡನೆ
ಸಾನನ್ದಮ್-ಆನಂದವಾಗಿ
ಕಲಮ್-ಇಂಪಾಗಿ
ಅವಶ್ಯಮ್-ಅವಶ್ಯವಾಗಿ
ಸಗೀತಮ್-ರಾಗವಾಗಿ
ಅಚಲಮ್-ಅಲ್ಲಾಡದೆ
ಸಮಮ್-(೩)-ಒಡನೆ
ಕೇವಲಮ್-ಮಾತ್ರ
ಮಾ-ಬೇಡ
ನ-ಇಲ್ಲ, ಅಲ್ಲ
ನೋ-ಇಲ್ಲ, ಅಲ್ಲ
ಹಿ★ - ಏಕೆಂದರೆ, ಏ
ಚೇತ್★-ರೆ
ಚ★-ಮತ್ತು
ಇತಿ-ಎಂದು
ಅಪಿ★-ಕೂಡ
ನೂನಮ್-ನಿಜವಾಗಿ, ಇರಬಹುದು
ಸ್ವಗತಮ್-ತನ್ನಲ್ಲಿ ತಾನು
ಶಾಕಾರ್ಥಮ್-ಕಾಯಿಪಲ್ಯಕ್ಕಾಗಿ
ಪಾಕಾರ್ಥಮ್-ಅಡಿಗೆಗಾಗಿ
ಪಙ್ಕ್ತಿಶಃ - ಸಾಲಾಗಿ
ಸ್ವಪುತ್ರವತ್-(ಮಗನ) ಹಾಗೆ
ಬಹುಧಾ-ಬಹುಬಗೆಯಾಗಿ
ಕಥಂಚಿತ್-ಹೇಗೋಮಾಡಿ
ಇತ್ಯಪಿ-ಹೀಗೂ
ನಾಪಿ- ಹಾಗೂ ಅಲ್ಲ, ಹಾಗೂ ಇಲ್ಲ
ತಥಾಪಿ-ಹಾಗಾದರೂ
ಇತ್ಯೇವ-ಎಂದೇ
ತಥೈವ-ಹಾಗೆಯೇ
ನೈವ-ಅಲ್ಲವೇ ಅಲ್ಲ, ಇಲ್ಲವೇ ಇಲ್ಲ
ಚೈವ - ಮತ್ತೂ
ಮೈವಮ್-ಹೀಗಲ್ಲ, ಬೇಡ
ಮಾ ಮೈವಮ್-ಬೇಡ, ಬೇಡ
ತದೇವಮ್-ಅಂತು ಹೀಗೆ
ಏವಂ ಚ - ಈ ಪರಿಯಲ್ಲಿ, ಅಂತು
ನೋ ಚೇತ್-ಇಲ್ಲದಿದ್ದರೆ
ಅಥವಾ- ಹಾಗಿಲ್ಲದಿದ್ದರೆ
ಪರಂ ತು- ಆದರೆ
ನ ಚ - ಊ ಅಲ್ಲ

ವಿಶೇಷ :★ ಹೀಗೆ ಗುರುತುಮಾಡಿರುವ ಶಬ್ದಗಳನ್ನು ವಾಕ್ಯದ ಮೊದಲು ಉಪಯೋಗಿಸಬಾರದು. ಚಂದ್ರ ಇವ, ರಾಮ ಏವ, ತೇನ ಹಿ, ಗಚ್ಛತಿ ಚೇತ್, ಸ ಚ, ಸೋऽಪಿ, ಸ ತು, ಕಥಂ ಪುನಃ - ಎಂಬಂತೆ ಶಬ್ದವನ್ನುಪಯೋಗಿಸಿದ ಮೇಲೆಯೇ ಇವುಗಳನ್ನುಪಯೋಗಿಸಬೇಕು.

೨

ಕುತ್ರ-ಎಲ್ಲಿ ?
ಅತ್ರ - ಇಲ್ಲಿ
ತತ್ರ-ಅಲ್ಲಿ
ಏಕತ್ರ-ಒಂದುಕಡೆ
ಆದಿತಃ -ಮೊದಲಿನಿಂದ
ಸಮನ್ತತಃ - ಸುತ್ತಲೂ
ಪುರತಃ-ಮುಂದೆ
ಸರ್ವತಃ-ಎಲ್ಲಾ ಕಡೆಯಲ್ಲಿಯೂ
ದೂರತಃ-ದೂರವಾಗಿ
ಅಧಸ್ತಾತ್-ಕೆಳಗೆ
ಪಶ್ಚಾತ್-ಹಿಂದೆ
ಸಾಕ್ಷಾತ್-ನೇರಾಗಿ
ಆವಿಃ - ಪ್ರಕಟವಾಗಿ

ಕುತ್ರಾಪಿ- ಎಲ್ಲಿಯೋ
ಅತ್ರೈವ- ಇಲ್ಲಿಯೇ
ತತ್ರತತ್ರ- ಅಲ್ಲಲ್ಲಿ
ತತಃಪರಮ್- ಅಲ್ಲಿಂದ ಮುಂದೆ
ಇತಸ್ತತಃ- ಅತ್ತಿತ್ತ

೩

ಕದಾ- ಯಾವಾಗ ?
ಅಧುನಾ- ಈಗ
ಇದಾನೀಮ್- ಈಗ
ತದಾ- ಆಗ
ತದಾನೀಮ್- ಆಗ
ಅದ್ಯ- ಇಂದು, ಈಗ
ಹ್ಯಃ - ನಿನ್ನೆ
ಶ್ವಃ - ನಾಳೆ
ಅನ್ಯತ್ರ- ಇನ್ನೊಂದು ಕಡೆ
ಇಹ - ಇಲ್ಲಿ
ಬಹಿಃ (೫)- ಹೊರಗೆ
ಅನ್ತಃ (೬) - ಒಳಗೆ
ಉಪರಿ - (೬) - ಮೇಲೆ
ಪರ್ಯನ್ತಮ್- ವರೆಗೆ
ಪ್ರಥಮಮ್- ಮೊದಲು
ಅಥ- ಆಮೇಲೆ
ಪುರಾ- ಪೂರ್ವದಲ್ಲಿ
ಜಾತು- ಎಂದಾದರೂ
ಯಾವತ್ (೨) ವರೆಗೆ
ಅನು- (೨) ತರುವಾಯ
ದ್ವಿಃ (೬) ಎರಡು ಸಲ
ಚಿರಾಯ- ಬೇಗನೆ
ಅಚಿರೇಣ - ಬೇಗನೆ
ಕ್ಷಿಪ್ರಮ್ ,,
ಝಟಿತಿ- ,,
ತ್ವರಿತಮ್ ,,
ದ್ರುತಮ್ ,,
ಕುತ್ರಾಪಿ- ಎಲ್ಲಿಯೋ
ಕದಾಚಿತ್- ಒಂದಾನೊಂದು ಸಲ
ನ ಕದಾಚನ- ಯಾವಾಗಲೂ ಇಲ್ಲ
ನ ಕದಾಪಿ ,, ,,
ಅದ್ಯಾಪಿ- ಈಗಲೂ

ಇತ ಊರ್ಧ್ವಮ್- ಇನ್ನುಮೇಲೆ
ಅತಃ ಪರಮ್- ,,
ತತಃಪರಮ್- ಅಲ್ಲಿಂದ ಮುಂದಕ್ಕೆ
ವಾರಂವಾರಂ - ಮತ್ತೆಮತ್ತೆ
ಪರಶ್ವಃ- ನಾಡಿದ್ದು
ಪೂರ್ವತರೇದ್ಯುಃ - ಮೊನ್ನೆ
ಸದ್ಯಃ - ಕೂಡಲೆ
ಸಹಸಾ- ,,
ಪುನಃ - ಮತ್ತೆ
ಅನುಪದಮ್ - ಹಿಂದೆಯೆ, ಕೂಡಲೆ
ಪೂರ್ವಮ್ - (೫) - ಮೊದಲು
ಪರಮ್ - (೫) - ತರುವಾಯ
ಪಶ್ಚಾತ್- ಆಮೇಲೆ
ತತಃ - ಆ ಕಾರಣದಿಂದ
ಯತಃ - ಏಕೆಂದರೆ
ಅತೀವ - ಬಹುವಾಗಿ
ವಿಶೇಷತಃ - ಮುಖ್ಯವಾಗಿ
ಈಷತ್- ಸ್ವಲ್ಪವಾಗಿ
ನಿತರಾಮ್- ಬಹಳವಾಗಿ
ಪ್ರಾಯಶಃ- ಬಲುಮಟ್ಟಿಗೆ
ಕಿಂಪುನಃ - ಇನ್ನು ಹೇಳುವದೇನು ?
ಪ್ರತಿದಿನಮ್ - ದಿನದಿನವೂ
ಯಥಾಪೂರ್ವಮ್ - ಎಂದಿನಂತೆ
ಶೀಘ್ರತರಮ್ - ಬಹುಬೇಗ

೪

ತತ್- ಆದ್ದರಿಂದ
ಕಿಮ್ - ಏಕೆ ?
ಕಿಮಿತಿ ,,
ಕಿಮರ್ಥಮ್- ಏತಕ್ಕಾಗಿ, ಏಕೆ ?
ಅತ ಏವ - ಆದ್ದರಿಂದಲೇ
ಇತಃ - ಈ ಕಾರಣದಿಂದ
ಯಥಾಶಕ್ತಿ - ಕೈಲಾದಷ್ಟು
ಹೇ- ಎಲೈ
ಭೋಃ - ಎಲೈ
ರೇ - ಎಲಾ
ಅರೇ - ಎಲಾ
ಅಹೋ - ಆಶ್ಚರ್ಯ
ಅಯೇ- ಆಹಾ

# ಕನ್ನಡ-ಸಂಸ್ಕೃತ ಶಬ್ದಕೋಶ

ಇಲ್ಲಿ ದಪ್ಪನಾಗಿ ಅಚ್ಚಾಗಿರುವವು ಅಭ್ಯಾಸದ ಸಂಖ್ಯೆಗಳು ; ಶಬ್ದದ ಮುಂದೆ ಇರುವವು ಆಯಾ ಶಬ್ದದ ರೂಪಗಳನ್ನು ಹೇಗೆ ಮಾಡಿಕೊಳ್ಳಬೇಕೆಂಬುದನ್ನು ತೋರಿಸುವ ಮಾದರಿಯ ಶಬ್ದರೂಪಾವಳಿಯ ಪುಟದ ಸಂಖ್ಯೆಗಳು. 'ಅ' ಎಂದರೆ ಶಬ್ದಕ್ಕೆ ಲಿಂಗವಿಭಕ್ತಿವಚನ ರೂಪಗಳಿಲ್ಲವೆಂದು ಸಂಕೇತ.

**೧**

ಯಾರು ? ಕಃ (೭೧), ಹೆಸರು - ನಾಮಧೇಯಮ್ (೮೨), ಈವೂರು- ಏತದ್ಗ್ರಾಮಃ (೬೨), ಯಾವಾಗ ?- ಕದಾ (ಅ). ಇವನಿಗೆ ಸಂಸ್ಕೃತವು ತಿಳಿಯುತ್ತದೆ- ಅಯಂ ಸಂಸ್ಕೃತಂ ಜಾನಾತಿ. ಕನ್ನಡವನ್ನು - ಕನ್ನಡಮ್ (೬೨), ಕರ್ನಾಟಕಭಾಷಾಮ್ (೬೪), ಏನು ಬೇಕು ?- ಕಿಂ ವಾಞ್ಛಿತಮ್?

**೨**

ನಿನ್ನೆ-ಹ್ಯಃ (ಅ), ರಾತ್ರೆ- ರಾತ್ರಿಃ (೬೫), ಕಳ್ಳನು - ಸ್ತೇನಃ (೬೨), ನುಗ್ಗಿದನು - ಪ್ರವಿಷ್ಟಃ (೬೨), ಮಲಗುವ ಕೋಣೆ - ಶಯ್ಯಾಗೃಹಮ್ (೬೨) ಹೋದನು-ಅಗಚ್ಛತ್, ಪೆಟ್ಟಿಗೆ- ಪೇಟಿಕಾ (೬೪), ಇತ್ತು- ಆಸೀತ್, ರೇಶ್ಮೆಯ ಬಟ್ಟೆ- ಕೌಶೇಯವಸ್ತ್ರಮ್ (೬೨), ಚಿನ್ನದ ಉಂಗುರ- ಸ್ವರ್ಣಮಯೀ ಊರ್ಮಿಕಾ, ಸ್ವರ್ಣಮುದ್ರಿಕಾ (೬೪), ತೆಗೆದುಕೊಂಡು - ಗೃಹೀತ್ವಾ (ಅ), ಹಿತ್ತಲುಬಾಗಿಲು-ನಿಷ್ಕುಟದ್ವಾರಮ್ (೬೨), ಓಡಿದನು- ಪ್ರಧಾವಿತಃ(೬೨).

**೩**

ಹೊಟ್ಟೆ - ಉದರಮ್ (೬೨), ಸುಮ್ಮನೆ - ತೂಷ್ಣೀಮ್ (ಅ), ಕೂತುಕೊಂಡಿರುತ್ತದೆ- ಉಪವಿಶತಿ (೭೬), ಆದರೋ-ತು, ಕೆಲಸಮಾಡುತ್ತೇವೆ- ವ್ಯಾಪೃತಾಃ (೬೨), ಕೈ-ಪಾಣಿಃ (೬೫), ತೆಗೆದುಕೊಳ್ಳುತ್ತವೆ- ಗೃಹ್ಣನ್ತಿ, ಚೆನ್ನಾಗಿ - ಸಮ್ಯಕ್, ತಿರಿವಿಹಾಕುತ್ತದೆ-ಪರಿವರ್ತಯತಿ (೮೬); ಆಗ-ತದಾ, ತುಂಬಿಕೊಳ್ಳುತ್ತದೆ-ಪೂರಯತಿ (೭೬), ಇನ್ನು ಮೇಲೆ- ಇತಃಪರಮ್, ರುಚಿನೋಡಬೇಡ- ಮಾ ರಸಯ (೭೮), ಅಗಿಯಬೇಡಿರಿ, ಮಾ ಚರ್ವತ (೭೮) ತರಬೇಡಿರಿ- ಮಾ ಆನಯತ (೭೮), ಏನುಮಾಡುವದು ನೋಡೋಣ - ಕಿಂ ಕರಿಷ್ಯತಿ ಪಶ್ಯಾಮಃ.

**೪**

ಪೂರ್ವದಲ್ಲಿ - ಪುರಾ (ಅ), ಅಣ್ಣತಮ್ಮ - ಭ್ರಾತೃ (೬೬), ಹಿರಿಯನು (ಇಬ್ಬರಲ್ಲಿ) - ಜ್ಯಾಯಾನ್, (ಇಬ್ಬರಿಗಿಂತ ಹೆಚ್ಚು ಜನರಲ್ಲಿ) - ಜ್ಯೇಷ್ಠಃ (೬೨), ಮಕ್ಕಳು - ಅಪತ್ಯಾನಿ (೬೨), ಪುತ್ರಾಃ (೬೨), ಹೆಸರಿನಿಂದ - ನಾಮ್ನಾ, ಪ್ರಸಿದ್ಧರಾದರು - ಪ್ರಖ್ಯಾತಾಃ(೬೨), ಅವರಲ್ಲೆಲ್ಲ-ತೇಷು (೭೧), ಸರ್ವೇಷು (೭೦), ಹೆಂಡತಿ-ಭಾರ್ಯಾ (೬೪), ಮೂವರು-ತ್ರಯಃ (೭೫), ಕಿರಿಯವಳು (ಇಬ್ಬರಲ್ಲಿ)-ಕನೀಯಸೀ (೬೪), (ಅನೇಕರಲ್ಲಿ) ಕನಿಷ್ಠಾ (೬೪), ದ್ರೋಣಾಚಾರ್ಯರಿಂದ ಕಲಿತುಕೊಂಡರು-ದ್ರೋಣಾಚಾರ್ಯೇಣ ಶಿಕ್ಷಿತಾಃ.

ನೂರು ವರ್ಷಗಳ ಹಿಂದೆ - ಶತವರ್ಷೇಭ್ಯಃ ಪ್ರಾಕ್ (ಅ), ಸರ್ಕಾರದ ಸ್ಕೂಲು - ರಾಜಕೀಯಶಾಲಾ (೬೪), ಬಲ್ಲವರಾಗಿರಲಿಲ್ಲ- ನ ಶಕ್ತಾಃ (ಅಥವಾ) ನ ಶಕ್ತಾ ಆಸನ್. ಕಲಿಯುತ್ತಿದ್ದರು - ಶಿಕ್ಷನ್ತೇ ಸ್ಮ (೭೬), ಮಿಕ್ಕವರಲ್ಲಿ - ಶಿಷ್ಟೇಷು (೬೨), ಕನ್ನಡವನ್ನು ಬಲ್ಲವರು - ಕನ್ನಡಜ್ಞಾಃ, ಆಗಿನಕಾಲದಲ್ಲಿ - ತದಾನೀಮ್ (ಅ), ಫೀಜು-ಮಾಸಭೃತಿಃ (೬೫), ಈಗಿನ ಹಾಗೆ-ಇದಾನೀಮಿವ (ಅ), ಸಂಬಳ-ವೇತನಮ್ (೬೨), ಕೊಡಲ್ಪಡುತ್ತಿರಲಿಲ್ಲ - ನ ದೀಯತೇ ಸ್ಮ, ಎರಡು ಸಲ - ದ್ವಿಃ (ಅ), ಕೊಡುತ್ತಿದ್ದರು - ಅಯಚ್ಛನ್ (೭೭), ಶುಶ್ರೂಷೆಯನ್ನು ಮಾಡುತ್ತಿದ್ದರು- ಶುಶ್ರೂಷಾಮ್ ಅಕುರ್ವನ್ (೬೪).

೬

ಇಂಗ್ಲಿಷರು - ಆಙ್ಗ್ಲಾಃ (೬೨), ಆಳುತ್ತಿದ್ದಾರೆ - ರಾಜ್ಯಂ ಕುರ್ವನ್ತಿ, ಸೇತುವಿನವರೆಗೂ - ಸೇತುಪರ್ಯನ್ತಮಪಿ (ಅ), ಆಳ್ವಿಕೆ - ಪ್ರಭುತ್ವಮ್ (೭೨), ಎಲ್ಲಾ ಕಡೆಯಲ್ಲಿ - ಸರ್ವತ್ರ (ಅ), ರಸ್ತೆ- ರಥ್ಯಾ (೬೪), ರೈಲು ಮಾರ್ಗ- ಧೂಮಶಕಟೀ ಮಾರ್ಗ: (೬೨), ಹೊಂದುತ್ತಲಿದೆ- ಗಚ್ಛತಿ (೭೬), ಮಹಮ್ಮದೀಯರು - ಮಹಮ್ಮದೀಯಾಃ (೬೨), ಹಿಂದುಗಳು- ಹಿಂದವಃ (೬೫), ಕ್ರಿಶ್ಚಿಯನ್ನರು - ಕ್ರಿಸ್ತೀಯಾಃ (೬೨), ಪಾರ್ಸಿಗಳು- ಪಾರಸೀಕಾಃ (೬೨), ಪರಸ್ಪರವಾಗಿ - ಪರಸ್ಪರಮ್(ಅ), ಉಂಟುಮಾಡಲ್ಪಡಬೇಕು- ಕಾರ್ಯಾ, ಸಂಪಾದನೀಯಾ (೬೪), ಇದರಂತೆಯೇ - ಏವಮೇವ (ಅ) ತೋರಿಸಲ್ಪಡಬೇಕು-ಪ್ರದರ್ಶನೀಯಃ (೬೨), ಒಳ್ಳೆಯದು - ಕಲ್ಯಾಣಂ (೬೨)

೭

ಎಮ್ಮೆ - ಮಹಿಷೀ (೬೪), ಬಹಳ ಹಾಲು - ಪ್ರಭೂತಂ ದುಗ್ಧಮ್ (೬೨), ಗಟ್ಟಿ-ಘನ (೬೩), ಎತ್ತಿಗಿಂತ - ವೃಷಭಾತ್ (೭೨), ಹೆಚ್ಚು ಬಲವುಳ್ಳದ್ದು - ಬಲೀಯಾನ್, ಹೊಲ - ಕ್ಷೇತ್ರಮ್ (೬೨), ಉಳುತ್ತದೆ- ಕೃಷತಿ, ಕರ್ಷತಿ (೭೬), ಗಾಡಿ - ಶಕಟಃ (೬೨), ಹೊರುತ್ತದೆ-ವಹತಿ (೭೬) 'ಹುಲಿ-ವ್ಯಾಘ್ರಃ (೬೨), ಅವು ಹೆದರುವದಿಲ್ಲ - ತೇ ನ ಬಿಭ್ಯತಿ, ತೇ ನ ಭೀತಾಃ, ಬಲವಾದ - ಸುದೃಢಾ (೭೪), ಕೊಂಬು- ಶೃಙ್ಗಮ್ (೬೨).

೮

ಹಗಲುರಾತ್ರಿಗಳು-ಅಹೋರಾತ್ರಾಣಿ (೬೨), ಹಗಲು-ಅಹಃ, ದಿವಸಃ (೬೨), ಆ ಪ್ರಕಾಶವು ಇಲ್ಲದಿದ್ದರೆ-ತಸ್ಮಿನ್ (೭೧), ಪ್ರಕಾಶೇ (೬೨), ಅಸತಿ (೬೯), ತಸ್ಯ ಪ್ರಕಾಶಸ್ಯ ಅಭಾವೇ, ಎಲ್ಲೆಲ್ಲಿಯೂ - ಸರ್ವತ್ರ (ಅ), ಕತ್ತಲೆ, ಅನ್ಧಕಾರಃ (೬೨), ಆಗುವದಿಲ್ಲ - ನ ಶಕ್ಯತೇ (೭೬), ಆದ್ದರಿಂದ - ತಸ್ಮಾತ್ (೭೧), ಅತಃ (ಅ), ಹೊತ್ತಿಸುತ್ತಾರೆ - ಪ್ರಜ್ವಾಲಯನ್ತಿ (೭೬), ಉರಿಯುವದಿಲ್ಲ- ನ ಜ್ವಲತಿ (೭೬), ಗಾಳಿಯ ಹೊಡೆತಕ್ಕೆ - ವಾತಾಹತ್ಯಾ, ಆರಿಹೋಗುತ್ತದೆ-ನಿರ್ವಾಣೋ ಭವತಿ, ಶಾನ್ತೋ ಭವತಿ.

೯

ಮುದುಕಿ-ವೃದ್ಧಾ (೬೪), ಕಂಡನು ಅಪಶ್ಯತ್ (೭೭), ಹೊಲದ ಕೆಲಸದಲ್ಲಿ-ಕ್ಷೇತ್ರ ಕರ್ಮಣಿ, ಕ್ಷೇತ್ರೋದ್ಯೋಗೇ (೬೨), ಕೇಳಿದನು- ಅಪೃಚ್ಛತ್ (೭೭), ಜತೆಗಾತಿ-ಸಖೀ (೬೪), ಹೋಗಿದ್ದಾರೆ - ಗತಾಃ (೬೪), ಹಾಗಾದರೆ - ತರ್ಹಿ -(ಅ), ಏತಕ್ಕೆ - ಕುತಃ (ಅ),

ಹೋಗಲಿಲ್ಲ - ನಾಗಚ್ಛತ್ (೭೭), ಅವನ ದರ್ಶನದಿಂದ ಏನು - ಕಿಂ ತಸ್ಯ ದರ್ಶನೇನ ? ಕಳೆದುಕೊಳ್ಳಲಾರೆ - ನಾಶಯಿತುಂ ನೋತ್ಸಹೇ (೭೬), ನುಡಿದಳು- ಉಕ್ತವತೀ (೬೮), ನಾಣ್ಯವನ್ನು - ನಾಣಕಮ್ (೬೨), ಇಟ್ಟನು-ನ್ಯದಧಾತ್, ಬೇಗನೆ-ಶೀಘ್ರಂ, ಹಿಂತಿರುಗಿ ಬರುವವರು- ಪರಾವರ್ತನ್ತೇ (೭೬), ತಾನೇ - ಸ್ವಯಮ್ (ಅ), ತನ್ನ ಬರುವಿಕೆಯ ಜ್ಞಾಪಕವಾಗಿ - ಸ್ವಾಗಮನಜ್ಞಾಪನಾರ್ಥಮ್ (ಅ). ತಿಳಿಸು - ನಿವೇದಯ (೭೮), ಹೀಗೆಂದು ಹೇಳಿ - ಇತ್ಯುಕ್ತ್ವಾ (ಅ).

೧೦

ಕುರುಬರ ಹುಡುಗನು - ಅವಿಪಾಲಬಾಲಃ (೬೨), ಕುರಿಯ ಮಂದೆ - ಅವಿಕುಲಮ್ (೬೨), ಪಶುಯೂಥಃ (೭೨), ಕಾಯುತ್ತಿದ್ದನು- ಪರಿಪಾಲಯತಿ ಸ್ಮ(೭೬), ಒಂದು ದಿನ - ಕಸ್ಮಿಂಶ್ಚಿತ್ ದಿನೇ, ಏಕಸ್ಮಿನ್ ದಿವಸೇ, ವಿನೋದಕ್ಕಾಗಿ- ವಿನೋದಾರ್ಥಮ್ (ಅ), ತೋಳ-ವೃಕಃ (೬೨), ಬಂತು- ಆಗತಃ (೬೨), ಕೂಗಿಕೊಂಡನು- ಉತ್ಕ್ರೋಶತಿ ಸ್ಮ (೭೬), ಹಳ್ಳಿಯಲ್ಲಿ ಜನರು - ಗ್ರಾಮೇ ಜನಾಃ, ಗ್ರಾಮೀಣಾಃ ಅಯ್ಯೋ - ಅಹೋ ಬತ ! ಸಂಕಟದಲ್ಲಿ ಬಿದ್ದಿದ್ದಾನೆ - ಕಷ್ಟಂ ಗತೋಽಸ್ತಿ, ದುಃಖಂ ಗತಃ, ದೊಣ್ಣೆ ಮುಂತಾದವುಗಳನ್ನು - ಲಗುಡಾದಿಕಮ್ (೬೨), ಬಂದರು - ಆಗತಾಃ, ನಕ್ಕರು - ಅಪಹಸತಿ ಸ್ಮ, ಗದ್ದಲಮಾಡ ಬೇಡಿರಿ- ಕೋಲಾಹಲಂ ಮಾ ಕುರುತ, ಹೆದರಿ ಓಡುತ್ತವೆ- ಭೀತಾಃ ಪಲಾಯನ್ತೇ (೭೬).

ಮತ್ತೊಂದು ಸಲ-ಪುನರಪಿ, ನಿಜವಾಗಿಯೇ- ಸತ್ಯಮೇವ, ಈ ಹುಡುಗನಿಗೆ ದಯೆಯು ತೋರಿಸಲ್ಪಡತಕ್ಕದ್ದಲ್ಲ-ಅಸ್ಮಿನ್ ಬಾಲಕೇ ನ ದಯಾ ಪ್ರದರ್ಶನೀಯಾ, ಬಲು ಗಟ್ಟಿಯಾಗಿ - ಅತ್ಯುಚ್ಚೈಃ, ಕಿರಿಚಿಕೊಂಡನು-ಆಕ್ರೋಶತ್, ಆದರೂ ಯಾರೂ ಅಲ್ಲಿಗೆ ಬರಲಿಲ್ಲ- ತದಾಪಿ ಕಶ್ಚಿದಪಿ ತತ್ರ ನಾಗತಃ, ಕೊಂದುಹಾಕಿತು- ಮಾರಯತಿ ಸ್ಮ ಘಾತಯತಿ ಸ್ಮ.

೧೧

ಪ್ರೇಮದ ತಮ್ಮನಾದ ರಂಗನಾಥನಿಗೆ -ಪ್ರಿಯಾನುಜಾಯ ರಙ್ಗನಾಥಾಯ, ನಾವೆಲ್ಲರೂ ಕ್ಷೇಮ- ಸರ್ವೇ ವಯಂ ಕುಶಲಿನಃ (೬೮), ಆಗಿಂದಾಗ್ಗೆ - ಕಾಲೇ ಕಾಲೇ (೬೨), ವಾರಂ ವಾರಂ ಕೇಳಿ -ಶ್ರುತ್ವಾ (ಅ), ಬರೆಯುತ್ತಾಬರುವದು- ಲೇಖನೀಯಮ್ (೬೨), ಸಂತೋಷಪಟ್ಟನು-ಸಂತುಷ್ಟಃ (೬೨), ನಡತೆ-ವರ್ತನಮ್ (೬೨), ನಂಬುತ್ತೇನೆ- ವಿಶ್ವಸ್ತೋಽಸ್ಮಿ, ಚಿತ್ತವಿಟ್ಟು- ಸಾವಧಾನಮ್ (ಅ), ಓದುವೆಯಾದರೆ- ಪಠಸಿ ಚೇತ್, ನಮ್ಮ ಕುಲಕ್ಕೆಲ್ಲ- ಅಸ್ಮತ್ಕುಲಸ್ಯೈವ ಸರ್ವಸ್ಯ, ಒಳ್ಳೆಯ ಹೆಸರು-ಕೀರ್ತಿಃ, ಯಾವ ಸಂಶಯವೂ ಇಲ್ಲ- ನ ಕೋಽಪಿ ಸಂಶಯಃ. ಕಾಪಾಡಲಿ- ಪರಿಪಾಲಯತು.

೧೨

ಮೋಡಗಳು-ಮೇಘಾಃ (೬೨), ಮಳೆಗರೆಯಲಿ-ವರ್ಷನ್ತು (೭೮), ಬೆಳೆಯಲಿ- ರೋಹನ್ತು (೭೮), ಈ ದೇಶದಲ್ಲಿ ತೊಂದರೆಯು ನಾಶವಾಗಲಿ-ಅಸ್ಮಿನ್ ದೇಶೇ ಕ್ಷೋಭೋ ನಶ್ಯತು, ಬಡವರು - ದೀನಾಃ, ಅಕಿಂಚನಾಃ (೬೨), ಹಣವಂತರಾಗಲಿ-ಸಧನಾಃ ಸನ್ತು, ಜನರೆಲ್ಲರೂ ಬಹುಕಾಲ ಬದುಕಲಿ-ಜನಾಃ ಸರ್ವೇ ದೀರ್ಘಕಾಲಂ ಜೀವನ್ತು (೭೮), ಆದರಿಸಲ್ಪಟ್ಟದ್ದಾಗಲಿ- ಆದ್ರಿಯತಾಮ್.